ಬೆಂಗಳೂರು ಸಂಪುಟ: 16 ಸಂಚಿಕೆ: 53 ಪುಟ: 06 ಶನಿವಾರ 18-01-2025 ₹ 3 Mail:mussanje2010@gmail.com www.mussanjenews.com

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB) Executive Editor: L P Babu Honourary Editor: Venkatesh



ಬಾಕ್ ಆಫೀಸ್ ರಾಣಿ ಮಂದಣ್ಣ

ಗಂಡನ ಬಿಟ್ಟು ಭಾರತಕ್ಕೆ ಪಿಂಕಿ ಬಂದಿದ್ಯಾಕೆ?

'ರಾಶಿ' ಈವಾಗ ಸಖತ್ ಬೋಲ್ಡ್ ಪುಟ 6

## ಗಾಂಧಿ ಪ್ರತಿಮೆ ಅನಾವರಣ ಕಾರ್ಯಕ್ರಮಕ್ಕೆ ಎಲ್ಲಾ ಪಕ್ಷದ ಶಾಸಕರ ಜತೆಗೆ ಸ್ವಾತಂತ್ರ್ಯ ಹೋರಾಟಗಾರರಿಗೂ ಆಹ್ವಾನ: ಡಿಕೆಶಿ

# ಸಿಎಂ ವಿರುದ್ಧ ಪಿತೂರಿ

**ಬೆಳಗಾವಿ:** ಮುಡಾ ಪ್ರಕರಣದಲ್ಲಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ರಾಜಕೀಯ ಪಿತೂರಿ ಮಾಡಲಾಗಿದೆ. ಸಿದ್ದರಾಮಯ್ಯ ಅವರಾಗಲೀ ಅಥವಾ ಅವರ ಧರ್ಮಪತ್ನಿಯವರಾಗಲೀ ಭಾಗಿಯಾಗಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಹೇಳಿದ್ದಾರೆ.

ಬೆಳಗಾವಿಯ ಸುವರ್ಣಸೌಧ ಗಾಂಧಿ ಪ್ರತಿಮೆ ಬಳಿ ನಡೆಯಲಿರುವ ಕಾರ್ಯಕ್ರಮದ ಪೂರ್ವ ಸಿದ್ಧತೆಗಳ ಪರಿಶೀಲನೆ ನಡೆಸಿದ ನಂತರ ಮಾತನಾಡಿದ ಅವರು, ಯಾವುದೇ ಪ್ರಕರಣವಾದರೂ ಅದಕ್ಕೆ ಅದರದ್ದೇ ಆದ ರೀತಿ-ನೀತಿಗಳು ಇರುತ್ತವೆ.

ಇಡಿ ತನಿಖೆಯಾದರೂ ಸರಿಯೇ ಅಥವಾ ಇನ್ಯಾವುದೇ ತನಿಖಾ ಸಂಸ್ಥೆಯೇ ಆಗಲಿ ಅವರದ್ದೇ ಆದ ನಿಯಮಗಳು ಇರುತ್ತವೆ. ಆ ದಿಕ್ಕಿನಲ್ಲಿಯೇ ಪ್ರಕರಣದ ತನಿಖೆ ನಡೆಯುತ್ತಿರುತ್ತದೆ ಎಂದು ಹೇಳಿದರು;

ಮುಡಾದಲ್ಲಿ ಅಕ್ರಮ ನಡೆದಿದೆಯೇ ಇಲ್ಲವೇ ಎಂಬುದು ಸಂಪೂರ್ಣ ತನಿಖೆಯ ನಂತರ ಹೊರಬೀಳುವ ಸತ್ಯ.



ಅದು ನ್ಯಾಯಾಲಯದಲ್ಲಿ ವಿಚಾರಣೆ ನಡೆದ ಬಳಿಕವಷ್ಟೇ ಇತ್ಯರ್ಥವಾಗುವಂತಹದ್ದೇ ಹೊರತು ನಾವು ನೀವು ವಿಚಾರಣೆ ನಡೆಸಿ ಇತ್ಯರ್ಥಗೊಳಿಸುವಂತಹದ್ದಲ್ಲ ಎಂದರು.

ನಾನು ಇಡಿ ತನಿಖೆ ನೋಡಿದ್ದೇನೆ. ಈ ಪ್ರಕರಣದ ಬಗ್ಗೆ ನಾನು ಹೆಚ್ಚೇನೂ ಹೇಳುವುದಿಲ್ಲ. ಮುಖ್ಯಮಂತ್ರಿಗಳು ಹಾಗೂ ಅವರ ಕುಟುಂಬದ ವಿರುದ್ಧ ರಾಜಕೀಯ ಪಿತೂರಿ ನಡೆಯುತ್ತಿದೆ. ಮುಖ್ಯಮಂತ್ರಿಗಳಾಗಲಿ, ಅವರ ಧರ್ಮಪತ್ನಿ ಅವರಾಗಲಿ ಯಾವುದೇ ಅಕ್ರಮದಲ್ಲಿ ಭಾಗಿಯಾಗಿಲ್ಲ. ಈ ವಿಚಾರ ಬಿಟ್ಟು ರಾಜ್ಯದ ವಿಚಾರದ ಬಗ್ಗೆ ಗಮನಹರಿಸಿ" ಎಂದು ಅವರು ತಿಳಿಸಿದರು.

**ಎಲ್ಲಾ ಪಕ್ಷದ ಶಾಸಕರ ಜತೆಗೆ ಸ್ವಾತಂತ್ರ್ಯ ಹೋರಾಟಗಾರರಿಗೂ ಆಹ್ವಾನ:** ಇನ್ನೂ "ಸುವರ್ಣಸೌಧ ಗಾಂಧಿ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಎಲ್ಲಾ ಪಕ್ಷದ ಶಾಸಕರ ಜತೆಗೆ ಸ್ವಾತಂತ್ರ್ಯ ಹೋರಾಟಗಾರರಿಗೂ ಆಹ್ವಾನ ನೀಡುವ ಇದರ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳಿಗೆ ವಹಿಸಲಾಗಿದೆ" ಎಂದು ಡಿಸಿಎಂ ತಿಳಿಸಿದರು. ಪುಟ 2

## ಮುಡಾ ಹಗರಣ: ಕೋಕನಟ್-ಕೋಡ್‌ವರ್ಡ್ ಬಳಕೆ




ಮೈಸೂರು: ಜಾರಿ ನಿರ್ದೇಶನಾಲಯ (ಇಡಿ) ಅಧಿಕಾರಿಗಳು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಅಕ್ರಮಕ್ಕೆ ಸಂಬಂಧಿಸಿದಂತೆ 300 ಕೋಟಿ ರೂ. ಮೌಲ್ಯದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿರುವ ಬೆನ್ನಲ್ಲೇ? ಕೋಕನಟ್? ಕೋಡ್‌ವರ್ಡ್ ಬಳಸಿ ಅಕ್ರಮ ವ್ಯವಹಾರಗಳನ್ನು ನಡೆಸುತ್ತಿರುವುದು ಬೆಳಕಿಗೆ ಬಂದಿದೆ. ಇಡಿ ಅಧಿಕಾರಿಗಳು ಬಿಲ್ಡರ್ ಜಯರಾಮ್ ಮನೆ ಮೇಲೆ ದಾಳಿ ನಡೆಸಿದ್ದರು. ಸತತ ಮೂರು ದಿನ ಇಡಿ ಅಧಿಕಾರಿಗಳು ದಾಳಿ ನಡೆಸಿದಾಗ ಈತನ ಮನೆಯಲ್ಲಿ ಏನಿತ್ತು ಎನ್ನುವ ಅನುಮಾನ ಎಲ್ಲರನ್ನು ಕಾಡುತ್ತಿತ್ತು. ಆದರೆ ಈಗ ಸಿಕ್ಕಿರುವ ಮಾಹಿತಿ ಪ್ರಕಾರ ಮುಡಾ ಅಕ್ರಮದ ಕಿಂಗ್‌ಪಿನ್ ಪುಟ 2



ಕಾರ್ಯನಿರತ ಪತ್ರಕರ್ತರ ಸಂಘ ತುಮಕೂರಿನ ಸಿದ್ಧಾರ್ಥ ತಾಂತ್ರಿಕ ವಿಶ್ವ ವಿದ್ಯಾಲಯದಲ್ಲಿ ಆಯೋಜಿಸಿದ್ದ ರಾಜ್ಯ ಪತ್ರಕರ್ತರ 39ನೇ ರಾಜ್ಯ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಗೃಹ ಸಚಿವ ಜಿ.ಪರಮೇಶ್ವರ್, ಸಹಕಾರಿ ಸಚಿವ ಕೆ.ಎನ್.ರಾಜಣ್ಣ, ರಾಜ್ಯ ಸರಕಾರದ ದೆಹಲಿ ಪ್ರತಿನಿಧಿ ಟಿ.ಬಿ.ಜಯಚಂದ್ರ, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಸೇರಿ ಜಿಲ್ಲೆಯ ಶಾಸಕರುಗಳು ಹಾಗೂ ಹಲವು ಪ್ರಮುಖರು ಮತ್ತು ಜಿಲ್ಲಾಡಳಿತದ ಅಧಿಕಾರಿಗಳು ಉಪಸ್ಥಿತರಿದ್ದರು.

## ವರದಿಗಾರಿಕೆ ವೃತ್ತಿಪರವಾಗಿದ್ದಾಗ ಸಮಾಜದ ಪರವಾಗಿರುತ್ತದೆ: ಸಿಎಂ ಸಿದ್ದರಾಮಯ್ಯ

**ತುಮಕೂರು:** ವರದಿಗಾರಿಕೆ ವೃತ್ತಿಪರವಾಗಿದ್ದಾಗ ಸಮಾಜದ ಪರವಾಗಿರುತ್ತದೆ. ಪತ್ರಿಕಾ ವೃತ್ತಿ ಉದ್ಯಮ ಆದ ಕೂಡಲೇ ಇದರ ಉದ್ದೇಶಗಳು ಬದಲಾಗುತ್ತವೆ.

ವಸ್ತು ಸ್ಥಿತಿ ಜೊತೆಗೆ ಮೌಲ್ಯಧಾರಿತ ಸುದ್ದಿ ಇಂದಿನ ಅಗತ್ಯ. ಊಹಾ (ಕಲ್ಪಿತ) ಪತ್ರಿಕೋದ್ಯಮ ಅಪಾಯಕಾರಿ ಎಂದು ಸಿ.ಎಂ. ಸಿದ್ದರಾಮಯ್ಯ ಅವರು ಕರೆ ನೀಡಿದರು.

ಕಾರ್ಯನಿರತ ಪತ್ರಕರ್ತರ ಸಂಘ ತುಮಕೂರು ಸಿದ್ಧಾರ್ಥ ತಾಂತ್ರಿಕ ವಿಶ್ವ ವಿದ್ಯಾಲಯದಲ್ಲಿ ಆಯೋಜಿಸಿದ್ದ ರಾಜ್ಯ ಪತ್ರಕರ್ತರ 39ನೇ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

ಸಂವಿಧಾನದ ಆಶಯಗಳನ್ನು ಈಡೇರಿಸುವುದೇ ಪತ್ರಿಕಾ ವೃತ್ತಿಯ ಕರ್ತವ್ಯ. ಧ್ವನಿ ಇಲ್ಲದವರ ಪರವಾಗಿ ವೃತ್ತಿ ಇದ್ದಾಗ ಸಮಾಜಕ್ಕೆ ಅನುಕೂಲ. ಸಮಾಜದಲ್ಲಿರುವ ಮೇಲು, ಕೆಳ




ಜಾತಿಗಳ ನಡುವಿನ ತಾರತಮ್ಯ ಮತ್ತು ಅಸಮಾನತೆ ಕೊನೆಯಾಗುವ ದಿಕ್ಕಿನಲ್ಲಿ ಕರ್ತವ್ಯ ನಿರ್ವಹಿಸಿ ಎಂದು ಕರೆ ನೀಡಿದರು.

ಈಗ ವೇದಿಕೆಯಲ್ಲಿ ಬಿಡುಗಡೆಯಾದ ನಿಮ್ಮದೇ ವಿಶೇಷ ಸಂಚಿಕೆ ನೀವೂ ಓದಿ. ಪತ್ರಕರ್ತರ ಕರ್ತವ್ಯ , ಸವಾಲುಗಳ ಪಟ್ಟಿ ಇದೆ. ಅದನ್ನು ಓದಿ, ಪಾಲಿಸಿ ಎಂದರು,

ಜನ ಪತ್ರಕರ್ತರ ಮೇಲೆ ನಂಬಿಕೆ ಇಟ್ಟಿದ್ದಾರೆ. ಮೌಢ್ಯದ ಸುದ್ದಿಗಳನ್ನು , ಚರ್ಚೆಗಳನ್ನು ನಡೆಸಿ ನೋಡುಗರ, ಓದುಗರ ದಾರಿ ತಪ್ಪಿಸಬೇಡಿ ಎಂದರು. ವಿಜ್ಞಾನ, ತಂತ್ರಜ್ಞಾನದ ವೇಗದಲ್ಲೇ ಪತ್ರಿಕೋದ್ಯಮ ಬೆಳೆಯುತ್ತಿದೆ. ಇದು ಅವಕಾಶ , ಸವಾಲು ಎರಡೂ ಆಗಿದೆ ಎಂದರು. ದೇಶದ ಪ್ರತಿಯೊಬ್ಬರೂ ಸಂವಿಧಾನ ಓದಬೇಕು. ಆಗ ಹಕ್ಕು-ಕರ್ತವ್ಯ ಎರಡೂ ಗೊತ್ತಾಗುತ್ತದೆ. ನಿಮ್ಮದು ಪುಟ 2

## ಸದನದಲ್ಲಿ ನಡೆದಿದ್ದು ಸದನದಲ್ಲೇ ಮುಗಿಸಿ

**ಹುಬ್ಬಳ್ಳಿ:** ಸಿಟಿ ರವಿ ಅಶ್ಲೀಲ ಪದ ಬಳಕೆ ಮಾಡಿದ ವಿಡಿಯೋ ತನಿಖೆಯಲ್ಲಿ ಪತ್ತೆ ವಿಚಾರವಾಗಿ ಇದುವರೆಗೂ ನನಗೆ ಯಾವ ಮಾಹಿತಿ ಇಲ್ಲ ನನಗೆ ಈ ವಿಷಯದಲ್ಲಿ ಅಧಿಕೃತ ಮಾಹಿತಿ ಬರಬೇಕು ಎಂದು ಸಭಾಪತಿ ಬಸವರಾಜ್ ಹೊರಟ್ಟಿ ಹೇಳಿದರು. ಹುಬ್ಬಳ್ಳಿಯಲ್ಲಿ ಮಾತನಾಡಿದ ಅವರು, ಈ ಕುರಿತು ನಾನು ವಿಧಾನ ಪರಿಷತ್ ಕಾರ್ಯದರ್ಶಿಯವರಿಗೆ ಹೇಳುತ್ತೇನೆ, ಅವರಿಂದ ಮಾಹಿತಿ ಪಡೆದು ಮಾತಾಡುತ್ತೇನೆ, ಯಾವ ವಿಚಾರವೂ ನನ್ನ ಗಮನಕ್ಕೆ ಬಂದಿಲ್ಲ. ಒಂದು ವಾರದಿಂದ ನಾನು ಮನೆಯಲ್ಲಿ ಇದ್ದೇನೆ. ಗೃಹ ಸಚಿವ ಪರಮೇಶ್ವರಗೆ ನಾನೇ ನಿನ್ನೆ ಕಾಲ್ ಮಾಡಿದ್ದೆ, ವಾಪಸ್ ಅವರು ಕಾಲ್ ಮಾಡಿಲ್ಲ, ನಾನು ಸುದುದ್ದೇಶದಿಂದ ಪತ್ರ ಬರೆದಿದ್ದೆ ಎಂದು ಹೇಳಿದರು. ಪುಟ 2

## ಅನುದಾನದ ಸದ್ಬಳಕೆಗೆ ಸಲಹೆ

**ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕರ್ನಾಟಕದ ವಿಕಾಸಕ್ಕೆ ಆದ್ಯತೆ ನೀಡುತ್ತಿದ್ದೇವೆ. ಈಗಾಗಲೇ ಬಿಡುಗಡೆ ಮಾಡಿರುವ ಅನುದಾನದ ಸದ್ಬಳಕೆ ಆಗಬೇಕಿದೆ ಎಂದು ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರು ತಿಳಿಸಿದ್ದಾರೆ. ಬೆಂಗಳೂರಿಗೆ ಬಂದಿರುವ ಕೇಂದ್ರ ಸಚಿವರು ಇಂದು ರಾಜ್ಯದ ಕೃಷಿ, ಗ್ರಾಮೀಣಾಭಿವೃದ್ಧಿ, ಕಂದಾಯ ಸಚಿವರ ಜೊತೆ ಕೇಂದ್ರ ಸರಕಾರದ ಯೋಜನೆಗಳ ಸಾಧನೆಯನ್ನು ಪರಿಶೀಲಿಸಿದರು. ನಂತರ ಮಾತನಾಡಿದ ಶಿವರಾಜ್ ಸಿಂಗ್ ಚೌಹಾಣ್ ಅವರು ಅನುದಾನ ಕೇಳದೇ ಇದ್ದರೂ ನಾವೇ ಘೋಷಣೆ ಮಾಡಿದ್ದೇವೆ. ಪುಟ 2

## ಬಿಜೆಪಿಯವರಿಗೆ 'ಮುಡಾ' ತಿರುಗುಬಾಣ

**ಬೆಂಗಳೂರು:** ಮುಡಾ ಹಗರಣದಲ್ಲಿ ಬಿಜೆಪಿಯವರು ಎಷ್ಟೇ ಆಳಕ್ಕೆ ಹೋದರೂ ಅವರಿಗೇ ತಿರುಗಬಾಣ ವಾಗಲಿದ್ದು, ಮೂಗು ಕೊಯ್ದುಕೊಳ್ಳಲಿದ್ದಾರೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್‌ಖರ್ಗೆ ತಿರುಗೇಟು ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಡಾ ಹಗರಣದಲ್ಲಿ ದಾಳಿ ನಡೆಸಿ ಪತ್ರಿಕಾ ಪ್ರಕಟಣೆ ನೀಡಿರುವ ಜಾರಿ ನಿರ್ದೇಶನಾಲಯದ ಬಗ್ಗೆ ಪ್ರತಿಕ್ರಿಯಿಸಿದರು.ಕಳೆದ 10-15 ವರ್ಷಗಳಿಂದ ನಗರಾಭಿವೃದ್ಧಿ ಇಲಾಖೆಯಲ್ಲಿ ಏನು ನಡೆದಿದೆ ಎಂಬುದರ ತನಿಖೆಯಾಗಬೇಕು ಎಂದು ನಾವು ಮೊದಲಿನಿಂದಲೂ ಹೇಳುತ್ತಲೇ ಬಂದಿದ್ದೇವೆ. ಆದಾಯ ತೆರಿಗೆ ಜಾರಿ ನಿರ್ದೇಶನಾಲಯದ ತನಿಖೆಗಳಾಗಬೇಕು ಎಂದು ಹಲವು ಬಾರಿ ಒತ್ತಾಯಿಸಿದ್ದೇವೆ. ಏನೇ ನಡೆದರೂ ಎಲ್ಲವೂ ಕಾನೂನು ಪ್ರಕಾರವೇ ನಡೆಯಲಿದೆ ಎಂದರು.

ಯಾವುದಾದರೂ ಕಾನೂನು ಬಾಹಿರವಾಗಿದ್ದರೂ ಅದರ ಕುರಿತು ಕ್ರಮಗಳಾಗುತ್ತವೆ. ಮುಡಾಗೆ ಬಿಜೆಪಿ, ಜೆಡಿಎಸ್‌ನ ಪಕ್ಷದವರೂ ಕೂಡ ಸದಸ್ಯರಿದ್ದರು. ಅವರ ಆಡಳಿತದಲ್ಲಿ ಏನಾಗಿದೆ ಎಂದು ಜನರಿಗೆ ಗೊತ್ತಾಗಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಹೇಳಿದ್ದಾರೆ. ಯಾವುದೇ ತನಿಖೆಗೆ ಅಡ್ಡಿಪಡಿಸುವುದಿಲ್ಲ. ಆದಾಯ ತೆರಿಗೆ, ಜಾರಿ ನಿರ್ದೇಶನಾಲಯ, ರಾಜ್ಯಪಾಲರ ಕಚೇರಿ ಪ್ರತಿನಿಧಿಗಳು ಯಾರನ್ನು ಬೇಕಾದರೂ ಕಳುಹಿಸಲಿ ಎಂದು ಹೇಳಿದರು.



ರಾಜ್ಯದಲ್ಲಿ ಸಚಿವರು ತಮಗೆ ವಹಿಸಿರುವ ಜವಾಬ್ದಾರಿಯನ್ನು ಅರ್ಥ ಮಾಡಿಕೊಂಡು ಬಾಯಿ ಮುಚ್ಚಿ ಕೆಲಸ ಮಾಡಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಎಚ್ಚರಿಕೆ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್ ಖರ್ಗೆ, ಈ ಹಿಂದೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿ ಅವರು ಹೇಳಿದ್ದನ್ನೇ ಎಐಸಿಸಿ ಅಧ್ಯಕ್ಷರು ಪುನರುಚ್ಚರಿಸಿದ್ದಾರೆ.

ಯಾವುದೇ ಬದಲಾವಣೆಗಳಿದ್ದರೂ ಪಕ್ಷ ಸಂಘಟನೆಯ ನೀಲನಕ್ಷೆ ಕುರಿತಂತೆ ಯಾವುದೇ ವಿಚಾರಗಳಾದರೂ ಅದನ್ನು ಹೈಕಮಾಂಡ್ ನಿರ್ಧರಿಸುತ್ತದೆ. ಜನ ಅಧಿಕಾರ ಕೊಟ್ಟಿದ್ದಾರೆ. ಅದನ್ನು ಬಳಸಿ ಎಲ್ಲರಿಗೂ ಅವಕಾಶ ನೀಡಲಾಗಿದೆ. ಅದರಂತೆ ಜನರ ಸೇವೆ ಮಾಡಬೇಕು ಎಂದು ಅಧ್ಯಕ್ಷರು ಮತ್ತೊಮ್ಮೆ ಹೇಳಿದ್ದಾರೆ ಎಂದರು.

ತೂತು ಒಲೆ ಕೆಡಿಸುತ್ತದೆ, ಮಾತು ಮನೆ ಕೆಡಿಸುತ್ತದೆ ಎಂಬ ಗಾದೆಯಂತೆ ಬಾಯಿಗೆ ಬಂದಂತೆ ಮಾತನಾಡುವುದು ಸರಿಯಲ್ಲ. ಯಾರ ಬಾಯಿಗೂ ಬೀಗ ಹಾಕಲಾಗುವುದಿಲ್ಲ. ಎಲ್ಲರೂ ವಿವೇಚನೆ ಅನುಸಾರ ನಡೆದುಕೊಳ್ಳಬೇಕು. ಆ ಸೂಕ್ಷ್ಮತೆಯನ್ನು ಅರಿತು ನಡೆಯಬೇಕು. ಹಿಂಬಾಲಕರಿಗೆ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಟಿಕೆಟ್ ಕೊಡಿಸಲು, ಶಾಸಕರಾಗಲು, ವಿಧಾನಪರಿಷತ್ ಸದಸ್ಯರಾಗಲು, ಪುಟ 2

## ಜ.31ರಿಂದ ಕೇಂದ್ರ ಬಜೆಟ್: ಫೆ.1ರಂದು ಆಯವ್ಯಯ ಮಂಡನೆ



**.ನವದೆಹಲಿ:** ಸಂಸದೀಯ ಬಜೆಟ್ ಅಧಿವೇಶನ ಜನವರಿ 31ರಿಂದ ಆರಂಭವಾಗಲಿದ್ದು, ಏಪ್ರಿಲ್ 4ರವರೆಗೆ ನಡೆಯಲಿದೆ. ಫೆ. 1ರಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್ ಮಂಡಿಸಲಿದ್ದಾರೆ. ಬಜೆಟ್ ಅಧಿವೇಶನದ ಮೊದಲ ದಿನ ಜನವರಿ 31ರಂದು ಲೋಕಸಭೆ ಮತ್ತು ರಾಜ್ಯಸಭೆಯ ಜಂಟಿ ಸಂಸತ್ ಸದನವನ್ನು ಉದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಷಣೆ ಮಾಡಲಿದ್ದು, ಆರ್ಥಿಕ ಸಮೀಕ್ಷೆ ಮಂಡನೆ ಕೂಡ ಆಗಲಿದೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಸಂಸದೀಯ ಸಚಿವ ಕಿರಣ್ ರಿಜುಜ್, ಗೌರವಾನ್ವಿತ ರಾಷ್ಟ್ರಪತಿಗಳು 2025ರ ಜನವರಿ 31ರಂದು ಜಂಟಿ ಸದನ ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. 2025-26ನೇ ಸಾಲಿನ ಕೇಂದ್ರ ಬಜೆಟ್‌ಅನ್ನು ಪುಟ 2

## ಭಂಡತನ ಬಿಟ್ಟು ರಾಜೀನಾಮೆ ನೀಡಿ

**ಬೆಂಗಳೂರು:** ಮೈಸೂರು ಮುಡಾ ಹಗರಣ ಸಂಬಂಧ ಮುಖ್ಯಮಂತ್ರಿಗಳು ಭಂಡತನ ಬಿಟ್ಟು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು. ರಾಜೀನಾಮೆ ಕೊಡುವ ಮುಂಚಿತವಾಗಿ ಸಿಬಿಐ ತನಿಖೆಗೆ ಪ್ರಕರಣವನ್ನು ಹಸ್ತಾಂತರ ಮಾಡಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಅವರು ಆಗ್ರಹಿಸಿದ್ದಾರೆ.



ಶಿವಾನಂದ ಸರ್ಕಲ್ ಸಮೀಪ ಇರುವ ತಮ್ಮ ನಿವಾಸದ ಬಳಿ ಇಂದು ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಮುಡಾ ಹಗರಣದ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಸ್ನೇಹಮಯಿ ಕೃಷ್ಣ ಅವರು ಬಯಲಿಗೆ ಎಳೆದಿದ್ದಾರೆ. ಬಿಜೆಪಿ ಹಾಗೂ ಜೆಡಿಎಸ್ ಪಕ್ಷ ಇದರ ವಿರುದ್ಧ ಸದನದ ಒಳಗಡೆ ಹಾಗೂ ಸದನದ ಹೊರಗಡೆ ಹೋರಾಟ ಮಾಡುತ್ತ ಬಂದಿದ್ದೇವೆ. ಕಾಂಗ್ರೆಸ್ ಸರಕಾರ ಮತ್ತು ಮುಖ್ಯಮಂತ್ರಿಗಳನ್ನು ತುದಿಗಾಲಲ್ಲಿ ನಿಲ್ಲಿಸಿದ್ದೆವು ಎಂದು ವಿವರಿಸಿದರು.

ಮುಡಾ ಹಗರಣವು ನಿನ್ನೆ ಮಹತ್ವದ ತಿರುವು ಪಡೆದುಕೊಂಡಿದೆ. ಜಾರಿ ನಿರ್ದೇಶನಾಲಯವು (ಇಡಿ) 300 ಕೋಟಿಗೂ ಹೆಚ್ಚು ಬೆಲೆಬಾಳುವ ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ. ಮುಡಾ ಹಗರಣದಲ್ಲಿ ಮುಖ್ಯಮಂತ್ರಿಗಳು ತಮ್ಮ ಕುಟುಂಬಕ್ಕೆ ಅಕ್ರಮವಾಗಿ 14 ನಿವೇಶನಗಳನ್ನು ಪಡೆದುಕೊಂಡಿದ್ದಾರೆ ಎಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗಿದೆ ಎಂದು ವಿಶ್ಲೇಷಿಸಿದರು. ಹಗರಣದಿಂದ ಮುಡಾಕ್ಕೆ ಕೋಟಿಗಟ್ಟಲೆ ನಷ್ಟವಾಗಿದೆ ಎಂದು ಗಮನ ಸೆಳೆದರು.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರವು ಬಡವರಿಗೆ ಮಂಜೂರಾಗಬೇಕಿದ್ದ ನಿವೇಶನಗಳನ್ನು ರಿಯಲ್ ಎಸ್ಟೇಟ್ ಉದ್ಯಮಿಗಳು, ದಲ್ಲಾಳಿಗಳಿಗೆ ನೀಡಿದ್ದು ಸ್ಪಷ್ಟವಾಗಿದೆ. ಇದರಿಂದ ಸರಕಾರ ಮತ್ತು ಮುಡಾಕ್ಕೆ ಸಾವಿರಾರು ಕೋಟಿ ನಷ್ಟವಾದುದು ಮತ್ತೊಮ್ಮೆ ಋಜುವಾತಾಗಿದೆ ಎಂದು ಅವರು ನುಡಿದರು. ಪ್ರಕರಣವನ್ನು ಬಯಲಿಗೆ ಎಳೆದ ಸ್ನೇಹಮಯಿ ಕೃಷ್ಣ ಅವರನ್ನು ಅಭಿನಂದಿಸಿದರು. ಸ್ನೇಹಮಯಿ ಕೃಷ್ಣ ಅವರ ಧ್ವನಿ ಹತ್ತಿಕ್ಕುವ ಕೆಲಸವನ್ನು ರಾಜ್ಯ ಸರಕಾರ ಮಾಡಿತ್ತು ಎಂದು ಆಕ್ಷೇಪಿಸಿದರು.ಸ್ನೇಹಮಯಿ ಕೃಷ್ಣ ಅವರ ಮೇಲೆ ಆರೋಪ ಹೊರಿಸಿ ಅವರನ್ನು ಬಂಧಿಸುವ ಹಂತಕ್ಕೂ ರಾಜ್ಯ ಸರಕಾರ ಹೋಗಿತ್ತು. ಇ.ಡಿ. ಕೈಗೊಂಡ ಕ್ರಮಗಳಿಂದ ಪುಟ 2

## ಶೀಘ್ರದಲ್ಲೇ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಚುನಾವಣೆ

**ಬೆಂಗಳೂರು:** ಕರ್ನಾಟಕ ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದೆ ಎಂದು ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದರು.



ಬೆಂಗಳೂರಿನಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಬೂತ್ ಕಮಿಟಿ ಅಧ್ಯಕ್ಷ ಸ್ಥಾನದಿಂದ ರಾಜ್ಯಾಧ್ಯಕ್ಷ ಸ್ಥಾನದವರೆಗೂ ಚುನಾವಣೆ ನಡೆಯಲಿದೆ. ರಾಜ್ಯಾಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ ಯಾವುದೇ ಗೊಂದಲ ಇಲ್ಲ. ಎಲ್ಲರೂ ಸೇರಿ ಚರ್ಚಿಸಿ ರಾಜ್ಯಾಧ್ಯಕ್ಷರನ್ನು ಆಯ್ಕೆ ಮಾಡುತ್ತೇವೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಕರ್ನಾಟಕ ವಿಕಾಸಕ್ಕೆ ಆದ್ಯತೆ ಕೊಡುತ್ತೇವೆ ಎಂದು ಕರ್ನಾಟಕ ಬಿಜೆಪಿ ಚುನಾವಣಾಧಿಕಾರಿ ಶಿವರಾಜ್ ಸಿಂಗ್ ಚೌಹಾಣ್ ಹೇಳಿದರು. ಪುಟ 2

## ನನ್ನ ಹೋರಾಟಕ್ಕೆ ಜಯ ಸಿಕ್ಕಂತಾಗಿದೆ

**ಮೈಸೂರು:** ಜಾರಿ ನಿರ್ದೇಶನಾಲಯವು ಮುಡಾದ 300 ಕೋಟಿ ಮೌಲ್ಯದ 142 ನಿವೇಶನಗಳನ್ನ ಮುಟ್ಟುಗೋಲು ಹಾಕಿಕೊಂಡಿದೆ. ಇದರಿಂದ ನನ್ನ ಹೋರಾಟಕ್ಕೆ ಆರಂಭಿಕ ಜಯ ಸಿಕ್ಕಂತಾಗಿದೆ. ನಾನು ಮಾಡಿದ ಆರೋಪ ಸಾಬೀತಾಗಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ನಿವೇಶನಗಳನ್ನ ವಶಪಡಿಸಿಕೊಳ್ಳಲಿದೆ. ನ್ಯಾಯ ಸಿಗುವವರೆಗೂ ನನ್ನ ಹೋರಾಟ ನಿಲ್ಲುವುದಿಲ್ಲ ಎಂದು ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಹೇಳಿದ್ದಾರೆ. ಈ ಕುರಿತು ನಗರದಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಅವರು, 142 ನಿವೇಶನಗಳು ಯಾರು ಯಾರಿಗೆ ಸೇರಿದ್ದು ಎಂಬ ಬಗ್ಗೆ ಮಾಹಿತಿ ಇಲ್ಲ. ಮುಂದಿನ ದಿನಗಳಲ್ಲಿ ಮುಡಾದಲ್ಲಿ ನಡೆದಿರುವ ಎಲ್ಲಾ ಅಕ್ರಮ ನಿವೇಶನಗಳನ್ನ ಇಡಿ ವಶಕ್ಕೆ ಪಡೆಯುವವರೆಗೆ ನನ್ನ ಹೋರಾಟ ಮುಂದುವರೆಯಲಿದೆ ಎಂದು ಹೇಳಿದರು. ಪುಟ 2

## ಮೊದಲ ಪುಟದಿಂದ

## ಭಂಡತನ ಬಿಟ್ಟು ರಾಜೀನಾಮೆ ನೀಡಿ

ಸಿದ್ದರಾಮಯ್ಯನವರು ಮತ್ತೊಮ್ಮೆ ಅಪರಾಧಿ ಸ್ಥಾನದಲ್ಲಿ ನಿಂತಿದ್ದಾರೆ ಎಂದು ಗಮನಕ್ಕೆ ತಂದರು.ಸಿದ್ದರಾಮಯ್ಯನವರ ವಿರುದ್ಧ ಪ್ರಾಸಿಕ್ಯೂಶನ್‌ಗೆ ಅನುಮತಿ ಕೊಟ್ಟ ಮಾನ್ಯ ರಾಜ್ಯಪಾಲರ ಮೇಲೂ ಅಪವಾದ ಹೊರಿಸುವ ಕೆಲಸವನ್ನು ಸಿದ್ದರಾಮಯ್ಯನವರ ನೇತೃತ್ವದ ಸರಕಾರದ ಸಚಿವರು ಮಾಡಿದ್ದರು. ಘನತೆವೆತ್ತ ರಾಜ್ಯಪಾಲರು ಪ್ರಾಸಿಕ್ಯೂಶನ್‌ಗೆ ಅನುಮತಿ ಕೊಟ್ಟದ್ದೇ ಅಪರಾಧ ಎಂಬಂತೆ ಬಿಂಬಿಸಲು ಯತ್ನಿಸಿದ್ದರು. ನಂತರ ರಾಜ್ಯ ಹೈಕೋರ್ಟ್, ರಾಜ್ಯಪಾಲರು ಪ್ರಾಸಿಕ್ಯೂಶನ್‌ಗೆ ಅನುಮತಿ ಕೊಟ್ಟದ್ದು ಸರಿಯಾಗಿದೆ; ಮೇಲ್ನೋಟಕ್ಕೆ ಮುಡಾ ಹಗರಣದಲ್ಲಿ ತಪ್ಪು, ಅವ್ಯವಹಾರ ನಡೆದಿದೆ ಎಂದಿತ್ತು. ಅಲ್ಲದೆ, ಸಿಎಂ ಕುಟುಂಬಕ್ಕೆ ಅಕ್ರಮವಾಗಿ 14 ನಿವೇಶನ ಕೊಟ್ಟಿದ್ದಾರೆ ಎಂಬುದು ಮೇಲ್ನೋಟಕ್ಕೇ ಋಜುವಾತಾದಾದುದನ್ನು ಹೈಕೋರ್ಟ್ ಮತ್ತೊಮ್ಮೆ ಹೇಳಿತ್ತು ಎಂದು ವಿವರಿಸಿದರು.

ನಮಗೆ ಸಿದ್ದರಾಮಯ್ಯನವರ ಬಗ್ಗೆ ದ್ವೇಷ ಇಲ್ಲ; ಆದರೆ, ಅಪರಾಧ ಆದ ಸಂದರ್ಭದಲ್ಲಿ, ತಪ್ಪಾಗಿರುವ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಈಗಾಗಲೇ ರಾಜೀನಾಮೆ ಕೊಡಬೇಕಾಗಿತ್ತು. ಮುಖ್ಯಮಂತ್ರಿಗಳು ಸ್ವಯಂಪ್ರೇರಿತರಾಗಿ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕಿತ್ತು. ಸಿದ್ದರಾಮಯ್ಯನವರು ಹಗರಣವನ್ನು ದೀರ್ಘ ಕಾಲ ಎಳೆದುಕೊಂಡು ಬಂದಿದ್ದಾರೆ ಎಂದು ಆಕ್ಷೇಪಿಸಿದರು.ಕ್ಷೇತ್ರಕ್ಕೆ 10 ಕೋಟಿ ಕೊಡುವ ಮೂಲಕ ಸಿದ್ದರಾಮಯ್ಯ ಮತ್ತು ಪ್ರಿಯಾಂಕ್ ಖರ್ಗೆಯವರು ನಮಗೇನು ಉಪಕಾರ ಮಾಡುತ್ತಿದ್ದಾರಾ? ಅನೇಕ ಶಾಸಕರು ಅನುದಾನವಿಲ್ಲದೆ ಹತಾಶರಾಗಿದ್ದಾರೆ. ಸರಕಾರ ಆಡಳಿತ ವಹಿಸಿಕೊಂಡು 2 ವರ್ಷವಾಗಿದೆ. ನಮ್ಮ ಕ್ಷೇತ್ರಗಳಲ್ಲಿ ಅಭಿವೃದ್ಧಿಗಾಗಿ ಹತ್ತಿಪ್ಪತ್ತು ಕೋಟಿ ಹಣ ಕೊಡಲಿಲ್ಲವೆಂದಾದರೆ, ಇವರ ಯೋಗ್ಯತೆಗೆ ಯಾವ ರೀತಿ ಸರಕಾರ ನಡೆಸುತ್ತಿದ್ದಾರೆ ಎಂದು ಟೀಕಿಸಿದರು. ಕ್ಷೇತ್ರಗಳ ಅಭಿವೃದ್ಧಿಗೆ ಹಣ ಕೊಡುವುದು ಇವರ ಕರ್ತವ್ಯ. ಸರಕಾರವೇನೂ ಉಪಕಾರ ಮಾಡುತ್ತಿಲ್ಲ. ಈ ಸಂಬಂಧ ಹಣವನ್ನು ತಕ್ಷಣ ಬಿಡುಗಡೆ ಮಾಡಿ ಎಂದು ಅವರು ಆಗ್ರಹಿಸಿದರು.

## ರಾಜ್ಯಾಧ್ಯಕ್ಷ ಸ್ಥಾನಕ್ಕೆ ಚುನಾವಣೆ

ಇನ್ನು, ಕರ್ನಾಟಕಕ್ಕೆ ಬರಬೇಕಾದ ಅನುದಾನ ಕೇಂದ್ರ ಸರ್ಕಾರದಿಂದ ಸಮರ್ಪಕವಾಗಿ ಬರುತ್ತಿಲ್ಲ ಎಂಬ ರಾಜ್ಯ ಕಾಂಗ್ರೆಸ್ ಮುಖಂಡರ ಆರೋಪದ ವಿಚಾರವಾಗಿ ಮಾತನಾಡಿದ ಅವರು, ಬಿಡುಗಡೆ ಮಾಡಿರುವ ಅನುದಾನ ಸದ್ಬಳಕೆಯಾಗಲಿ. ಅವರು ಅನುದಾನ ಕೇಳದಿದ್ದರೂ ನಾವೇ ಘೋಷಣೆ ಮಾಡಿದ್ದೇವೆ. ಬಹಳಷ್ಟು ಅನುದಾನ ಕೊಟ್ಟರೂ ಕರ್ನಾಟಕ ಸರ್ಕಾರ ಬಳಕೆ ಮಾಡಿಲ್ಲ ಎಂದು ವಾಗ್ದಾಳಿ ಮಾಡಿದರು.

ಕರ್ನಾಟಕದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷರ ನೇಮಕದ ವಿಚಾರದಲ್ಲಿ ಸ್ವಪಕ್ಷದಲ್ಲೇ ವಿರೋಧ ಕೇಳಿಬಂದಿತ್ತು. ಪಕ್ಷದ ಕೆಲ ಹಿರಿಯ ಮುಖಂಡರು ಬಿವೈ ವಿಜಯೇಂದ್ರ ಆಯ್ಕೆಗೆ ಪರೋಕ್ಷವಾಗಿ ಅಸಮಾಧಾನ ಹೊರ ಹಾಕಿದ್ದರು.

## ನನ್ನ ಹೋರಾಟಕ್ಕೆ ಜಯ ಸಿಕ್ಕಂತಾಗಿದೆ

ನಾನು ಇಡಿಗೆ ದೂರು ಸಲ್ಲಿಸಿದಾಗ ಇವೆಲ್ಲಾ ಸುಳ್ಳು ಆರೋಪ, ರಾಜಕೀಯ ಪ್ರೇರಿತ ಎಂದು ನನ್ನ ವಿರುದ್ಧ ಅಪಪ್ರಚಾರ ಮಾಡಿದ್ದರು. ಆದರೂ ಕಾನೂನು ಹೋರಾಟ ಮುಂದುವರೆಸಿದ್ದೇನೆ. ಎಲ್ಲಾ ಅಕ್ರಮ ನಿವೇಶನಗಳು ಮತ್ತೆ ಮುಡಾಗೆ ಬರುವವರೆಗೆ ನನ್ನ ಹೋರಾಟ ಮುಂದುವರೆಯಲಿದೆ ಎಂದರು.ಮುಡಾದಲ್ಲಿ ನಡೆದಿರುವ ಎಲ್ಲಾ ಅಕ್ರಮಗಳ ಬಗ್ಗೆ ತನಿಖೆ ನಡೆಸುವಂತೆ ನಾನು ಮನವಿ ಮಾಡಿದ್ದರೂ ಲೋಕಾಯುಕ್ತ ಪೊಲೀಸರು ಕೇವಲ ಸಿಎಂ ಪ್ರಕರಣವನ್ನು ಮಾತ್ರ ತನಿಖೆ ನಡೆಸುತ್ತಿದ್ದಾರೆ. ಸಮಗ್ರ ಮುಡಾ ಹಗರಣವನ್ನ ತನಿಖೆ ಮಾಡಬೇಕು ಎಂದು ನ್ಯಾಯಾಲಯದ ಮೊರೆ ಹೋಗುತ್ತೇನೆ ಎಂದು ತಿಳಿಸಿದರು.ನನಗೆ ಯಾವುದೇ ಜೀವ ಭಯ ಇದ್ದರೂ ತಲೆ ಕೆಡಿಸಿಕೊಳ್ಳುವುದಿಲ್ಲ. ನನ್ನ ಹೋರಾಟ ಮುಂದುವರೆಯಲಿದೆ. ನನ್ನ ಫೋನ್ ಸಹ ಟ್ಯಾಪ್ ಆಗುತ್ತಿದೆ ಎಂದ ಅವರು, ಮುಡಾ ಅಕ್ರಮಗಳ ಬಗ್ಗೆ ಬಾಕಿ ಇರುವ ಸಿಬಿಐ ವಿಚಾರಣೆ ಇದೇ ತಿಂಗಳ 27 ರಂದು ನಡೆಯಲಿದ್ದು, ಅಂದೇ ತೀರ್ಪು ಬರುವ ನಿರೀಕ್ಷೆಯಿದೆ. ಪ್ರಕರಣ ಸಿಬಿಐಗೆ ವಹಿಸುವ ಸಾಧ್ಯತೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

## ಫೆ.1ರಂದು ಆಯವ್ಯಯ ಮಂಡನೆ

ಫೆ 1ರಂದು ಲೋಕಸಭೆಯಲ್ಲಿ ಮಂಡಿಸಲಾಗುವುದು ಎಂದು ತಿಳಿಸಿದ್ದಾರೆ. ಬಜೆಟ್ ಅಧಿವೇಶನದ ಮೊದಲ ಭಾಗ ಜನವರಿ 31ರಿಂದ ಫೆಬ್ರವರಿ 13ರವರೆಗೆ 9ದಿನಗಳ ಕಾಲ ನಡೆಯಲಿದೆ. ಈ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರಪತಿಗಳ ಭಾಷಣಕ್ಕೆ ವಂದನಾರ್ಪಣೆ ಸಲ್ಲಿಸಲಿದ್ದು, ಸೀತಾರಾಮನ್ ಅವರು ಬಜೆಟ್ ಚರ್ಚೆಗೆ ಉತ್ತರಿಸಲಿದ್ದಾರೆ.

ಬಜೆಟ್ ಪ್ರಸ್ತಾವನೆಗಳನ್ನು ಪರಿಶೀಲಿಸಲು ಸಂಸತ್ ವಿರಾಮ ಪಡೆಯಲಿದ್ದು, ಮತ್ತೆ ಮಾರ್ಚ್ 10ರಿಂದ ಆರಂಭವಾಗಲಿದ್ದು, ಈ ವೇಳೆ ಬಜೆಟ್ ಪ್ರಸ್ತಾವನೆಗಳ ಪೂರ್ಣಗೊಳಿಸುವುವಿಕೆ ಹಾಗೂ ನಿಧಿ ಹಂಚಿಕೆ ಬೇಡಿಕೆ ವಿಚಾರದಲ್ಲಿ ಚರ್ಚೆಗಳು ಸಾಗಲಿದೆ. ಈ ಅಧಿವೇಶನ ಏಪ್ರಿಲ್ 4ರಂದು ಪೂರ್ಣಗೊಳ್ಳಲಿದ್ದು, ಒಟ್ಟು 27 ದಿನ ಸಾಗಲಿದೆ.

## ಸದನದಲ್ಲೇ ಮುಗಿಸಿ

ಸಿಐಡಿ ತನಿಖೆಗೆ ವಹಿಸಿದ್ದು ಹೊರಗೆ ಅಂದುಕೊಂಡಿದ್ದೆ, ಆದ್ರೆ ರೆಫರೆನ್ಸ್ ವಿಧಾನ ಪರಿಷತ್ ಎಂದು ಹಾಕಿದ್ದಾರೆ. ವಿಧಾನ ಪರಿಷತ್ ಒಳಗೆ ಪುಟ 2

## ಅನುದಾನದ ಸದ್ಬಳಕೆಗೆ ಸಲಹೆ

ಬಹಳಷ್ಟು ಅನುದಾನ ಈಗಾಗಲೇ ಕೊಟ್ಟಿದ್ದು, ಅದನ್ನು ಇನ್ನೂ ಕರ್ನಾಟಕ ಸರ್ಕಾರ ಖರ್ಚು ಮಾಡಿಲ್ಲ ಎಂದರು.ಪ್ರತಿ ಬಡವನಿಗೂ ಮನೆ ಸಿಗಬೇಕು ಎಂಬುದು ಮೋದಿಯವರ ಸಂಕಲ್ಪ. ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಕಳೆದ ಸೆಪ್ಟೆಂಬರ್‌ನಲ್ಲಿ ಕರ್ನಾಟಕಕ್ಕೆ 2,57,246 ಮನೆಗಳ ನಿರ್ಮಾಣಕ್ಕೆ ಒಪ್ಪಿಗೆ ಕೊಟ್ಟಿದ್ದೆವು. ಅನುದಾನವನ್ನೂ ಕೊಟ್ಟಿದ್ದೆವು. ಇಂದು ಮತ್ತೆ ಕರ್ನಾಟಕದ ಬಡಜನರಿಗೆ ಮನೆ ಕಟ್ಟಲು ಇರುವ ಗುರಿ ಹೆಚ್ಚಿಸಲಾಗಿದೆ ಎಂದು ವಿವರಿಸಿದರು. ಇಂದು 4,67,580 ಮನೆಗಳನ್ನು ಕಟ್ಟಲು ಒಪ್ಪಿಗೆ ಕೊಟ್ಟಿದ್ದೇವೆ. ಬಡವರ ಸೇವೆಯೇ ಭಗವಂತನ ಸೇವೆ ಎಂಬ ಚಿಂತನೆ ನಮ್ಮದು. ಎಲ್ಲ ಬಡವರಿಗೆ ಮನೆ ನಿರ್ಮಿಸಿ ಕೊಡುವ ಉದ್ದೇಶ ಈಡೇರಿಸಬೇಕಿದೆ. ಅದಕ್ಕಾಗಿ ಮನೆಗಳ ನಿರ್ಮಾಣ ಕಾರ್ಯಕ್ಕೆ ವೇಗ ಕೊಡಲು ಸೂಚಿಸಲಾಗಿದೆ. ಹಿಂದೆ ನೀಡಿದ್ದ ಅನುದಾನ ಪೂರ್ತಿ ಬಳಕೆ ಮಾಡಲು ತಿಳಿಸಲಾಗಿದೆ ಎಂದು ತಿಳಿಸಿದರು. ಆತ್ಮ ಯೋಜನೆಯಡಿ ಹೆಚ್ಚುವರಿ ಸಿಬ್ಬಂದಿ ನೀಡಲು ಒಪ್ಪಿಗೆ ಕೊಡಲಾಗಿದೆ. ವಿಕಸಿತ ಭಾರತ ನಿರ್ಮಾಣದ ಸಂಕಲ್ಪ ನಮ್ಮದು. ವಿಕಸಿತ ಭಾರತಕ್ಕಾಗಿ ವಿಕಸಿತ ಕರ್ನಾಟಕ ಎಂಬುದು ನಮ್ಮ ಚಿಂತನೆ ಎಂದು ವಿವರಿಸಿದರು. ರಾಜ್ಯ ಸರಕಾರವು ಸಕಾಲದಲ್ಲಿ ಅನುದಾನವನ್ನು ಬಳಸಿ; ಬಳಕೆ ಸಂಬಂಧಿತ ದೃಢಪತ್ರ ಕಳಿಸಬೇಕು ಎಂದು ಸೂಚಿಸಿದರು. ಆರೋಪ ಪ್ರತ್ಯಾರೋಪದ ರಾಜಕಾರಣ ನಮ್ಮದಲ್ಲ; ನಮ್ಮದು ವಿಕಾಸದ– ಅಭಿವೃದ್ಧಿಯ ರಾಜಕಾರಣ ಎಂದು ಅವರು ಪ್ರಶ್ನೆಗೆ ಉತ್ತರ ನೀಡಿದರು. ಹಲವು ಯೋಜನೆಗಳಲ್ಲಿ ಕರ್ನಾಟಕವು ಅನುದಾನವನ್ನು ಖರ್ಚು ಮಾಡಿಲ್ಲ ಎಂದು ತಿಳಿಸಿದರು.

## ಸಿಎಂ ವಿರುದ್ಧ ಪಿತೂರಿ

"ಇದು ಸರ್ಕಾರಿ ಕಾರ್ಯಕ್ರಮವಾಗಿದ್ದು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಘನ ಉಪಸ್ಥಿತಿಯಲ್ಲಿ ಎಐಸಿಸಿ ಅಧ್ಯಕ್ಷರು, ರಾಜ್ಯ ಸಭೆ ವಿರೋಧ ಪಕ್ಷದ ನಾಯಕರೂ ಆದ ಮಲ್ಲಿಕಾರ್ಜುನ ಖರ್ಗೆ ಅವರು ಪ್ರತಿಮೆ ಅನಾವರಣ ಮಾಡಲಿದ್ದಾರೆ" ಎಂದು ತಿಳಿಸಿದರು.

"ಕಾರ್ಯಕ್ರಮದಲ್ಲಿ ವಿಧಾನಸಭೆ ಸ್ಪೀಕರ್ ಹಾಗೂ ಪರಿಷತ್ತಿನ ಸಭಾಪತಿಗಳು ಭಾಗವ ಹಿಸಲಿದ್ದಾರೆ. ಎಲ್ಲಾ ಪಕ್ಷದ ಶಾಸಕರಿಗೂ ಈ ಕಾರ್ಯಕ್ರಮಕ್ಕೆ ಆಹ್ವಾನ ನೀಡಲಾಗಿದೆ. ಕಾರ್ಯಕ್ರಮದ ನಂತರ ನೆನಪಿಗಾಗಿ ಎಲ್ಲಾ ಶಾಸಕರ ಗುಂಪು ಫೋಟೋ ತೆಗೆಯಲಾಗುವುದು.

ನಂತರ ಅತಿಥಿಗಳು ಹಾಗೂ ಆಹ್ವಾನಿತರಿಗೆ ಮುಖ್ಯಮಂತ್ರಿಗಳು ಭೋಜನಕೂಟ ಏರ್ಪಡಿ ಸಲಿದ್ದಾರೆ. ಶಾಸಕರ ಹೊರತಾಗಿ ಗಂಗಾಧರ ದೇಶಪಾಂಡೆ ಅವರ ಕುಟುಂಬ ಸೇರಿದಂತೆ ಪ್ರಮುಖ ಕುಟುಂಬದವರಿಗೂ ಆಹ್ವಾನ ನೀಡಲಾಗುವುದು" ಎಂದು ಮಾಹಿತಿ ನೀಡಿದರು.




ಮೈಸೂರಿನ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾ ಸ್ವಾಮಿಗಳು ಬೆಳಗಾವಿಯ ವಿಜಯಾ ಆಸ್ಪತ್ರೆಗೆ ಭೇಟಿ ನೀಡಿ, ರಸ್ತೆ ಅಪಘಾತದಿಂದ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರ ಆರೋಗ್ಯ ಕುರಿತು ಮಾಹಿತಿ ಪಡೆದರು. ಇದೇ ವೇಳೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಸುರ್ಜೆವಾಲಾ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೂಡ ಆಸ್ಪತ್ರೆಗೆ ತೆರಳಿ ಲಕ್ಷ್ಮೀ ಹೆಬ್ಬಾಳಕರ್ ಅವರ ಆರೋಗ್ಯ ವಿಚಾರಿಸಿದರು.



ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾಗಿದ್ದಪರಮಪೂಜ್ಯ ಜಗದ್ಗುರು ಪದ್ಮಭೂಷಣ ಶ್ರೀ ಶ್ರೀ ಶ್ರೀ ಡಾ. ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ 80 ನೇ ಜಯಂತೋತ್ಸವದ ಅಂಗವಾಗಿ ಮಹಾಲಕ್ಷ್ಮಿ ಲೇಔಟ್ ವಿಧಾನಸಭಾ ಕ್ಷೇತ್ರದ ವೃಷಭಾವತಿ ನಗರ ಬಾಲಗಂಗಾಧರನಾಥ ಸ್ವಾಮೀಜಿ ಉದ್ಯಾನವನದಲ್ಲಿರುವ ಸ್ವಾಮೀಜಿಯವರ ಪ್ರತಿಮೆಗೆ ಶ್ರೀಮಠದ ಶ್ರೀ ಸೌಮ್ಯನಾಥ ಸ್ವಾಮೀಜಿ ಅವರು ಪುಷ್ಪ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಮಾಜಿ ಸಚಿವರು ಹಾಗೂ ಸ್ಥಳೀಯ ಶಾಸಕರಾದ ಕೆ ಗೋಪಾಲಯ್ಯ ಪಾಲಿಕೆ ಮಾಜಿ ಉಪಮೇಯ ಹೇಮಲತಾ ಗೋಪಾಲಯ್ಯ ಪಾಲಿಕೆ ಮಾಜಿ ಸದಸ್ಯೆ ಪದ್ಮಾವತಿ ಶ್ರೀನಿವಾಸ್, ಡಾ, ಸಂಜಯ್ ಗೌಡ ಮುಖಂಡರುಗಳಾದ ಶ್ರೀನಿವಾಸ್ ,ವೆಂಕಟೇಶ್ ಗಂಗಹನುಮಯ್ಯ ಸೇರಿದಂತೆ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

## ಕೆಯುಡಬ್ಲ್ಯೂಜೆ: ಶ್ರೀಬಾಲಗಂಗಾಧರನಾಥ ಸ್ವಾಮೀಜಿ ದತ್ತಿ ನಿಧಿ



**ಬೆಂಗಳೂರು:** ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ಆದಿಚುಂಚನಗಿರಿ ಮಠದ ವತಿಯಿಂದ ದತ್ತಿ ನಿಧಿ ಪ್ರಶಸ್ತಿ ಸ್ಥಾಪಿಸಲು ಮಠದ ಪೀಠಾಧ್ಯಕ್ಷರಾದ ಡಾ.ನಿರ್ಮಲಾನಂದನಾಥ ಸ್ವಾಮೀಜಿಯವರು ಮುಂದಾಗಿದ್ದಾರೆ.

ತುಮಕೂರಿನಲ್ಲಿ ನಡೆಯಲಿರುವ 39ನೇ ರಾಜ್ಯ ಪತ್ರಕರ್ತರ ಸಮ್ಮೇಳನದ ಆಹ್ವಾನ ಪತ್ರಿಕೆಯನ್ನು ನೀಡಲು ಆದಿಚುಂಚನಗಿರಿ ಮಠಕ್ಕೆ ಹೋಗಿದ್ದ ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ) ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅವರ ಜೊತೆಗೆ ಈ ನಿಟ್ಟಿನಲ್ಲಿ ಚರ್ಚೆ ನಡೆಸಿ ತಮ್ಮ ಇಚ್ಛೆ ವ್ಯಕ್ತಪಡಿಸಿದ್ದರು.

ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರ ನೆನಪಿನಲ್ಲಿ ಚುಂಚಶ್ರೀ ಪ್ರಶಸ್ತಿ ಸ್ಥಾಪಿಸಲು 10ಲಕ್ಷ ರೂ ಠೇವಣಿ ಇಡುವುದಾಗಿ ತಿಳಿಸಿರುವುದನ್ನು ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ ಸ್ವಾಗತಿಸುತ್ತದೆ.

ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರ ಆಶಯದಂತೆ ಠೇವಣಿ ಇಟ್ಟ ಬಳಿಕ ಪ್ರತಿ ವರ್ಷವೂ ಸಮ್ಮೇಳನದಲ್ಲಿ ಸಾಧಕ ಹಿರಿಯ ಪತ್ರಕರ್ತರೊಬ್ಬರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಕೆಯುಡಬ್ಲ್ಯೂಜೆ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅವರು ತಿಳಿಸಿದ್ದಾರೆ.

## ಮಾಂಸ ಮಾರಾಟ ನಿಷೇಧ

**ಬೆಂಗಳೂರು:** ಯಲಹಂಕ ವಾಯುನೆಲೆಯಲ್ಲಿ ಏರ್ ಶೋ–2025 ಪ್ರಯುಕ್ತ 23ನೇ ಜನವರಿಯಿಂದ 17ನೇ ಫೆಬ್ರಬರಿ 2025 ರವರೆಗೆ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ ಎಂದು ಯಲಹಂಕ ವಲಯ ಜಂಟಿ ಆಯುಕ್ತರಾದ ಮೊಹದ್ ನಯೀಮ್ ಮೊಮಿನ್ ತಿಳಿಸಿದ್ದಾರೆ. ಯಲಹಂಕ ಏರ್ ಫೋರ್ಸ್ ಸ್ಟೇನ್‌ನಲ್ಲಿ ದಿನಾಂಕ: 10.02.2025 ರಿಂದ 14.02.2025 ರವರೆಗೆ ಅಂತರಾಷ್ಟ್ರಿ□ಯ ಏರ್ ಶೋ ನಡೆಯಲಿದೆ. ಈ ಸಂಬಂಧ ಯಲಹಂಕ ವಲಯದ ಏರ್‌ಫೋರ್ಸ್ ಸ್ಟೆ□ಷನಿಂದ 13 ಕಿ.ಮೀ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮಾಂಸ ಮಾರಾಟದ ಉದ್ದಿಮೆಗಳನ್ನು ಮುಚ್ಚುವುದು ಹಾಗೂ ಹೋಟೆಲ್ ಮತ್ತು ಡಾಬಾಗಳಲ್ಲಿ ಮಾಂಸಾಹಾರ ತಯಾರಿಕೆ ಮತ್ತು ಮಾರಾಟವನ್ನು ನಿಷೇಧಿಸಲಾಗಿದೆ. ಆದುದರಿಂದ ದಿನಾಂಕ: 23.01.2025 ರಿಂದ 17.02.2025 ರವರೆಗೆ ಎಲ್ಲಾ ಮಾಂಸಾಹಾರ ಮಾರಾಟ ಉದ್ದಿಮೆಗಳನ್ನು ಮುಚ್ಚಲು ಸೂಚಿಸಲಾಗಿದೆ. ಇದನ್ನು ಉಲ್ಲಂಘಿಸಿದಲ್ಲಿ ಬಿಬಿಎಂಪಿ ಕಾಯ್ದೆ 2020 ಮತ್ತು ಏರ್ ಕ್ರಾಫ್ಟ್ ರೂಲ್ಸ್□ 1937 ರ ರೂಲ್ 91 ರಂತೆ ಮತ್ತು ಇತರ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಡಾ. ಮನೋಹರ್ ಸಹಾಯಕ ನಿರ್ದೇಶಕರು, ಪಶುಪಾಲನಾ ವಿಭಾಗ, ಯಲಹಂಕ ಮೊ.ಸಂ: 9845588227 ಸಂಪರ್ಕಿಸಲು ಕೋರಲಾಗಿದೆ.

## ಸಿಎಂ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹ

**ಮೈಸೂರು:** ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಮಾಜಿ ಶಾಸಕ ಎಲ್.ನಾಗೇಂದ್ರ ಆಗ್ರಹಿಸಿದ್ದಾರೆ.

ಇಂದು ಮಾಧ್ಯಮಗಳ ಜೊತೆ ಮಾತನಾಡಿದ ಸಂಸದ ಯದುವೀರ್, ಸಿಎಂ ತವರು ಜಿಲ್ಲೆಯಲ್ಲಿ ಹಗರಣ ನಡೆದಿದೆ. ಸಿಎಂ ಸಿದ್ದರಾಮಯ್ಯ ಹೆಸರು ಪ್ರಕರಣದಲ್ಲಿ ತಳಕು ಹಾಕಿಕೊಂಡಿದೆ. ಮೊದಲ ದಿನದಿಂದಲೂ ನಾವು ರಾಜೀನಾಮೆ ಕೇಳುತ್ತಿದ್ದೇವೆ. ಕಾಂಗ್ರೆಸ್ ಸರ್ಕಾರ ಕೂಡಲೇ ರಾಜೀನಾಮೆ ಪಡೆದುಕೊಳ್ಳಬೇಕು. ತನಿಖೆ ಬಳಿಕವೇ ತಪ್ಪಿತಸ್ಥರಲ್ಲ ಎಂದರೆ ಅಧಿಕಾರಕ್ಕೆ ಬರಲಿ. ಸದ್ಯಕ್ಕೆ ಅವರ ವಿರುದ್ಧ ಅಗತ್ಯ ಕ್ರಮಕೈಗೊಳ್ಳಬೇಕು ಎಂದರು.

ಮುಡಾ ಹಗರಣ ಪ್ರಕರಣ ಸದ್ಯಕ್ಕೆ ಇಲ್ಲಿಗೆ ವಿಚಾರಣೆ ಮುಗಿಯುವುದಿಲ್ಲ. ಸೈಟ್ ವಾಪಸ್ ನೀಡಿದ ಬಳಿಕ ತಪ್ಪಾಗಿರುವುದನ್ನ ಸಿಎಂ ಒಪ್ಪಿಕೊಂಡಿದ್ದಾರೆ. ಬಿಜೆಪಿಯ ಹೋರಾಟ ಮತ್ತಷ್ಟು ನಿರಂತರವಾಗಿ ನಡೆಯಲಿದೆ. ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡಿ ತನಿಖೆ ಎದುರಿಸಲಿ. ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಲಿ ಎಂದರು.

ಬೆಂಗಳೂರು ಅರಮನೆ ಟಿಡಿಆರ್ ವಿಚಾರ ಕುರಿತು ಪ್ರತಿಕ್ರಿಯಿಸಿದ ಸಂಸದ ಯದುವೀರ್, ಮೊದಲಿನಿಂದಲೂ ಅರಮನೆ ಟಾರ್ಗೆಟ್ ಆಗಿದೆ. ಸಿಎಂ ಸಿದ್ದರಾಮಯ್ಯ ಅವರು ಉಪಮುಖ್ಯಮಂತ್ರಿಯಾದಾಗ ಆರಂಭವಾಯಿತು. ಅಂದಿನಿಂದಲೂ ಇದು ಮುಂದುವರಿದುಕೊಂಡು ಬಂದಿದೆ. ಈ ಕುರಿತು ತಾಯಿ ಪ್ರಮೋದಾದೇವಿ ಒಡೆಯರ್ ಅವರು ಕಾನೂನು ಸಮರ ನಡೆಸುತ್ತಾರೆ. ಅರಮನೆ ಆಸ್ತಿ ರಕ್ಷಣೆ ವಿಚಾರದಲ್ಲಿ ಕ್ರಮಕೈಗೊಳ್ಳುತ್ತಾರೆ ಎಂದರು.

**ರಾಜೀನಾಮೆ ನೀಡಲಿ:ಎಲ್. ನಾಗೇಂದ್ರ**

ಮುಡಾ ಆಸ್ತಿಯನ್ನು ಇಡಿ ಮುಟ್ಟುಗೋಲು ಹಾಕಿಕೊಂಡ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಎಲ್.ನಾಗೇಂದ್ರ, ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡಲಿ. ಮುಡಾದಲ್ಲಿ ಸಾಕಷ್ಟು ಅವ್ಯವಹಾರ ಆಗಿದೆ. ಈ ಬಗ್ಗೆ ಸಿಬಿಐ ತನಿಖೆ ಆಗಬೇಕು. ನಿನ್ನೆ ಇಡಿ ಪ್ರೆಸ್ ರಿಲೀಸ್ ನಲ್ಲಿ ಅಕ್ರಮ ಎಂದು ಹೇಳಿದೆ. ಅಲ್ಲದೆ ಆಸ್ತಿಯನ್ನು ಕೂಡ ಮುಟ್ಟುಗೋಲು ಹಾಕಿಕೊಂಡಿದೆ. ಇನ್ನಾದರೂ ಸಿಎಂ ರಾಜೀನಾಮೆ ಕೊಟ್ಟು ತನಿಖೆ ಎದುರಿಸಲಿ ಎಂದು ಒತ್ತಾಯಿಸಿದರು.

## ವೀಸಾ ಅವಧಿ ಮುಗಿದ ಮೇಲೂ ಭಾರತದಲ್ಲಿದ್ದ ವಲಸಿಗರ ಬಂಧನ

**ನೊಯ್ಡಾ:** ಭಾರತದಲ್ಲಿ ಅಕ್ರಮವಾಗಿ ತಂಗಿದ್ದ ಆರೋಪದ ಮೇಲೆ ಸಾರ್ಟ್‌ಫೋನ್ ತಯಾರಕ ವಿವೋ ಜೊತೆ ಕೆಲಸ ಮಾಡುತ್ತಿರುವ ಮೂವರು ಚೀನಾ ಪ್ರಜೆಗಳನ್ನು ಇಲ್ಲಿ ಬಂಧಿಸಲಾಗಿದೆ.

ಗೌತಮ್ ಬುಧ್ ನಗರ್ ಪೊಲೀಸ್‌ನ ಸ್ವಾಟ್ ತಂಡ ಮತ್ತು ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿ (ಎಫ್‌ಆರ್‌ಆರ್‌ಒ) ಅಧಿಕಾರಿಗಳು ಚೀನಿ ಪ್ರಜೆಗಳನ್ನು ಬಂಧಿಸಿದ್ದಾರೆ.

ಗೌತಮ್ ಬುದ್ ನಗರದ ಖೇರ್ಲಿ ಭಾವ್ ಪ್ರದೇಶದಲ್ಲಿ ವಿವೋ ಜೊತೆ ಕೆಲಸ ಮಾಡುತ್ತಿರುವ ಮೂವರು ಚೀನಾದ ಪ್ರಜೆಗಳು ತಮ್ಮ ವೀಸಾ ಅವಧಿ ಮುಗಿದ ನಂತರ ಭಾರತದಲ್ಲಿ ಅಕ್ರಮವಾಗಿ ತಂಗಿದ್ದಕ್ಕಾಗಿ ಬಂಧಿಸಲಾಗಿದೆ ಎಂದು ಹೆಚ್ಚುವರಿ ಪೊಲೀಸ್ ಉಪ ಆಯುಕ್ತ (ವಲಯ–3) ಅಶೋಕ್ ಕುಮಾರ್ ಸಿಂಗ್ ಹೇಳಿದ್ದಾರೆ. ಆರೋಪಿಗಳನ್ನು ಯುಸಿಂಗ್ಬೋ, ಚಾನ್ ಚೌ ಮತ್ತು ಪೆಂಗ್‌ಶಾವೊ ಎಂದು ಗುರುತಿಸಲಾಗಿದೆ ಎಂದು ಅವರು ಹೇಳಿದರು.

## ಕರುವನ್ನು ಕದ್ದೊಯ್ದು ಕಡಿದು ಮಾಂಸದೂಟ; ಬಂಧನ

**ಹಾಸನ:** ರಾಜಧಾನಿ ಬೆಂಗಳೂರಿನ ಚಾಮರಾಜಪೇಟೆಯಲ್ಲಿ ಹಸುಗಳ ಕೆಚ್ಚಲು ಕೊಯ್ದ ಪ್ರಕರಣ ಹಾಗೂ ನಂಜನಗೂಡಿನಲ್ಲಿ ಕರುವಿನ ಬಾಲ ಕತ್ತರಿಸಿದ ಪ್ರಕರಣಗಳು ಇನ್ನೂ ಹಸಿಯಾಗಿರುವಾಗಲೇ ಹಾಸನದಲ್ಲೊಂದು ಅಮಾನವೀಯ ಕೃತ್ಯ ಬೆಳಕಿಗೆ ಬಂದಿದೆ.

ಆಲೂರು ತಾಲ್ಲೂಕಿನ ಹೆದ್ದುರ್ಗ ಗ್ರಾಮದ ಹೂವಣ್ಣ ಎಂಬುವವರಿಗೆ ಸೇರಿದ್ದ ಕರುವನ್ನು ಕಿರಾತಕರು ಹೊತ್ತೊಯ್ದು ಕಡಿದು ಮಾಂಸದೂಟ ಮಾಡಿದ್ದಾರೆ.ಕೊಟ್ಟಿಗೆಯಲ್ಲಿ ಕರು ಕಾಣದಿದ್ದಾಗ ಹುಡುಕಾಟ ನಡೆಸಿದ್ದಾರೆ. ಮಡಬಲು ಗ್ರಾಮದ ರೈಲ್ವೇಗೇಟ್ ಬಳಿ ಕರುವಿನ ರುಂಡ ಪತ್ತೆಯಾಗಿದೆ.

ಈ ಸಂಬಂಧ ಅಜ್ಗರ್, ಕೌಶಿಕ್, ಮೋಹನ್, ಮನೋಜ್, ಚಂದನ್, ಪವನ್, ಅಜಿತ್ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ. ಹೂವಣ್ಣ 12 ಹಸುಗಳನ್ನು ಸಾಕಿದ್ದು ಅದರಲ್ಲಿ ಒಂದು ಕರುವನ್ನು ಜ.14 ರ ಮಧ್ಯರಾತ್ರಿ ದುಷ್ಕರ್ಮಿಗಳು ಕದ್ದೊಯ್ದು ಮಾಂಸದೂಟ ಮಾಡಿ ಸೇವಿಸಿದ್ದಾರೆ. ಸಾಕ್ಷಿ ನಾಶಕ್ಕಾಗಿ ರುಂಡ ಹಾಗೂ ಕರಳು ಹಾಗೂ ಚರ್ಮವನ್ನು ನದಿಗೆ ಎಸೆಯಲು ಪ್ರಯತ್ನಿಸಿದ್ದರು. ಅಷ್ಟರೊಳಗಾಗಿ ಬೆಳಗಾದ್ದರಿಂದ ರೈತರು ಜಮೀನು ಕೆಲಸಕ್ಕೆ ಬರುತ್ತಿರುವುದನ್ನು ಕಂಡು ರುಂಡವನ್ನು ಅಲ್ಲಿಯೇ ಬಿಟ್ಟು ಪರಾರಿಯಾಗಿದ್ದರು ಎನ್ನಲಾಗಿದೆ.ಈ ಸಂಬಂಧ ಆಲೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಏಳು ಮಂದಿ ಆರೋಪಿಗಳನ್ನು ಬಂಧಿಸಿ ಕೃತ್ಯಕ್ಕೆ ಬಳಸಿದ್ದ ಆಯುಧಗಳನ್ನು ವಶಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

## ಮೆಟ್ರೋ ದರ ಹೆಚ್ಚಳ ವಿರುದ್ಧ ಆಪ್ ತೀವ್ರ ವಿರೋಧ



ಬೆಂಗಳೂರು: ಕಳೆದ ಏಳೆಂಟು ವರ್ಷಗಳಿಂದ ಮೆಟ್ರೋ ದರವನ್ನು ಏರಿಸಿಲ್ಲವೆಂಬ ಕಾರಣವನ್ನು ನೀಡಿ ಏಕಾಏಕಿ 40 ರಿಂದ 45 % ದರ ಏರಿಕೆ ಮಾಡುತ್ತಿರುವ ಬಿ ಎಂ ಆರ್ ಸಿ ಎಲ್ ಕ್ರಮವನ್ನು ಅಮ್ ಆದ್ಮಿ ಪಕ್ಷ ತೀವ್ರವಾಗಿ ಖಂಡಿಸುತ್ತದೆ ಹಾಗೂ ಇದರ ವಿರುದ್ಧ ಬೆಂಗಳೂರಿನ ನಾಗರೀಕರ ಜೊತೆಗೂಡಿ ಹೋರಾಟದ ಹಾದಿಯನ್ನು ಹಿಡಿಯಬೇಕಾಗುತ್ತದೆ ಎಂದು ಪಕ್ಷದ ರಾಜ್ಯ ಖಜಾಂಚಿ ಪ್ರಕಾಶ್ ನೆಡುಂಗಡಿ ತಮ್ಮ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಂಚಾರ ಒತ್ತಡ ಸಮಸ್ಯೆಯಲ್ಲಿ ವಿಶ್ವ ಮಟ್ಟದಲ್ಲಿ ಮೂರನೇ ಸ್ಥಾನವನ್ನು ಪಡೆದು , ಬೆಂಗಳೂರಿನ ಆರ್ಥಿಕ ವ್ಯವಸ್ಥೆಗೆ ಧಕ್ಕೆ ಬರುವ ರೀತಿಯ ಕಳಂಕವನ್ನು ಹೊತ್ತಿರುವ ಬೆಂಗಳೂರು ನಗರದಲ್ಲಿ ಸಾರ್ವಜನಿಕ ಸಮೂಹ ಸಾರಿಗೆ ವ್ಯವಸ್ಥೆಗಳನ್ನು ಮತ್ತಷ್ಟು ಬಲಪಡಿಸಿ ಸಂಚಾರ ಒತ್ತಡವನ್ನು ಕಡಿಮೆ ಮಾಡುವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳದೆ ಈ ರೀತಿ ದರ ಏರಿಸುವ ವಿರುದ್ಧ ಸಮೂಹ ಸಾರಿಗೆ ವ್ಯವಸ್ಥೆಯ ಕತ್ತುಹಿಸುಕುವ ಕೆಲಸಗಳನ್ನು ಮಾಡಬಾರದು. ಈಗಾಗಲೇ ರಾಜ್ಯ ಸರ್ಕಾರ ಕೆಎಸ್ ಆರ್ ಟಿ ಸಿ ಮತ್ತು ಬಿಎಂಟಿಸಿ ಬಸ್ ಗಳ ಬೆಲೆಗಳನ್ನು ಏರಿಸಿ ಜನತೆಯ ಜೇಬಿಗೆ ಬರೆ ಎಳೆದಿದ್ದಾರೆ. ದೆಹಲಿಯಲ್ಲಿ ಎಎಪಿ ಸರ್ಕಾರ ಈಗಾಗಲೇ ವಿದ್ಯಾರ್ಥಿಗಳಿಗೆ ಮೆಟ್ರೋಗಳಲ್ಲಿಯೂ ಸಹ ಉಚಿತ ಸಾರಿಗೆ ವ್ಯವಸ್ಥೆಯನ್ನು ಮಾಡಿರುವ ಸಂದರ್ಭದಲ್ಲಿ ಇದೇ ರೀತಿಯ ಪ್ರೋತ್ಸಾಹಗಳನ್ನು ನೀಡುವುದನ್ನು ಬಿಟ್ಟು ರಾಜ್ಯ ಸರ್ಕಾರವು ಈ ರೀತಿ ಏಕಾಏಕಿ ಬೆಲೆ ಏರಿಸುವುದು ಸರಿಯಾದ ಕ್ರಮವಲ್ಲ. ಸರ್ಕಾರವು ಸಾರ್ವಜನಿಕ ಸಂಚಾರ ವ್ಯವಸ್ಥೆಯನ್ನು ಲಾಭದಾಯಕ ಹಾಗೂ ವ್ಯಾಪಾರಿ ದೃಷ್ಟಿಯಿಂದ ನೋಡುವುದನ್ನು ಬಿಡಬೇಕು. ಜನಸ್ನೇಹಿ ಸಾರಿಗೆ ವ್ಯವಸ್ಥೆಗಳನ್ನು ಬಲಪಡಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕೂಡಲೇ ಮುಂದಾಗಬೇಕು. ಕೂಡಲೇ ದರ ಏರಿಕೆಯ ಪ್ರಸ್ತಾಪವನ್ನು ಕೈಬಿಡಬೇಕು ಇಲ್ಲದಿದ್ದಲ್ಲಿ ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಮೆಟ್ರೋ ಸಂಸ್ಥೆ ಹಾಗೂ ಸರ್ಕಾರದ ವಿರುದ್ಧ ತೀವ್ರ ಹೋರಾಟಕ್ಕೆ ಇಳಿಯಬೇಕಾಗುತ್ತದೆ ಎಂದು ಪ್ರಕಾಶ್ ನೆಡುಂಗಡಿ ತಮ್ಮ ಪತ್ರಿಕಾ ಹೇಳಿಕೆಯಲ್ಲಿ ಎಚ್ಚರಿಸಿದ್ದಾರೆ.

## ಅಪಘಾತ: ನಟ ಸಾವು

**ಮಹಾರಾಷ್ಟ್ರ:** ಭೀಕರ ರಸ್ತೆ ಅಪಘಾತದಲ್ಲಿ ಹಿಂದಿ ಕಿರುತೆರೆ ನಟ ನಿಧನ ಹೊಂದಿದ್ದಾರೆ. ಅಮನ್ ಜೈಸ್ವಾಲ್(23). 'ಪುಣ್ಯಶ್ಲೋಕ ಅಭಿಲ್ಯಬಾಯಿ' ಧಾರಾವಾಹಿ ಮೂಲಕ ಕಿರುತೆರೆಗೆ ಪಾದರ್ಪಣೆ ಮಾಡಿದ್ದ ಅವರು 'ಧರ್ತಿಪುತ್ರ ನಂದಿನಿ' ಮೂಲಕ ಹೆಸರುವಾಸಿಯಾಗಿದ್ದರು. ಮುಂಬೈನ ಹಿಲ್ ಪಾರ್ಕ್ ರಸ್ತೆಯಲ್ಲಿ ತೆರಳುತ್ತಿದ್ದ ಟ್ರಕ್‌ವೊಂದು ಅವರ ಬೈಕ್‌ಗೆ ಡಿಕ್ಕಿ ಹೊಡೆದಿದ್ದು, ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಹತ್ತಿರದ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಸಾವನ್ನಪ್ಪಿದ್ದರು ಎನ್ನಲಾಗಿದೆ.ಸದ್ಯ ಟ್ರಕ್ ಹಾಗೂ ಅದರ ಚಾಲಕನನ್ನು ಪೊಲೀಸರು ಬಂಧಿಸಿದ್ದು, ಈ ಸಂಬಂಧ ಅಂಬೋಲಿ ಪೊಲೀಸ್ ಠಾಣೆಯಲ್ಲಿ ಕೇಸ್ ದಾಖಲಾಗಿದೆ.

ಅಮನ್ ಅವರು ಮೂಲತಃ ಉತ್ತರ ಪ್ರದೇಶದವರಾಗಿದ್ದು, ಧಾರಾವಾಹಿಗೆ ಬರುವುದಕ್ಕೂ ಮೊದಲು ಅವರು ಮಾಡೆಲ್ ಆಗಿ ಗಮನ ಸೆಳೆದಿದ್ದರು. 2024ರಲ್ಲಿ 'ಧರ್ತಿಪುತ್ರ ನಂದಿನಿ' ಕೊನೆಗೊಂಡಿದೆ.

## ನನ್ನನ್ನು ಕೊಲ್ಲಲು ಸಂಚು ರೂಪಿಸಲಾಗಿತ್ತು: ಹಸೀನಾ

**ನವದೆಹಲಿ:** ನಾವು ಅಂದು ತಪ್ಪಿಸಿಕೊಳ್ಳದಿದ್ದರೆ ನಮನ್ನು ಕೊಲ್ಲಲು ಸಂಚು ರೂಪಿಸಲಾಗಿತ್ತು ಎಂದು ಬಾಂಗ್ಲಾ ದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ತಿಳಿಸಿದ್ದಾರೆ. ಕಳೆದ ವರ್ಷ ಆಗಸ್ಟ್ 5 ರಂದು ಅಧಿಕಾರದಿಂದ ಕೆಳಗಿಳಿಯುವಂತೆ ವಿದ್ಯಾರ್ಥಿ ನೇತತ್ವದ ಪ್ರತಿಭಟನೆಗಳು ನಡೆಸಿದ್ದ ಕ್ಷಣದಲ್ಲಿ ನನ್ನನ್ನು ಮತ್ತು ನನ್ನ ಸಹೋದರಿ ರೆಹಾನಾ ಅವರನ್ನು ಕೊಲ್ಲಲು ಸಂಚು ರೂಪಿಸಲಾಗಿತ್ತು ಎಂದು ಹಸೀನಾ ಹೇಳಿಕೊಂಡಿದ್ದಾರೆ. ಬಾಂಗ್ಲಾದೇಶ ಅವಾಮಿ ಲೀಗ್ ಪಕ್ಷವು ತನ್ನ ಫೇಸ್‌ಬುಕ್ ಪುಟದಲ್ಲಿ ತಡರಾತ್ರಿ ಪೋಸ್ಟ್ ಮಾಡಿದ ಆಡಿಯೊದಲ್ಲಿ ಹಸೀನಾ ಈ ಆರೋಪಗಳನ್ನು ಮಾಡಿದ್ದಾರೆ.ರೆಹಾನಾ ಮತ್ತು ನಾನು ಬದುಕುಳಿದೆವು ಕೇವಲ 20–25 ನಿಮಿಷಗಳ ಅಂತರದಲ್ಲಿ, ನಾವು ಸಾವಿನಿಂದ ಪಾರಾಗಿದ್ದೇವೆ ಎಂದು ಹಸೀನಾ ಹೇಳಿಕೊಂಡಿದ್ದಾರೆ.

## ಇನ್ನೆರಡು ದಿನದಲ್ಲಿ ಆಸ್ಪತ್ರೆಯಿಂದ ಸೈಫ್ ಡಿಸ್ಚಾರ್ಜ್



**ಮುಂಬೈ:** ಮುಂಬೈನ ಮನೆಯಲ್ಲಿ ಅನಾಹುತದಿಂದ ದಾಳಿಗೊಳಗಾದ ಬಾಲಿವುಡ್ ನಟ ಸೈಫ್ ಅಲಿ ಖಾನ್ ಅವರು ಚೇತರಿಸಿಕೊಳ್ಳುತ್ತಿದ್ದಾರೆ ಮತ್ತು ಎರಡು ಮೂರು ದಿನಗಳಲ್ಲಿ ಡಿಸ್ಚಾರ್ಜ್ ಆಗುವ ನಿರೀಕ್ಷೆಯಿದೆ ಎಂದು ವೈದ್ಯರು ತಿಳಿಸಿದ್ದಾರೆ.

54 ವರ್ಷದ ನಟ ಗುರುವಾರ ಮುಂಜಾನೆ ಬಾಂದ್ರಾದಲ್ಲಿನ ಅವರ ಮನೆಯಲ್ಲಿ ನಡೆದ ಕ್ರೂರ ದಾಳಿಯಲ್ಲಿ ಕುತ್ತಿಗೆ ಮತ್ತು ಬೆನ್ನುಮೂಳೆಯ ಬಳಿ ಸೇರಿದಂತೆ ಅನೇಕ ಇರಿತ ಗಾಯಗಳನ್ನು ಅನುಭವಿಸಿದರು. ಕೂಡಲೇ ಅವರನ್ನು ಲೀಲಾವತಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ತುರ್ತು ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ. ಐಸಿಯುನಿಂದ ಹೊರಕ್ಕೆ ಸ್ಥಳಾಂತರಗೊಂಡಿರುವ ನಟ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ. ಅವರು ನಡೆಯುತ್ತಿದ್ದಾರೆ ಮತ್ತು ಸಾಮಾನ್ಯ ಆಹಾರಕ್ರಮದಲ್ಲಿದ್ದಾರೆ. ಎರಡರಿಂದ ಮೂರು ದಿನಗಳಲ್ಲಿ ಖಾನ್ ಡಿಸ್ಚಾರ್ಜ್ ಆಗುವ ನಿರೀಕ್ಷೆಯಿದೆ ಎಂದು ಅವರು ಹೇಳಿದ್ದಾರೆ. ನಾವು ಅವರ ಪ್ರಗತಿಯನ್ನು ಗಮನಿಸುತ್ತಿದ್ದೇವೆ ಮತ್ತು ಅವರು ನಮ ನಿರೀಕ್ಷೆಯ ಪ್ರಕಾರ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರ ಪ್ರಗತಿಗೆ ಅನುಗುಣವಾಗಿ ನಾವು ಅವರಿಗೆ ಬೆಡ್ ರೆಸ್ಟ್ ಅನ್ನು ಸೂಚಿಸಿದ್ದೇವೆ ಮತ್ತು ಅವರು ಆರಾಮದಾಯಕವಾಗಿದ್ದರೆ, ಎರಡು ಮೂರು ದಿನಗಳಲ್ಲಿ ನಾವು ಅವರನ್ನು ಡಿಸ್ಚಾರ್ಜ್ ಮಾಡುತ್ತೇವೆ ಎಂದು ಡಾ ನಿತಿನ್ ಹೇಳಿದರು. ವೈದ್ಯರ ತಂಡ ಆತನನ್ನು ಪರೀಕ್ಷಿಸಿ ನಡೆಯುವಂತೆ ಮಾಡಿದೆ ಎಂದು ಹೇಳಿದರು.ವೈದ್ಯರು ಬೆನ್ನಿನ ಚೂಪಾದ ವಸ್ತುವನ್ನು ಹೊರತೆಗೆದಿದ್ದಾರೆ ಮತ್ತು ಬೆನ್ನುಮೂಳೆಯ ಗಾಯವನ್ನು ಸರಿಪಡಿಸಿದ್ದಾರೆ ಎಂದು ಅವರು ಹೇಳಿದರು.

## ಕೋಕನಟ್–ಕೋಡ್‌ವರ್ಡ್ ಬಳಕೆ

### ಮೊದಲ ಪುಟದಿಂದ

ಜಯರಾಮ್ ಆಗಿದ್ದಾನೆ ಎನ್ನಲಾಗುತ್ತಿದೆ.ರಾಜಕಾರಣಿಗಳು ಮತ್ತು ಅಧಿಕಾರಿಗಳಿಗೆ ಬೇನಾಮಿಯಾಗಿರುವ ಆರೋಪಕ್ಕೆ ಸಂಬಂಧಿಸಿದಂತೆ ಜಯರಾಮ್ ಮನೆ ಹಾಗೂ ಕಚೇರಿಯಲ್ಲಿ ಇಡಿ ಅಧಿಕಾರಿಗಳು ನಿರಂತರ 70 ಗಂಟೆಗಳ ಕಾಲ ದಾಳಿ ಮಾಡಿದ್ದರು. ಜಯರಾಮ್ ಮನೆಯಲ್ಲೆ ಬಹುತೇಕ ಬೇನಾಮಿ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳು ಸಿಕ್ಕಿದೆ. ಈ ಜಯರಾಮ್ ವಕ್ರತುಂಡ ಗೃಹನಿರ್ಮಾಣ ಸಹಕಾರ ಸಂಘ ಸ್ಥಾಪನೆ ಮಾಡಿದ್ದ. ಈ ಸಂಘದಲ್ಲಿ ಮುಡಾ ಮಾಜಿ ಆಯುಕ್ತ ದಿನೇಶ್ ಕುಟುಂಬಸ್ಥರು ನಿರ್ದೇಶಕರಾಗಿದ್ದರು.ಬಹುತೇಕ ಬೇನಾಮಿ ವ್ಯವಹಾರಗಳನ್ನು ಈ ಸಹಕಾರ ಸಂಘದ ಹೆಸರಿನಲ್ಲಿ ಮಾಡಲಾಗಿದೆ.ಜಯರಾಮ್ ಮನೆಯಲ್ಲಿ ದಾಖಲೆಗಳನ್ನು ಶೋಧಿಸುತ್ತಿದ್ದ ಇಡಿಗೆ ವಾಟ್ಸಪ್ ಚಾಟ್ ಪರಿಶೀಲಿಸಿದ್ದಾರೆ. ಈ ವೇಳೆ 1 ಕೋಕನಟ್ ಕಳುಹಿಸಿದ್ದೇನೆ. 50 ಕೋಕನಟ್ ಕಳುಹಿಸಿದ್ದ ಮೆಸೇಜ್‌ಗಳು ಅಧಿಕಾರಿಗಳ ಗಮನ ಸೆಳೆದಿದೆ.ರಿಯಲ್ ಎಸ್ಟೇಟ್ ಕೆಲಸ ಮಾಡುವ ಈತ ಕೋಕನಟ್ ಯಾಕೆ ಕಳುಹಿಸುತ್ತಾನೆ ಎಂದು ಅನುಮಾನ ಬಂದು ಮತ್ತಷ್ಟು ವಿಚಾರಣೆಗೆ ಒಳಪಡಿಸಿದಾಗ ಕೋಕನಟ್ ಸತ್ಯ ಬೆಳಕಿಗೆ ಬಂದಿದೆ.

## ಸಮಾಜದ ಪರವಾಗಿರುತ್ತದೆ: ಸಿಎಂ

ಶಕ್ತಿಯುತ ಮಾಧ್ಯಮ. ಜನ ನಿಮ್ಮ ಕಡೆ ನೋಡ್ತಾ ಇದ್ದಾರೆ. ಈ ಎಚ್ಚರಿಕೆ ಸದಾ ಇರಲಿ ಎಂದರು. **ಕೆಲವೇ ದಿನದಲ್ಲಿ ಬಸ್ ಪಾಸ್** : ಗ್ರಾಮೀಣ ಪತ್ರಕರ್ತರ ಉಚಿತ ಬಸ್ ಪಾಸ್ ಸದ್ಯದಲ್ಲೇ ನಿಮ್ಮ ಕೈ ಸೇರಲಿದೆ, ಪತ್ರಕರ್ತರ ಕುಟುಂಬಕ್ಕೆ ಆರೋಗ್ಯ ವಿಮೆ ನೀಡುವ ಬಗ್ಗೆ ತೀರ್ಮಾನ ಮಾಡಲಾಗುವುದು. ಪತ್ರಕರ್ತರ ಮಾಸಾಶನವನ್ನೂ 3 ಸಾವಿರದಿಂದ 12 ಸಾವಿರಕ್ಕೆ ಹೆಚ್ಚಿಸಲಾಗಿದೆ ಎಂದರು. ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಗೃಹ ಸಚಿವ ಜಿ.ಪರಮೇಶ್ವರ್, ಸಹಕಾರಿ ಸಚಿವ ಕೆ.ಎನ್.ರಾಜಣ್ಣ, ರಾಜ್ಯ ಸರಕಾರದ ದೆಹಲಿ ಪ್ರತಿನಿಧಿ ಟಿ.ಬಿ.ಜಯಚಂದ್ರ, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಸೇರಿ ಜಿಲ್ಲೆಯ ಶಾಸಕರುಗಳು ಹಾಗೂ ಹಲವು ಪ್ರಮುಖರು ಮತ್ತು ಜಿಲ್ಲಾಡಳಿತದ ಅಧಿಕಾರಿಗಳು ಉಪಸ್ಥಿತರಿದ್ದರು.

ಮೊದಲಿಗೆ ಸಮ್ಮೇಳನದ ಆವರಣದಲ್ಲಿ ಆಯೋಜಿಸಿದ್ದ ಸ್ಟಾಲ್ ಗಳನ್ನು ವೀಕ್ಷಿಸಿದ ಮುಖ್ಯಮಂತ್ರಿಗಳು ಮಹಿಳಾ ಸ್ವ ಸಹಾಯ ಸಂಘಗಳು ಸಿದ್ದಪಡಿಸಿದ ತಿಂಡಿ ಸವಿದರು.

# ಶಿವಯೋಗಿ ಸಿದ್ದರಾಮೇಶ್ವರರ ಅಧ್ಯಯನ ಪೀಠವನ್ನು ಸ್ಥಾಪಿಸಲು ಒತ್ತಾಯ

**ಮಾಗಡಿ:** ತಾಲೂಕಿನ ವೀರಾಪುರದಲ್ಲಿ ಸಂಸ್ಕೃತಿ ವಿಶ್ವವಿದ್ಯಾಲಯ ಸ್ಥಾಪಿಸಲಾಗಿದ್ದು, ಸರ್ಕಾರ ಅಲ್ಲಿ ಸಂತ ಶಿವಯೋಗಿ ಸಿದ್ದರಾಮೇಶ್ವರರ ಅಧ್ಯಯನ ಪೀಠವನ್ನು ಸ್ಥಾಪಿಸುವ ಮೂಲಕ ಸಮಾಜದ ಪ್ರಗತಿಗೆ ಪ್ರೋತ್ಸಾಹಿಸಬೇಕೆಂದು ತಾಲೂಕು ಬೋವಿ ಸಮಾಜದ ಅಧ್ಯಕ್ಷ ಬಿ.ಟಿ.ವೆಂಕಟೇಶ್ ಸರ್ಕಾರವನ್ನು ಒತ್ತಾಯಿಸಿದರು.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ತಾಲೂಕು ಆಡಳಿತ ಮತ್ತು ಬೋವಿ ಸಂಘದ ವತಿಯಿಂದ ನಡೆದ ಸಂತಶಿವಯೋಗಿ ಸಿದ್ದರಾಮೇಶ್ವರರ 852ನೇ ಜಯಂತೋತ್ಸವ ಸಮಾರಂಭದಲ್ಲಿ ಶಿವಯೋಗಿ ಸಿದ್ದರಾಮೇಶ್ವರರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಅವರು, ಬೋವಿ ಸಮಾಜದವರು ದಡ್ಡರಲ್ಲ, ಅವರೂ ಕೂಡ ಸಮಾಜದಲ್ಲಿ ಗುಡಿ,ಗೋಪುರಗಳನ್ನು ,ಕೆರೆಕಟ್ಟೆಗಳನ್ನು ಕಟ್ಟುವ ಮೂಲಕ ತಮ್ಮದೇ ಆದ ಸೇವೆಯನ್ನು ಸಲ್ಲಿಸಿ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ. ಸಮಾನತೆಯ ಸಮಾಜಕ್ಕೆ ಅಡಿಪಾಯವನ್ನು ಹಾಕಿಕೊಟ್ಟಿದ್ದಾರೆ ಎಂದರು.

ಸಿದ್ದರಾಮೇಶ್ವರರರು ಕಪಿಲ ಸಿದ್ದ ಮಲ್ಲಿಕಾರ್ಜುನ ಎಂದೂ ಕರೆಯಲ್ಪಡುವ ಶ್ರೀ ಶಿವಯೋಗಿ ಸಿದ್ದರಾಮೇಶ್ವರರು ನಿಜವಾಗಿಯೂ ಲಿಂಗಾಯತ ಬೋಧನೆ ಮತ್ತು ತತ್ವಶಾಸ್ತ್ರದ ಬೆಳವಣಿಗೆಯಲ್ಲಿ ಗಮನಾರ್ಹ ವ್ಯಕ್ತಿಯಾಗಿದ್ದರು.ಶಿವಯೋಗಿ ಸಿದ್ದರಾಮೇಶ್ವರರು ಪ್ರಬುದ್ಧ ಲೇಖಕರು ಮಾತ್ರವಲ್ಲದೆ ತಮ್ಮ ಕಾಲದಲ್ಲಿ ಪ್ರಗತಿಪರ ಆದರ್ಶಗಳನ್ನು ಪ್ರತಿಪಾದಿಸಿದ ಸಮಾಜ ಸುಧಾರಕರೂ ಆಗಿದ್ದರು. ಅವರ ಆದರ್ಶಗಳನ್ನು ನಾವೆಲ್ಲರೂ ಜೀವನದಲ್ಲಿ ಅಳವಡಿಸಿಕೊಂಡು ಸಮಾಜದ ಮುನ್ನೆಡೆಗೆ ಶಕ್ತಿ ಮೀರಿ ಶ್ರಮಿಸೋಣ ಎಂದರು.



ತಹಶೀಲ್ದಾರ್ ಶರತ್ ಕುಮಾರ್ ಮಾತನಾಡಿ, ಸಿದ್ದರಾಮೇಶ್ವರ ಜಯಂತಿಯು ಕರ್ನಾಟಕದ 12 ನೇ ಶತಮಾನದ ಸಂತ ಕವಿಯ ಜನ್ಮದಿನವಾಗಿದೆ. 2025 ರಲ್ಲಿ, ಸಿದ್ದರಾಮೇಶ್ವರ ಜಯಂತಿಯನ್ನು ಜನವರಿ 14 ರಿಂದ 16 ರವರೆಗೆ ಆಚರಿಸಲಾಗುತ್ತಿದ್ದು, ಲಿಂಗಾಯತ ಪಂಥದ ಐದು ಪ್ರಮುಖ ಶಿಕ್ಷಕರಲ್ಲಿ ಒಬ್ಬರಾಗಿ, ಅವರ ಕೊಡುಗೆಗಳು ಲಿಂಗಾಯತ ಸಮುದಾಯ ಮತ್ತು ಅದರಾಚೆಗೆ ಶಾಶ್ವತವಾದ ಪ್ರಭಾವವನ್ನು ಬೀರಿವೆ.ಅವರ ಚಿಂತನೆಗಳು ನಮ್ಮೆಲ್ಲರಿಗೂ ದಾರಿದೀಪವಾಗಿದೆ ಎಂದ ಅವರು ಸರ್ಕಾರ ಬೋವಿ ಸಮುದಾಯದವರಿಗೆ ಸೌಲತ್ತುಗಳನ್ನು ಕಾಲಕಾಲಕ್ಕೆ ನೀಡುತ್ತಿದ್ದು, ಸದ್ಬಳಕೆ ಮಾಡಿಕೊಳ್ಳಬೇಕು, ಶೈಕ್ಷಣಿಕವಾಗಿ ಮುಂದೆ ಬರಬೇಕು. ಈ ನಿಟ್ಟಿನಲ್ಲಿ ಸಮಾಜದಲ್ಲಿ ಮುಂದೆ ಬರಬೇಕೆಂದು ತಿಳಿಸಿದರು.

ಜಿಲ್ಲಾ ಬೋವಿ ಸಮಾಜದ ಉಪಾಧ್ಯಕ್ಷ ಗ್ರಾನೇಟ್ ಶಂಕರ್ ಮಾತನಾಡಿ, ಸಿದ್ಧರಾಮೇಶ್ವರರ ಗಮನಾರ್ಹ ಪರಂಪರೆಯೆಂದರೆ ಅವರ ವ್ಯಾಪಕವಾದ ವಚನಗಳ ರಚನೆ, ಅವು ಕಾವ್ಯದ ಶ್ಲೋಕಗಳ ರೂಪದಲ್ಲಿ ಪವಿತ್ರ ಬೋಧನೆಗಳಾಗಿವೆ. ಅವರು ತಮ್ಮ ಜೀವಿತಾವಧಿಯಲ್ಲಿ 68,000 ಕ್ಕೂ ಹೆಚ್ಚು ವಚನಗಳನ್ನು ರಚಿಸಿದ್ದಾರೆ ಎಂದು ವರದಿಯಾಗಿದೆ, ಇದು ಅವರ ಆಳವಾದ ಆಧ್ಯಾತ್ಮಿಕ ಒಳನೋಟಗಳು ಮತ್ತು ಭಕ್ತಿಯನ್ನು ಪ್ರತಿಬಿಂಬಿಸುತ್ತದೆ. ಆದರೆ, ಸುಮಾರು 1,992 ವಚನಗಳ ಅವರ ಕೃತಿಯ ಒಂದು ಭಾಗ ಮಾತ್ರ ಇಂದು ನಮಗೆ ಲಭ್ಯವಾಗುತ್ತಿರುವುದು ವಿಷಾದನೀಯ. ಈ ನಷ್ಟದ ಸಿದ್ದರಾಮೇಶ್ವರರು ರಚಿಸಿ ಸಂರಕ್ಷಿಸಲ್ಪಟ್ಟಿರುವ ವಚನಗಳು ಅವರ ಬೋಧನೆಗಳು ಮತ್ತು ತತ್ವಶಾಸ್ತ್ರದ ಬಗ್ಗೆ ಅಮೂಲ್ಯವಾದ ಒಳನೋಟಗಳನ್ನು ಒದಗಿಸುತ್ತವೆ. ಇವುಗಳ ರಕ್ಷಣೆಗೆ ಅಧ್ಯಾಯನ ಪೀಠ ಅನಿವಾರ್ಯವಾಗಿದೆ.

ತಾಲೂಕು ಪಂಚಾಯ್ತಿ ಮಾಜಿ ಸದಸ್ಯ ಸಿ.ಜಯರಾಮ್ ಮಾತನಾಡಿ, ಸಿದ್ದರಾಮೇಶ್ವರರು ಪ್ರಬುದ್ಧ ಲೇಖಕರು ಮಾತ್ರವಲ್ಲದೆ ತಮ್ಮ ಕಾಲದಲ್ಲಿ ಪ್ರಗತಿಪರ ಆದರ್ಶಗಳನ್ನು ಪ್ರತಿಪಾದಿಸಿದ ಸಮಾಜ ಸುಧಾರಕರೂ ಆಗಿದ್ದರು. ಅವರು ದೈಹಿಕ ಶ್ರಮದ ಪ್ರಾಮುಖ್ಯತೆಯನ್ನು ಒತ್ತಿಹೇಳಿದರು, ಆಧ್ಯಾತ್ಮಿಕ ಅಭ್ಯಾಸದ ಸಾಧನವಾಗಿ ದುಡಿಮೆಯಲ್ಲಿ ತೊಡಗಿಸಿಕೊಳ್ಳಲು ವ್ಯಕ್ತಿಗಳನ್ನು ಪೋತ್ಸಾಹಿಸಿದರು. ಹೆಚ್ಚುವರಿಯಾಗಿ, ಅವರು ಸಮುದಾಯದ ಕಾರ್ಮಿಕರ ಪರಿಕಲ್ಪನೆಯನ್ನು ಉತ್ತೇಜಿಸಿದರು, ಸಮಾಜದ ಸುಧಾರಣೆಗಾಗಿ ಸಾಮೂಹಿಕ ಪ್ರಯತ್ನದ ಮಹತ್ವವನ್ನು ಒತ್ತಿಹೇಳಿದರು.

ಸಂಸ್ಕೃತ ಪಂಡಿತ ಕಣ್ಣೂರು ರಾಜಣ್ಣಮಾತನಾಡಿ, ಸಂತಶಿವಯೋಗಿ ಸಿದ್ದರಾಮೇಶ್ವರರು ಆಧ್ಯಾತ್ಮಿಕ ನಾಯಕರಾಗಿ, ಸಮಾಜ ಸುಧಾರಕರಾಗಿ ಮತ್ತು ಸಮೃದ್ಧ ಬರಹಗಾರರಾಗಿದ್ದರು ಸಿದ್ದರಾಮಯ್ಯನವರ ಕೊಡುಗೆಗಳು ಲಿಂಗಾಯತ ಧರ್ಮದ ಇತಿಹಾಸದಲ್ಲಿ ಅಳಿಸಲಾಗದ ಛಾಪು ಮೂಡಿಸಿವೆ ಮತ್ತು ಅವರ ಆಳವಾದ ಬುದ್ಧಿವಂತಿಕೆ ಮತ್ತು ಪ್ರಗತಿಪರ ಆದರ್ಶಗಳೊಂದಿಗೆ ಪೀಳಿಗೆಗೆ ಸ್ಫೂರ್ತಿ ನೀಡುವುದನ್ನು ಮುಂದುವರೆಸಿದೆ. ಇದರ ಮಾರ್ಗದರ್ಶನದಲ್ಲಿ ನಾನೂ ಕೂಡ ಅವಿರತವಾಗಿ ಸಮಾಜಮುಖಿಯಾಗಿ ಸೇವೆ ಸಲ್ಲಿಸಿಕೊಂಡು ಬರುತ್ತಿದ್ದು, ನನಗೆ ಅನೇಕ ಸಂಘ,ಸಂಸ್ಥೆಗಳು ಗೌರವಿಸಿದೆ ಎಂದು ಸಂತಸ ವ್ಯಕ್ತಪಡಿಸಿದರು. ಗ್ರೇಡ್ 2ತಹಶೀಲ್ದಾರ್ ಪ್ರಭಾಕರ್ ಮಾತನಾಡಿದರು. ಪುರಸಭೆ ಮಾಜಿ ಅಧ್ಯಕ್ಷ ನಾಗರಾಜು, ತಾಪಂ ಮಾಜಿ ಅಧ್ಯಕ್ಷೆ ಅರುಂಧತಿ ಚಿಕ್ಕಣ್ಣ, ಹೂಜುಗಲ್ಲು ರಾಜಣ್ಣ, ಹನುಮಾಪುರ, ಕುಮಾರಸ್ವಾಮಿ, ಶಂಕರ್ ನಾರಾಯಣ, ಗುಣಶೇಖರ್, ಶಿವಲಿಂಗಯ್ಯ, ಚಂದೂರಾಯನಹಳ್ಳಿ ಶಿವರಾಮೇಗೌಡ, ಆರ್‌ಟಿಓ ಇಲಾಖೆಯ ಗಂಗಣ್ಣ, ವೆಂಕಟೇಶ್, ತಿರುಮಲೆ ಪಾಂಡು, ಸಿಡಿಗನಹಳ್ಳಿ ವೆಂಕಟೇಶ್, ಶಂಕರ್ ಇತರರು ಇದ್ದರು.

# ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಲು ಮನವಿ

**ಶಿಡ್ಲಘಟ್ಟ:** ಪೊಲೀಸ್ ಬಂದೋಬಸ್ತ್ ನಡುವೆಯು ಭೂ ಮಾಪಕರ ಮೇಲೆ ಚಿಂತಾಮಣಿ ತಾಲ್ಲೂಕಿನಲ್ಲಿ ಹಲ್ಲೆ ಮಾಡಲಾಗಿದ್ದು, ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಿ ತಾಲ್ಲೂಕಿನ ಭೂ ಮಾಪಕರು ತಮ್ಮ ಕೆಲಸ ಸ್ಥಗಿತಗೊಳಿಸಿ ಭೂದಾಖಲೆಗಳ ಸಹಾಯಕ ನಿರ್ದೇಶಕ ಜಯಪ್ಪ ಅವರಿಗೆ ಮನವಿಯನ್ನು ಸಲ್ಲಿಸಿದರು.



ಚಿಂತಾಮಣಿ ತಾಲ್ಲೂಕು ಮುರುಗಮಲ್ಲ ಹೋಬಳಿ "ಪೆದ್ದೂರು" ಗ್ರಾಮದಲ್ಲಿಭೂ ಮಾಪಕರ ಕೆಲಸನಿರ್ವಹಿಸುವಾಗ ಬಾಜುದಾರರು ಹಲ್ಲೆ ನಡೆಸಿದ್ದಾರೆ. ಪೊಲೀಸ್ ಬಂದೋಬಸ್ತ್ ಇದ್ದರೂ ಹಲ್ಲೆ ನಡೆದಿದೆ.

ಭೂ ಮಾಪಕರಿಗೆ ಸೂಕ್ತ ರಕ್ಷಣೆ ನೀಡಬೇಕು ಹಲ್ಲೆ ನಡೆಸಿರುವವರ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿ, ನ್ಯಾಯ ಸಿಗುವ ತನಕ ಅನಿರ್ದಿಷ್ಟಾವಧಿ ಕೆಲಸ ಸ್ಥಗಿತಗೊಳಿಸಲಾಗುವುದು. ತಾಲ್ಲೂಕಿನ ಎಲ್ಲಾ ಪರವಾನಗಿ ಭೂಮಾಪಕರ ಲಾಗಿನ್ ಸ್ಥಗಿಸ ಗೊಳಿಸಬೇಕೆಂದು ಸಹಾಯಕ ನಿರ್ದೇಶಕರಲ್ಲಿ ಕೋರಿದರು. ಈ ಸಂದರ್ಭದಲ್ಲಿ ಭೂ ಮಾಪಕರುಗಳ ಸಂಘದರಾಜ್ಯ ಸಮಿತಿ ಸದಸ್ಯ ದ್ವಾರಕೀಶ್, ತಾಲ್ಲೂಕು ಅಧ್ಯಕ್ಷ ಬಿ.ಟಿ.ವೆಂಕಟೇಶ್, ಕಾರ್ಯದರ್ಶಿ ಎನ್.ಚಂದ್ರಶೇಖರ್, ರಾಜೇಂದ್ರರೆಡ್ಡಿ, ಶಿವರಾಮರೆಡ್ಡಿ,ಹರಿಲಾಲ್ ನಾಯಕ್, ನಾರಾಯಣಪ್ಪ, ನಾಗರಾಜ್, ರವಿ. ಮಂಜುಳಾ, ರಾಜಶೇಖರ್, ಬಿ.ಆರ್.ವೆಂಕಟೇಶ್ ಮತ್ತಿತರರು ಹಾಜರಿದ್ದರು.

# ಉಚಿತ ಆರೋಗ್ಯ ಶಿಬಿರ; ಉತ್ತಮ ಕೆಲಸ

**ಗೌರಿಬಿದನೂರು:** ಗ್ರಾಮೀಣ ಭಾಗದ ಜನರು ಆರೋಗ್ಯ ಮತ್ತು ವಿದ್ಯಾಭ್ಯಾಸದಿಂದ ವಂಚಿತರಾಗುತ್ತಿದ್ದಾರೆ ಇವುಗಳನ್ನು ಮನಗೊಂಡ ಮೌಂಟ್ ಕಾರ್ಮೆಲ್ ಕಾಲೇಜಿನ ಎನ್.ಎಸ್.ಎಸ್ ಘಟಕವು ಹಳ್ಳಿಯ ಜನರಿಗೆ ಉಚಿತ ಆರೋಗ್ಯ ಶಿಬಿರವನ್ನು ಆಯೋಜಿಸಿ ಉತ್ತಮ ಕೆಲಸವನ್ನು ಮಾಡುತ್ತಿದ್ದಾರೆ ಎಂದು ತಹಶಿಲ್ದಾರ್ ಮಹೇಶ್ ಎಸ್.ಪತ್ರಿ ತಿಳಿಸಿದರು.



ತಾಲ್ಲೂಕಿನ ತೊಂಡೇಬಾವಿ ಹೋಬಳಿ ಹುಚ್ಚಗೊಲ್ಲಹಳ್ಳಿಯಲ್ಲಿ ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜು (ಸ್ವಾಯತ್ತ) ಎನ್.ಎಸ್. ಎಸ್ ಘಟಕದ ವತಿಯಿಂದ ಏಳು ದಿನಗಳ ಕಾಲ ವಾರ್ಷಿಕ ವಿಶೇಷ ಶಿಬಿರದಲ್ಲಿ ಬಾಗವಹಿಸಿ ಅವರು ಮಾತನಾಡಿದರು.

ಈ ಸಂಸ್ಥೆಯವರು ಗೌರಿಬಿದನೂರು ತಾಲ್ಲೂಕಿನಲ್ಲಿ ಹೊಸ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ ಹಳ್ಳಿಗಾಡಿನ ಜನತೆಗೆ ಉತ್ತಮ ಶಿಕ್ಷಣವನ್ನು ನೀಡಲು ಮುಂದಾಗಿರುವುದು ಸಂತೋಷದ ವಿಷಯವೆಂದು ತಿಳಿಸಿದರು. ಇದೇ ವೇಳೆ ಏಳು ದಿನಗಳ ಶಿಬಿರದಲ್ಲಿ ಉಚಿತ ಆರೋಗ್ಯ ಶಿಬಿರ, ಸರ್ಕಾರಿ ಶಾಲಾ ಕೊಠಡಿಗಳಿಗೆ ಬಣ್ಣ ಬಳಿಯುವುದು, ಸ್ವಚ್ಛತೆ, ಸರ್ಕಾರದ ಯೋಜನೆಗಳನ್ನು ಗ್ರಾಮ ಭಾಗದ ಜನರಿಗೆ ತಲುಪಿಸುವುದು, ಗಿಡ ನೆಡುವುದು, ಚೆಕ್ ಡ್ಯಾಮ್ ನಿರ್ಮಿಸುವುದು, ಹಳ್ಳಿಯ ಮಹಿಳೆಯರಿಗೆ ಸ್ವ- ಉದ್ಯೋಗ ತರಬೇತಿ, ನೀರಿನ ಸಂರಕ್ಷಣೆ, ಪೋಕ್ಸೋ ಮತ್ತು ಸೈಬರ್ ಅಪರಾಧ, ಕಾನೂನಿನ ಬಗ್ಗೆ ಜಾಗೃತಿ ಮೂಡಿಸುವುದು ಹಾಗೂ ಶಿಬಿರಾರ್ಥಿಗಳಿಗೆ ವ್ಯಕ್ತಿತ್ವ ವಿಕಾಸ ಮತ್ತು ನಾಯಕತ್ವ ಗುಣಗಳನ್ನು ವೃದ್ಧಿ ಪಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ಈ ಸಂದರ್ಭದಲ್ಲಿ ಮೌಂಟ್ ಕಾರ್ಮೆಲ್ ಕಾಲೇಜಿನ ನಿರ್ದೇಶಕರಾದ ಸಿಸ್ಟರ್ ಅಲ್ಬಿನ, ಪ್ರಾಂಶುಪಾಲರಾದ ಡಾ. ಜಾರ್ಜ್ ಲೇಖ, ಮಂಚೇನಹಳ್ಳಿ ಪೊಲೀಸ್ ಠಾಣೆಯ ಸಬ್ ಇನ್ಸ್ಪೆಕ್ಟರ್ ಮೂರ್ತಿ, ಎನ್. ಎಸ್.ಎಸ್.ಶಿಬಿರದ ಅಧಿಕಾರಿ ಹೆಚ್.ಜಿ.ಡಾ. ಗೋವಿಂದಗೌಡ, ಕಾಲೇಜಿನ ಸಿಬ್ಬಂದಿ ಹಾಗು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಲಾರಿ ಡಿಕ್ಕಿ: ಮಹಿಳೆ ಸಾವು

ಆನೇಕಲ್: ದ್ವಿಚಕ್ರ ವಾಹನಕ್ಕೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಹಿಂಬದಿ ಕುಳಿತಿದ್ದ ಮಹಿಳೆ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಆನೇಕಲ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ .

ಆನೇಕಲ್ ತಾಲೂಕಿನ ಜಿಗಣಿ ಮೂಲದ ಸೀಮಾ ಬಾನು(30) ಮೃತ ದುರ್ದೈವಿ.

ಪಟ್ಟಣದ ದೇವರಕೊಂಡ ವೃತ್ತದಲ್ಲಿ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದ ವೇಳೆ ಲಾರಿ ಡಿಕ್ಕಿ ಹೊಡೆದಿದೆ, ಲಾರಿ ದ್ವಿಚಕ್ರವಾಹನಕ್ಕೆ ಡಿಕ್ಕಿ ಆಗುತ್ತಿದ್ದಂತೆ ನಿಯಂತ್ರಣ ತಪ್ಪಿ ದ್ವಿಚಕ್ರವಾಹನ ಕೆಳಗೆ ಬಿದ್ದಿದ್ದು ಬೈಕ್ ನ ಹಿಂಬದಿಯಲ್ಲಿ ಕುಳಿತಿದ್ದ ಸೀಮಾ ಬಾನು ಚಕ್ರಕ್ಕೆ ಸಿಲುಕಿ ಸ್ಥಳದಲ್ಲಿ ಮೃತಪಟ್ಟಿದ್ದಾರೆ.

ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಸೀಮಾ ಬಾನು ಪತಿ ಜೊತೆ ಸಂಬಂಧಿಕರ ಮನೆಯಲ್ಲಿ ಆನೇಕಲ್ ಪಟ್ಟಣದ ದಿಣ್ಣೆ ಬಳಿ ಗ್ಯಾಸ್ ಸಿಲಿಂಡರ್ ತೆಗೆದುಕೊಂಡು ಹೋಗಲು ಬೈಕ್‌ನಲ್ಲಿ ಬಂದಿದ್ದರು.

ಘಟನೆ ನಡೆಯುತ್ತಿದ್ದಂತೆ ಸ್ಥಳಕ್ಕೆ ಆಗಮಿಸಿದ ಆನೇಕಲ್ ಪೊಲೀಸರು ದೇಹವನ್ನು ಆನೇಕಲ್ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಿದ್ದು, ಡಿಕ್ಕಿ ಹೊಡೆದ ಲಾರಿ ಚಾಲಕನನ್ನು ವಶಕ್ಕೆ ಪಡೆದು ಪ್ರಕರಣ ಸಂಬಂಧ ದೂರು ದಾಖಲಿಸಿಕೊಂಡಿದ್ದಾರೆ.

# ನಾಪತ್ತೆಯಾಗಿದ್ದ ಬಾಲಕ ಶವವಾಗಿ ಪತ್ತೆ



ಆನೇಕಲ್: ನಾಪತ್ತೆಯಾಗಿದ್ದ ಮಾತು ಬಾರದ ಬಾಲಕನೊಬ್ಬ ಇಂದು ಕೆರೆಯಲ್ಲಿ ಶವವಾಗಿ ಪತ್ತೆಯಾಗಿರುವ ಘಟನೆ ಸರ್ಜಾಪುರ ಸಮೀಪದ ಮುಗಳೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಮಟ್ಟನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಎಲ್ವಿನ್ ಡಿಸೋಜಾ (6) ಮೃತ ಬಾಲಕ.

ಮಧ್ಯಾಹ್ನ ಮಹಲ್ ಚೌಡದೇನಹಳ್ಳಿಯಲ್ಲಿರುವ ತನ್ನ ಮನೆಯಿಂದ ನಾಪತ್ತೆಯಾಗಿದ್ದ ಎಲ್ವಿನ್ ಎಷ್ಟು ಹುಡುಕಾಡಿದರೂ ಸಿಕ್ಕಿರಲಿಲ್ಲ. ಬಳಿಕ ಮನೆಯವರು ಸರ್ಜಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಅದರಂತೆ ಇಂದು ಮಟ್ಟನಹಳ್ಳಿ ಸಮೀಪದ ಖಾಸಗಿ ಬಡವಣೆಯ ಮುಂಭಾಗದ ರಸ್ತೆಯಲ್ಲಿ ಸೈಕಲ್ ತುಳಿಯುತ್ತ ಹೋದ ದೃಶ್ಯ ಸಿಸಿ ಟಿವಿಯಲ್ಲಿ ಸೆರೆಯಾಗಿತ್ತು. ಬಳಿಕ ಪೊಲೀಸರು ಮತ್ತು ವಿವಿಧ ಸಂಘಟನೆಗಳ ಮುಖಂಡರು ಜಂಟಿಯಾಗಿ ಪತ್ತೆ ಕಾರ್ಯಾಚರಣೆ ಹಮ್ಮಿಕೊಂಡಿದ್ದರು. ಬಳಿಕ ಡ್ರೋಣ್‌ನಲ್ಲಿ ಕಾರ್ಯಾಚರಣೆ ನಡೆಸಿದ ವೇಳೆ ಕೆರೆಯ ಬಳಿ ಎಲ್ವಿನ್‌ನ ಸೈಕಲ್ ಮತ್ತು ಬಟ್ಟೆ ಪತ್ತೆಯಾಗಿತ್ತು. ಬಾಲಕ ಎಲ್ವಿನ್ ತನ್ನ ಬಟ್ಟೆಗಳನ್ನು ಕಳಚಿ ನೀರಿಗಿಳಿದಿದ್ದು, ಈಜು ಬಾರದೇ ನೀರಿನಲ್ಲಿ ಮುಳಗಿ ಸಾವನ್ನಪ್ಪಿದ್ದಾನೆ ಎಂದು ಸಂಶಯ ವ್ಯಕ್ತಪಡಿಸಿಲಾಗಿದೆ.

# ಸ್ವಂತ ಖರ್ಚಿನಲಿ ಪ್ರವಾಸ ಮಾಡಿಸಿದ ಸಂಸ್ಕೃತ ವಿದ್ವಾನ್‌ಗೆ ಸನ್ಮಾನ

**ಮಾಗಡಿ:** ಮಕ್ಕಳಿಗೆ ವಿಮಾನದಲ್ಲಿ ಶೈಕ್ಷಣಿಕ ಪ್ರವಾಸ ಮಾಡಿಸುವುದರಿಂದ ಮತಷ್ಟು ಬುದ್ದ ಶಕ್ತಿ ಲಭಿಸಲಿದೆ ಎಂದು ಕರ್ನಾಟಕ ರಾಜ್ಯ ಸಂಸ್ಕೃತ ಪಾಠಶಾಲಾ ಶಿಕ್ಷಕರ ಸಂಘದ ರಾಜ್ಯ ಉಪಾಧ್ಯಕ್ಷ, ಸಂಸ್ಕೃತ ವಿದ್ವಾನ್ ಎಂ.ರಾಜಣ್ಣ ಹೇಳಿದ್ದಾರೆ.

ಪಟ್ಟಣದಲ್ಲಿ ಬೋವಿ ಸಮುದಾಯದ ವತಿಯಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ತುಮಕೂರು ಸಿದ್ದಗಂಗಾ ಶ್ರೀಗಳು ಯಾವುದೇ ಪವಾಡ ಮಾಡದೇ, ಮಾಟ ಮಂತ್ರಮಾಡದೇ ಮಕ್ಕಳೇ ದೇವರು ಎಂದು ಕಂಡು ನಾಡಿಗೆ ದೇವರಾದರೂ. ನಾವು ಅವರ ತತ್ವ-ಆದರ್ಶಗಳನ್ನು ಮೈಗೂಡಿಸಿಕೊಂಡು ಮಕ್ಕಳಿಗೆ ಏನಾದರೂ ಸೇವೆ ಮಾಡಬೇಕು. ವಿಮಾನವನ್ನು ಹತ್ತಿಸಬೇಕೆಂಬ ಆಸೆಯಿಂದ ಗ್ರಾಮೀಣ ಭಾಗದ ಸಿದ್ದಗಂಗಾ ಅನುದಾನಿತ ಶಾಲೆಯ 51 ಕಡುಬಡವರು, 5 ಮಂದಿ ಶಿಕ್ಷಕರು, 3 ಮಂದಿ ಅಡುಗೆ ಸಿಬ್ಬಂದಿಗಳನ್ನು 2,76 ಲಕ್ಷರೂ ಸ್ವಂತ ಹಣದಿಂದ 5 ದಿನ ಮಹಾರಾಷ್ಟ್ರದ ಸುತ್ತಮುತ್ತಲಿನ ಶೈಕ್ಷಣಿಕ ಸ್ಥಳಕ್ಕೆ ಕರೆದೋಯ್ಯಲಾಯಿತು. ಇದು ಖುಷಿ ತಂದಿದೆ. ಇದನ್ನು ಗುರುತಿಸಿ ತುಮಕೂರು ಜಿ.ಪಂ. ಸಿಇಓ, ತುಮಕೂರು ಹಿರೇಮಠ, ಚಿತ್ರದುರ್ಗ ಸಿದ್ದರಾಮೇಶ್ವರ ಪೀಠ, ಕೇಂದ್ರ ಸಚಿವೆ ನಿರ್ಮಲಾ ಸೀತಾರಾಂ ಪ್ರಶಸ್ತಿ ನೀಡಿದ್ದಾರೆ. ತಾಲೂಕು ಬೋವಿ ಸಮುದಾಯ, ತಾಲೂಕು ಆಡಳಿತ ಸನ್ಮಾನಿಸಿರುವುದರಿಂದ ಮತಷ್ಟು ಸಮಾಜ ಮುಖಿ ಕೆಲಸ ಮಾಡಲು ಶಕ್ತಿ ತುಂಬಿದೆ ಎಂದರು.



ತಾಲೂಕು ಬೋವಿ ಸಮುದಾಯದ ಅಧ್ಯಕ್ಷ ಬಿಟಿ.ವೆಂಕಟೇಶ್ ಮಾತನಾಡಿ, ತಾಲೂಕಿಗೆ ಸಂಸ್ಕೃತ ವಿಶ್ವವಿದ್ಯಾಲಯ ತರಲು ಮೊದಲ ಪ್ರಯತ್ನಮಾಡುವಲ್ಲಿ ಸಂಸ್ಕೃತ ವಿದ್ವಾನ್ ಎಂ.ರಾಜಣ್ಣ ಅವರ ಪ್ರಯತ್ನ ಮೆಚ್ಚುವಂತದ್ದು ಇಂಥಹ ಸಾಮಾಜ ಮುಖಿ ಕೆಲಸ ಮಾಡುವ ಜೊತೆಗೆ ವಿದ್ಯಾರ್ಥಿಗಳಿಗೆ ವಿಮಾನದಲ್ಲಿ ಶೈಕ್ಷಣಿಕ ಪ್ರವಾಸ ಮಾಡಿಸುವ ಅವರ ಪರಿಕಲ್ಪನೆ ಎಲ್ಲರಿಗೂ ಮಾದರಿಯಾಗಿದೆ. ಇವರ ಸೇವಾ ಕಾರ್ಯ ಹಾಗೂ ಸಮಾಜ ಮುಖಿ ಚಿಂತನೆ ಮತಷ್ಟು ವಿಸ್ತರಿಸಲಿ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ತಹಶೀಲ್ದಾರ್ ಶರತ್ ಕುಮಾರು ಮಾತನಾಡಿ,ಶಿಕ್ಷಕರು ಮನಸ್ಸು ಮಾಡಿದರೆ ಏನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಎಂ.ರಾಜಣ್ಣ ಸಾಕ್ಷ್ಯಿಯಾಗಿದ್ದಾರೆ ಅವರಂತೆ ಎಲ್ಲಾ ಶಿಕ್ಷಕರು ಇಂಥಹ ಪ್ರಯತ್ನಮಾಡಿದರೆ ವಿದ್ಯಾರ್ಥಿಗಳಲ್ಲಿ ಶಿಕ್ಷಣದ ಮಹತ್ವ ಮತಷ್ಟು ಹೆಚ್ಚಲಿದೆ ಎಂದರು. ಉಪತಹಶೀಲ್ದಾರ್ ಪ್ರಭಾಕರ್, ಪುರಸಭೆ ಮಾಜಿ ಅಧ್ಯಕ್ಷ ನಾಗರಾಜು, ಟಿಎಪಿಸಿಎಂಎಸ್ ನಿರ್ದೇಶಕ ರಾಜಣ್ಣ, ಮುಖಂಡರಾದ ಗ್ರಾನೇಟ್ ಶಂಕರ್, ತಾ.ಪಂ. ಮಾಜಿ ಸದಸ್ಯ ಸಿ.ಜಯರಾಮು, ಮಾಜಿ ಅಧ್ಯಕ್ಷೆ ಅರುಂದತಿ ಚಿಕ್ಕಣ್ಣ, ದೊಡ್ಡಯ್ಯ, ಪಾಂಡು, ಶಿವಲಿಂಗಯ್ಯ, ನವೀನ್, ರಮೇಶ್ ಇತರರು ಇದ್ದರು.

# ಸರ್ಕಾರಿ ಜಮೀನು ಒತ್ತುವರಿಯಾಗಿಲ್ಲ

**ಚೇಳೂರು:** ಚೇಳೂರು ಸಮೀಪದ ಷೇರ್‌ಖಾನ್‌ಕೋಟೆ ಗ್ರಾಮದ ಹೊರವಲಯದಲ್ಲಿ ನಿರ್ಮಿಸುತ್ತಿರುವ ಮುನ್ ಸ್ಟಾರ್ ಲೇ-ಔಟ್‌ನಲ್ಲಿ ಸರಕಾರದ ಜಮೀನು ಒತ್ತುವರಿ ಮಾಡಿಲ್ಲ ಕಾಲುವೇದಾರಿಗಳು ಮುಚ್ಚಿಲ್ಲ ಎಂದು ಚೇಳೂರು ತಾಲ್ಲೂಕು ತಹಶೀಲ್ದಾರ್ ಶ್ರೀನಿವಾಸನಾಯ್ಡು ಹೇಳಿದ್ದಾರೆ.

ಸರಕಾರಿ ಹಳ್ಳ 33 ಅಡಿಗಳು ಅಗಲೀಕರಣ ಮಾಡಿ ಕೆರೆಗೆ ನೀರು ಹೋಗಲು ಅನೂಕೂಲ ಮಾಡಲಾಗಿದೆ. ಲೇ ಔಟ್‌ನಲ್ಲಿ ಯಾವುದೇ ಸಮಸ್ಯೆ ಇಲ್ಲ ಮಹಾದ್ವಾರ ಕೆಲಸ ಸರಕಾರದ ಆದೇಶ ಬರುವ ತನಕ ಕಾಂಗಾರಿ ನಿಲ್ಲಿಸಿದ್ದು ಅನುಮತಿ ಇಲ್ಲದೇ ನಿರ್ಮಾಣ ಮಾಡಿಸುವುದಿಲ್ಲ ಎಂದು ತಿಳಿಸಿದರು. ಅವರು ಚೇಳೂರು ತಾ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ ಪೆಮ್ಮಯ್ಯಗಾರಪಲ್ಲಿ ಗ್ರಾಮದ ಸರ್ವೆ.ನಂ. 32/4. 32/3. 32/9. 32/10. 32/11ರ ಜಮೀನುಗಳಲ್ಲಿ 26-10 ಗುಂಟೆ ಎ.ಖರಾಬು 0-38 ಗುಂಟೆ. ಬಿ.ಖರಾಬು 1-14. ಜಮೀನು ಖಾತೆದಾರರ ಹೆಸರಿನಲ್ಲಿ ಇದ್ದು ಜಿಲ್ಲಾಧಿಕಾರಿಗಳಿಂದ ಭೂ ಪರಿವರ್ತನೆ ಆಗಿದೆ ಸ.ನಂ. 34 ರಲ್ಲಿ ಸರಕಾರಿ ಖರಾಬು ಮತ್ತು ಮಹಾದ್ವಾರ ನಿರ್ಮಿಸಿದ್ದು ಅದನ್ನು ನಿಲ್ಲಸಲಾಗಿದೆ ಎಂದು ಹೇಳಿದರು. ಲೇ-ಔಟ್ ಸುತ್ತಮುತ್ತಲಿನ ರೈತರ ಜಮೀನುಗಳು ಸರಕಾರಿ ಖರಾಬುಗಳು ಹಳ್ಳ ಗಳು ಲೇ ಔಟ್ ಮಾಲೀಕರು ಆಕ್ರಮಣ ಮಾಡಿರುವ ಕುರಿತು ದೂರುಗಳು ನೀಡಿದ್ದರ ಮೇಲೆ ಕ್ರಮವೇನೆಂದು ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದ ತಹಸೀಲ್ದಾರ್ ಈ ಬಗ್ಗೆ ಕ್ಷೇತ್ರದ ಶಾಸಕರ ಸಮಕ್ಷಮದಲ್ಲಿ ರೈತರನ್ನು ಮುನ್ ಸ್ಟಾರ್ ಲೇ-ಔಟ್ ಮಾಲೀಕರನ್ನು ಕರೆಸಿ ಸಮಸ್ಯೆಗಳು ಹೇಳಿ ಬಗೆಹರಿಸಲಾಗಿದೆ ಎಂದರು. ಚೇಳೂರು ತಾಲ್ಲೂಕಿನಲ್ಲಿ ಸರಕಾರದ ರಾಜಕಾಲುವೆ. ಕೆರೆ. ಕುಂಟೆ. ಸ್ಮಶಾನ. ಗುಂಡುತೋಪು ನಕ್ಷೆಯಲ್ಲಿರುವ ದಾರಿಗಳು ಆಕ್ರಮಣ ಮಾಡಿದ್ದು ಹಲವಾರು ತೆರವು ಗೊಳಿಸಿ ಸರಕಾರದ ವಶಕ್ಕೆ ಪಡೆದುಕೊಳ್ಳಲಾಗಿದೆ. ಮುಂದೆ ಸಹಾ ಸರಕಾರದ ಸ್ವತ್ತುಗಳು ಯಾರೇ ಒತ್ತುವರಿ ಮಾಡಿರಲಿ ಮುಲಾಜು ಇಲ್ಲದೇ ಖಾಲೀ ಮಾಡಿಸಿ ಕಾನೂನು ಕ್ರಮ ಜರುಗಿಸಲಾಗುವುದು ಎಂದರು.

# ಅತಿಯಾದ ಅವಲಂಬನೆ ಅಧೋಗತಿಗೆ ಒಯ್ಯುತ್ತದೆ

**ಶಿಡ್ಲಘಟ್ಟ:** ಪತ್ರಿಕೆಗಳು ಕೂಡ ಸಾಹಿತ್ಯ ಪ್ರಕಾರವೇ ಪತ್ರಿಕೆಗಳ ಭಾಷೆ ಭಾವವಾಹಿನಿಯಿದ್ದಂತೆ ಜನರ ಹೃದಯ ತಟ್ಟಬಲ್ಲದು. ಅತಿಯಾದ ಅವಲಂಬನೆ ಮನುಷ್ಯನನ್ನು ಅಧೋಗತಿಗೆ ಒಯ್ಯುತ್ತದೆ ಎಂದು ತುಮಕೂರು ರಾಮಕೃಷ್ಣ-ವಿವೇಕಾನಂದ ಆಶ್ರಮದ ಅಧ್ಯಕ್ಷ ಶ್ರೀ ವೀರೇಶಾನಂದ ಸರಸ್ವತಿ ಸ್ವಾಮೀಜಿ ಅವರು ತಿಳಿಸಿದರು.




ನಗರದ ಶ್ರೀ ವಾಸವಿ ಕಲ್ಯಾಣಮಂಟಪದಲ್ಲಿ ನಡೆದ ಕೋಲಾರಪತ್ರಿಕೆ ಸುವರ್ಣ ಸಂಭ್ರಮ ವರ್ಷಾಚರಣೆ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿ ಅವರು ಮಾತನಾಡಿದರು.

ಸಾಹಿತ್ಯ ಲೋಕದ ಹೆಬ್ಬಾಗಿಲು ಪತ್ರಿಕೆಗಳು, ಅಘೋಷಿತ ವಿಶ್ವವಿದ್ಯಾನಿಲಯ ಹಾಗು ತುರ್ತು ಸಾಹಿತ್ಯ ಮಾಧ್ಯಮಎಂದರು.

ಇತಿಹಾಸ ಸಂಶೋಧಕರಾದ ಪ್ರೊ. ಕೆ.ಆರ್.ನರಸಿಂಹನ್ ಮಾತನಾಡಿ, ಕೋಲಾರ ಪತ್ರಿಕೆಯ ನಿರಂತರತೆ ಅದ್ಭುತ ಒಂದೂ ದಿನ ಕೂಡ ನಿಲ್ಲಲಿಲ್ಲ ಸಾಹಿತ್ಯಕವಾಗಿ ಹಾಗೂ ಸಾಮಾಜಿಕವಾಗಿ ವೇದಿಕೆ ಸೃಷ್ಟಿ ಮಾಡಿ ಸಾಹಿತಿಗಳನ್ನು ಕೋಲಾರ ಪತ್ರಿಕೆ ಬೆಳೆಸಿದೆ ಅವಿಭಜಿತ ಕೋಲಾರ ಜಿಲ್ಲೆಯ ಪತ್ರಿಕೋದ್ಯಮಕ್ಕೆ ಹಾದಿ ತೋರಿದವರು ಪ್ರಹ್ಲಾದರಾವ್ ಅವರು ಎಂದು ಹೇಳಿದರು.

ಕೋಲಾರ ಪತ್ರಿಕೆ ಪ್ರಕಾಶಕಿ ಕೆ.ಎನ್.ಶ್ರೀವಾಣಿ ಪ್ರಹ್ಲಾದರಾವ್ ಅವರು ಕೋಲಾರ ಪತ್ರಿಕೆಯ 50 ವರ್ಷಗಳ ಸುಧೀರ್ಘ ಹಾದಿ, ಪ್ರಕಟಿಸಿದ ಪುಸ್ತಕಗಳು ಹಾಗು ನಡೆಸಿರುವ ಸಾಮಾಜಿಕ ಕಾರ್ಯಗಳ ಬಗ್ಗೆ ಮೆಲುಕು ಹಾಕಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಎಸ್.ವಿ.ನಾಗರಾಜರಾವ್, ಶ್ರೀ ಸರಸ್ವತಿ ವಿದ್ಯಾಸಂಸ್ಥೆ ಅಧ್ಯಕ್ಷ ಎನ್. ಶ್ರೀಕಾಂತ್, ಆರ್ಯ ವೈಶ್ಯ ಮಂಡಲಿ ಅಧ್ಯಕ್ಷ ಟಿ.ಎ.ಕೃಷ್ಣಯ್ಯಶೆಟ್ಟಿ, ಕೋಲಾರ ಪತ್ರಿಕೆ ಸಂಪಾದಕ ಸುಹಾಸ್ ಪ್ರಹ್ಲಾದರಾವ್, ವಾಸವಿ ವಿದ್ಯಾಸಂಸ್ಥೆ ಆಡಳಿತಾಧಿಕಾರಿ ರೂಪಸಿ ರಮೇಶ್,ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್. ಮಂಜುನಾಥ್ ,ತಾಲ್ಲೂಕು ಕಸಾಪಅಧ್ಯಕ್ಷ ಟಿ.ನಾರಾಯಣಸ್ವಾಮಿ, ಪತ್ರಿಕೆಯ ವರದಿಗಾರ ನಾರಾಯಣಸ್ವಾಮಿ ಮುಂತಾದವರು ಹಾಜರಿದ್ದರು.

# ಜನಸಾಮಾನ್ಯರಿಗೆ ಗ್ಯಾರಂಟಿ ಸರಿಯಾಗಿ ತಲುಪಿಸಿ

**ನಾಗಮಂಗಲ;** ಸರ್ಕಾರದ ಐದುಗ್ಯಾರಂಟಿ ಯೋಜನೆಗಳ ಸಮರ್ಪಕ ಸದ್ಬಳಕೆ ಅನುಷ್ಠಾನ, ಜನಸಾಮಾನ್ಯರಿಗೂ ತಲುಪುವಂತಾಗ ಬೇಕೆಂದು ತಾಲೂಕು ಅಧಿಕಾರಿಗಳಿಗೆ ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರಾದ ಮೂಡ್ಲಿಗೌಡರವರು ಕರೆ ನೀಡಿದರು.




ಅವರು ನಾಗಮಂಗಲ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ಗ್ಯಾರಂಟಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಮೇಲ್ವಿಚಾರಣೆ ಸಮಿತಿ ಕರೆಯಲಾಗಿದ್ದ ಪ್ರಗತಿ ಪರಿಶೀಲನ ಸಮಿತಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ಸರ್ಕಾರದಿಂದ ಜಾರಿಗೊಳಿಸಿರುವ ಗೃಹಲಕ್ಷ್ಮಿ, ಅನ್ನ ಭಾಗ್ಯ,ಶಕ್ತಿಯೋಜನೆ, ಗೃಹಜ್ಯೋತಿ ಹಾಗೂ ಯುವನಿಧಿ ಯೋಜನೆಗಳ ಅರ್ಹಪಲಾನು ಭವಿಗಳ ವಿವರವನ್ನು ಇಲಾಖಾವಾರು ಅಧಿಕಾರಿಗಳಿಂದ ಮಾಹಿತಿ ಪಡೆದು ಕೊಳ್ಳಲಾಯಿತು.

ಗ್ರಾಮೀಣ ಪ್ರದೇಶದ ಜನರಿಗೆ ಗ್ಯಾರಂಟಿ ಯೋಜನೆಗಳನ್ನು ಒದಗಿಸುವ ನಿಟ್ಟಿನಲ್ಲಿ ಗ್ರಾಮಪಂಚಾಯತಿ ಮಟ್ಟದಲ್ಲಿ ನೆಡೆಯುವ ಸಾಮಾನ್ಯ ಸಭೆಯಲ್ಲಿ ಗ್ಯಾರಂಟಿ ಸಮಿತಿಯ ಸದಸ್ಯರು ಪಾಲ್ಗೊಂಡು ಯೋಜನೆಯ ಬಗ್ಗೆ ಚರ್ಚಿಸಬೇಕು. ಯೋಜನೆಯಿಂದ ವಂಚಿತರಾಗಿರುವ ಜನರಿಗೆ ಯೋಜನೆಯ ಸೌಲಭ್ಯ ಕಲ್ಪಿಸಿಕೊಡುವುದಾಗಿ ತಿಳಿಸಿದರು.

ಈ ವಿಚಾರವಾಗಿ ಸಂಬಂಧಿಸಿದ ಜಿಲ್ಲಾ ವ್ಯಾಪ್ತಿಯ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿದ್ದೇನೆ ಮುಂದಿನ ದಿನಗಳಲ್ಲಿ ಗ್ರಾಮೀಣ ಹಾಗೂ ಗ್ರಾಮಪಂಚಾಯ್ತಿ ಮಟ್ಟದ ಸಾಮಾನ್ಯ ಸಭೆಯಲ್ಲಿ ನಮ್ಮ ಕಮಿಟಿ ಸದಸ್ಯರು ಪಾಲ್ಗೊಂಡು ಯೋಜನೆಯನ್ನು ಎಲ್ಲರಿಗೂ ಕಲ್ಪಿಸುವ ಭರವಸೆ ನೀಡಿದರು.

ಸರ್ಕಾರದ ಗ್ಯಾರಂಟಿ ಯೋಜನೆಗಳು ಗ್ರಾಮ ಪಂಚಾಯಿತಿಯ ಮಟ್ಟದಿಂದಲೂ ಯೋಜನೆಗಳ ಸಮರ್ಪಕತೆ ಹಾಗೂ ಸಮಸ್ಯೆಗಳ ಬಗ್ಗೆ ಪರಿಶೀಲಿಸಿ ಫಲಾನುಭವಿಗಳಿಗೆ ಸಿಗುವಂತೆ ಮಾಡಬೇಕೆಂದು ಸಂಬಂಧ ಪಟ್ಟ ಎಲ್ಲಾ ಇಲಾಖೆ ಅಧಿಕಾರಿಗಳಿಗೂ ತಿಳಿಸಿದರು.

ಗ್ಯಾರಂಟಿ ಯೋಜನೆಗಳ ತಾಲೋಕು ಸದಸ್ಯರಾದ ತಮ್ಮಣ್ಣಗೌಡ. ರಾಘವೇಂದ್ರ, ದನರಾಜ್, ಶ್ರೀಧರ್,ನೀಲಾ,ಗೀತಾ, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಾಧಿಕಾರಿ ಸತೀಶ್, ಕೆಎಸ್‌ಆರ್‌ಟಿಸಿಡಿಪೋ ಮ್ಯಾನೇಜರ್ ಮಹೇಶ್, ಸಿಡಿಪಿಓ ಕೃಷ್ಣಮೂರ್ತಿ, ಚೆಸ್ಕಾಂಸಹಾಯಕ ಕಾರ್ಯಪಾಲಕ ಇಂಜಿನಿಯರ್ ತಿಲಕ್ ಹಾಗೂವಿವಿಧ ಇಲಾಖೆಯ ಅಧಿಕಾರಿಗಳು ಹಾಜರಿದ್ದರು.

# ಅನ್ಯರಿಗೆ ತೊಂದರೆ ಕೊಡದಿರುವುದೇ ದೊಡ್ಡ ಸೇವೆ: ಶ್ರೀ



**ಯಳಂದೂರು:** ಸಮಾಜದಲ್ಲಿ ಬೇರೆಯವರಿಗೆ ತೊಂದರೆ ಕೊಡದೆ ಬದುಕುವುದನ್ನು ಕಲಿತರೆ ಅದೇ ನಾವು ಸಮಾಜಕ್ಕೆ ಕೊಡುವ ದೊಡ್ಡ ಸೇವೆಯಾಗಿದೆ ಎಂದು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ತಿಳಿಸಿದರು.

ಅವರು ಗುರುವಾರ ಪಟ್ಟಣದ ಎಸ್‌ಡಿವಿಎಸ್ ವಿದ್ಯಾಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ದುಗ್ಗಹಟ್ಟಿ ಪಿ. ವೀರಭದ್ರಪ್ಪ ರವರ ಅಭಿನಂದನಾ ಸಮಾರಂಭದಲ್ಲಿ ದುಗ್ಗಹಟ್ಟಿ ಧೀಮಂತ ಕೃತಿ ಲೋಕಾರ್ಪಣೆ ಮಾಡಿ ಮಾತನಾಡಿದರು.

ಜೀವನ ಪವಿತ್ರವಾಗಿದೆ. ಇಲ್ಲಿ ಇರುವಷ್ಟು ದಿನ ಉತ್ತಮ ಕೆಲಸಗಳನ್ನು ಮಾಡಬೇಕು. ಸಮಾಜಕ್ಕೆ ಸೇವೆ ಮಾಡುವುದು ಜೀವನದ ಮುಖ್ಯ ಧ್ಯೇಯವಾಗಬೇಕು. ಈ ನಿಟ್ಟಿನಲ್ಲಿ ದುಗಹಟ್ಟಿ ಪಿ. ವೀರಭದ್ರಪ್ಪ ರಾಜಕೀಯಕ್ಕೆ ದುಮುಕಿ ತಾಲೂಕು ಬೋರ್ಡ್ ಅಧ್ಯಕ್ಷರಾಗಿ ಬೆಟ್ಟದ ರಸ್ತೆ ಮಾಡಿ ಉಳಿಕೆ ಹಣವನ್ನು ಸರ್ಕಾರಕ್ಕೆ 1961 ರಲ್ಲೇ ಹಣವನ್ನು ವಾಪಸ್ ನೀಡಿದ್ದರು. ನಂತರ ರಾಜಕೀಯ ಬಿಟ್ಟು ಬಂದು ಅನೇಕ ಸಮಾಜಪರ ಕೆಲಸಗಳು, ದೇಗುಲಗಳು, ಗದ್ದುಗೆಗಳ ಜೀರ್ಣೋದ್ಧಾರ, ಗ್ರಂಥಾಲಯ ಸ್ಥಾಪನೆ, ಗ್ರಾಮೀಣ ಭಾಗದಲ್ಲಿ ಉತ್ತಮ ಶಿಕ್ಷಣ ನೀಡುವ ಶಿಕ್ಷಣ ಸಂಸ್ಥೆ ಸೇರಿದಂತೆ ಅನೇಕ ಕೆಲಸಗಳನ್ನು ಮಾಡಿ ಜನಮನ್ನಣೆ ಗಳಿಸಿದ್ದಾರೆ. ಇವರ ಸೇವೆಯ ಕುರಿತು ಬೆಳಕು ಚೆಲ್ಲುವ, ಇದರೊಂದಿಗೆ ತಾಲೂಕಿನ ಇತಿಹಾಸವನ್ನು ತಿಳಿಸುವ ದುಗ್ಗಹಟ್ಟಿ ಧೀಮಂತ ಎಂಬ ಕೃತಿ ಸಂಗ್ರಹಯೋಗ್ಯವಾಗಿದೆ ಎಂದರು.

ಸಿದ್ದಗಂಗಾ ಮಠದ ಕಿರಿಯ ಶ್ರೀಗಳಾದ ಶಿವಸಿದ್ದೇಶ್ವರ ಸ್ವಾಮಿಜಿ ಮಾತನಾಡಿ, ಶಿವಶರಣರ ಕಾಯಕ ತತ್ವವನ್ನು ಮೈಗೂಡಿಸಿಕೊಂಡ ಕೆಲವರಲ್ಲಿ ವೀರಭದ್ರಪ್ಪರವರೂ ಒಬ್ಬರಾಗಿದ್ದಾರೆ.

ಹುಟ್ಟಿದ ಜಾತಿಗಿಂದ ಕಟ್ಟುವ ಗುಣವೇ ಮುಖ್ಯ, ಗಳಿಸಿದ ಸಂಪತ್ತಿಗಿದ ಬಳಸುವ ಶಿಸ್ತು ಮುಖ್ಯ ಎಂಬ ತತ್ವನ್ನು ಅಳವಡಿಸಿಕೊಂಡ ಇವರ ಜೀವನ ಸಾರ್ಥಕವಾಗಿದೆ. ಇದು ಅಭಿನಂದನಾ ಸಮಾರಂಭಕ್ಕಿಂತ ಹೆಚ್ಚಾಗಿ ಒಂದು ಸಾಮಾಜಿಕ ಸೇವೆ, ತ್ಯಾಗ ಮಾಡಿದ ವ್ಯಕ್ತಿಗೆ ಗೌರವ ಸಲ್ಲಿಸುವ ಕಾರ್ಯಕ್ರಮವಾಗಿದೆ ಎಂದರು.

ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಯಳಂದೂರು ತಾಲೂಕು ಚಿಕ್ಕ ತಾಲೂಕಾದರೂ ಇಲ್ಲಿ ಅನೇಕ ಮಹಾನ್ ವ್ಯಕ್ತಿಗಳು, ಕವಿಗಳು, ಸಮಜ ಸುಧಾರಕರು ಆಗಿ ಹೋಗಿದ್ದಾರೆ. ಇದರಲ್ಲಿ ದುಗ್ಗಹಟ್ಟಿ ಪಿ. ವೀರಭದ್ರಪ್ಪರವರೂ ಒಬ್ಬರಾಗಿದ್ದಾರೆ. ಇವರ ಮನಸ್ಸು ಸದಾ ಜನಪರ ಕಾಳಜಿ ಹಾಗೂ ತಾಲೂಕಿನ ಅಭಿವೃದ್ಧಿಗೆ ತುಡಿಯುತ್ತಿರುತ್ತದೆ. 90 ವಸಂತ ಕಂಡಿರುವ ಇವರು ಈಗಲೂ ಕೂಡ ಲವಲವಿಕೆಯಿಂದ ತಾಲೂಕಿನ ಅಭಿವೃದ್ಧಿಗೆ ಮಾರ್ಗದರ್ಶನ ನೀಡುವ ಮನೋಭಾವನೆ ಹೊಂದಿರುವುದು ಇವರ ಪ್ರಾಮಾಣಿಕ ಸೇವೆಗೆ ಹಿಡಿದ ಕನ್ನಡಿಯಾಗಿದೆ ಎಂದರು.

ಮಾಜಿ ಗೃಹ ಸಚಿವ ಸ್ಕೌಟ್ ಅಂಡ್ ಗೈಡ್ಸ್‌ನ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯಾ, ದುಗ್ಗಹಟ್ಟಿ ಪಿ. ವೀರಭದ್ರಪ್ಪ ಕುಂದೂರು ಮಠದ ಡಾ. ಶರತ್ ಚಂದ್ರ ಸ್ವಾಮಿಜಿ ಕೃತಿ ಪರಿಚಯವನ್ನು ಮಾಡಿಕೊಟ್ಟರು. ಚಾಮರಾಜನಗರ ಶಾಸಕ ಸಿ. ಪುಟ್ಟರಂಗಶೆಟ್ಟಿ, ಗುಂಡ್ಲುಪೇಟೆ ಶಾಸಕ ಎಚ್.ಎಂ. ಗಣೇಶ್‌ಪ್ರಸಾದ್, ಮಾಜಿ ಶಾಸಕರಾದ ಎಸ್. ಬಾಲರಾಜು, ಜಿ.ಎನ್. ನಂಜುಂಡಸ್ವಾಮಿ, ಪರಿಮಳಾ ನಾಗಪ್ಪ ಚಾಮುಲ್ ಅಧ್ಯಕ್ಷ ವೈ.ಸಿ. ನಾಗೇಂದ್ರ, ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಮಾತನಾಡಿದರು. ಪಪಂ ಅಧ್ಯಕ್ಷೆ ಲಕ್ಷ್ಮಿಮಲ್ಲು, ಎಸ್‌ಡಿವಿಎಸ್‌ಮ ವಿ. ಮಲ್ಲಿಕಾರ್ಜುನಸ್ವಾಮಿ, ವಿ. ಗಂಗಾಧರಸ್ವಾಮಿ, ದುಗ್ಗಹಟ್ಟಿ ರಾಜೇಶ್, ವಿಖ್ಯಾತ್, ವೀರಭದ್ರಸ್ವಾಮಿ ಸೇರಿದಂತೆ ಅನೇಕರು ಇದ್ದರು.

# ಜ.23ರಂದು ಗ್ರಾಮೀಣ ಕ್ರೀಡಾಕೂಟ

**ಚಾಮರಾಜನಗರ, :** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ 2024-25ನೇ ಸಾಲಿನ ಹನೂರು ತಾಲೂಕುಮಟ್ಟದ ಗ್ರಾಮೀಣ ಕ್ರೀಡಾಕೂಟವನ್ನು ಜನವರಿ 23 ರಂದು ಬೆಳಿಗ್ಗೆ 9 ಗಂಟೆಗೆ ಹನೂರಿನ ಶ್ರೀ ಮಲೈ ಮಹದೇಶ್ವರ ತಾಲೂಕು ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದೆ.

ಪುರುಷರಿಗೆ ವಾಲಿಬಾಲ್ (10 ಜನ), ಕಬ್ಬಡ್ಡಿ (10 ಜನ), ಹಗ್ಗ ಜಗ್ಗಾಟ (7 ಜನ) ಹಾಗೂ ಮಹಿಳೆಯರಿಗೆ ಕಬ್ಬಡ್ಡಿ (10 ಜನ), ಖೋ-ಖೋ (10 ಜನ), ಹಗ್ಗ ಜಗ್ಗಾಟ (7 ಜನ) ಸ್ಪರ್ಧೆಗಳನ್ನು ನಡೆಸಲಾಗುತ್ತದೆ. ಕ್ರೀಡಾಕೂಟದಲ್ಲಿ ಗ್ರಾಮೀಣ ಪ್ರದೇಶದ ಶಾಲಾ-ಕಾಲೇಜು ವಿದ್ಯಾರ್ಥಿಗಳು, ಯುವಕ-ಯುವತಿ ಸಂಘಗಳು ಮತ್ತು ಪುರುಷ-ಮಹಿಳಾ ಸಂಘಗಳ ಸ್ಪರ್ಧಿಗಳು ಭಾಗವಹಿಸಬಹುದು.

ಕ್ರೀಡಾಪಟುಗಳು ಕ್ರೀಡಾಕೂಟದ ದಿನದಂದು ಬೆಳಿಗ್ಗೆ 9 ಗಂಟೆಗೆ ಸಂಘಟಕರಲ್ಲಿ ವರದಿ ಮಾಡಿಕೊಳ್ಳಬೇಕು. ಭಾಗವಹಿಸುವ ಕ್ರೀಡಾಪಟುಗಳಿಗೆ ಮಧ್ಯಾಹ್ನದ ಉಪಹಾರ ಹಾಗೂ ವಿಜೇತರಿಗೆ ನಗದು ಬಹುಮಾನ, ಪ್ರಶಸ್ತಿ ಪತ್ರ, ಮೆಡಲ್, ಟ್ರೋಫಿಗಳನ್ನು ನೀಡಲಾಗುವುದು. ಕ್ರೀಡಾಪಟುಗಳಿಗೆ ಯಾವುದೇ ಪ್ರಯಾಣ ಭತ್ಯೆ ನೀಡಲಾಗುವುದಿಲ್ಲ. ತಾಲೂಕುಮಟ್ಟದ ಗ್ರಾಮೀಣ ಕ್ರೀಡಾಕೂಟದಲ್ಲಿ ಪ್ರಥಮ ಸ್ಥಾನ ಪಡೆದವರು ಜಿಲ್ಲಾಮಟ್ಟದ ಗ್ರಾಮೀಣ ಕ್ರೀಡಾಕೂಟದಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

ಕ್ರೀಡಾಕೂಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳು ಆಧಾರ್ ಕಾರ್ಡ್ ಪ್ರತಿಯನ್ನು ಕಡ್ಡಾಯವಾಗಿ ತರಬೇಕು ಹಾಗೂ ತಾಲೂಕುಮಟ್ಟದ ಕ್ರೀಡಾಕೂಟದಲ್ಲಿ ಹನೂರು ತಾಲೂಕಿನ ಕ್ರೀಡಾಪಟುಗಳು ಮಾತ್ರ ಭಾಗವಹಿಸಲು ಅರ್ಹರಾಗಿರುತ್ತಾರೆ. ತಾಲೂಕುಮಟ್ಟದಲ್ಲಿ ವಿಜೇತರಾದ ಕ್ರೀಡಾಪಟುಗಳು ಇಲಾಖೆವತಿಯಿಂದ ನೀಡುವ ಗುರುತಿನ ಚೀಟಿಯನ್ನು ಪಡೆದು ಇತ್ತೀಚಿನ ಭಾವಚಿತ್ರ ಹಾಗೂ ಬ್ಯಾಂಕ್ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸಿ ಜಿಲ್ಲಾಮಟ್ಟದ ಕ್ರೀಡಾಕೂಟಕ್ಕೆ ತರಬೇಕು ಹಾಗೂ ತೀರ್ಪುಗಾರರು ಗುರುತಿನ ಚೀಟಿಯನ್ನು ಕೇಳಿದ್ದಲ್ಲಿ ತೋರಿಸಬೇಕು. ಕ್ರೀಡಾಕೂಟದಲ್ಲಿ ತೀರ್ಪುಗಾರರ ತೀರ್ಮಾನವೇ ಅಂತಿಮವಾಗಿರುತ್ತದೆ.

ವಿಜೇತರಾದ ಕ್ರೀಡಾ ತಂಡಕ್ಕೆ ವಾಲಿಬಾಲ್, ಖೋ-ಖೋ, ಕಬ್ಬಡಿಗೆ ಪ್ರಥಮ 4 ಸಾವಿರ ರೂ., ದ್ವಿತೀಯ 2 ಸಾವಿರ ರೂ., ಹಗ್ಗ ಜಗ್ಗಾಟ ಪ್ರಥಮ 3 ಸಾವಿರ ರೂ., ದ್ವಿತೀಯ 2 ಸಾವಿರ ರೂ. ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕಚೇರಿ ಸಂಪರ್ಕಿಸಬಹುದು ಅಥವಾ ದೂ.ಸಂ 08226-224932, ಮೊ.ಸಂ 9916466659, 9844160841, 9945615695, 9880211027 ಸಂಪರ್ಕಿಸುವಂತೆ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

# ಚಿಕ್ಕಲ್ಲೂರು ಜಾತ್ರೆಯಲ್ಲಿ ಪ್ರಾಣಿ ಬಲಿ ತಡೆಯುವಲ್ಲಿ ಯಶಸ್ವಿ

**ಚಾಮರಾಜನಗರ:** ಚಿಕ್ಕಲ್ಲೂರು ಸಿದ್ದಪ್ಪಾಜಿ ಜಾತ್ರೆಯಲ್ಲಿ ಪ್ರಾಣಿ ಬಲಿ ತಡೆಯುವಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿದೆ ಎಂದು ವಿಶ್ವ ಪ್ರಾಣಿ ಕಲ್ಯಾಣ ಮಂಡಳಿ ಅಧ್ಯಕ್ಷ ದಯಾನಂದ ಸ್ವಾಮೀಜಿ ತಿಳಿಸಿದರು.



ಚಿಕ್ಕಲ್ಲೂರು ಅಲ್ಲದೇ ಜಿಲ್ಲೆಯ ಬಿಳಿಗಿರಿರಂಗನಬೆಟ್ಟ, ವಡಗೆರೆ ಆಂಜನೇಯಸ್ವಾಮಿ ದೇವಸ್ಥಾನ, ಕುರುಬನಕಟ್ಟೆ, ಶಿಂಷಾ ಮಾರಮ್ಮ ದೇವಸ್ಥಾನಗಳಲ್ಲೂ ಪ್ರಾಣಿ ಬಲಿ ತಡೆಯುವಲ್ಲಿ ಯಶಸ್ವಿಯಾಗಿದ್ದು ಇದಕ್ಕೆ ಸಹಕಾರ ನೀಡಿದೆ ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಭಕ್ತರಿಗೆ ಕೃತಜ್ಞತೆಗಳನ್ನು ಸಲ್ಲಿಸುವುದಾಗಿ ಸುದ್ದಿಗೋಷ್ಠಿ ಯಲ್ಲಿ ಹೇಳಿದರು. ಜಿಲ್ಲೆಯ 5 ಧಾರ್ಮಿಕ ಕ್ಷೇತ್ರಗಳಲ್ಲಿ ಪ್ರಾಣಿ ಬಲಿ ತಡೆಯುವಲ್ಲಿ ಹಾಗೂ ಹೈಕೋರ್ಟ್ ಆದೇಶವನ್ನು ಪಾಲಿಸುವಲ್ಲಿ ಜಿಲ್ಲಾಡಳಿತ, ಪೊಲೀಸ್ ಇಲಾಖೆ ಯಶಸ್ವಿಯಾಗಿದೆ. ಚಿಕ್ಕಲ್ಲೂರಿನಲ್ಲಿ ಪಂಕ್ತಿಸೇವೆಗೆ ನಮ್ಮ ವಿರೋಧವಿಲ್ಲ. ಪಂಕ್ತಿಸೇವೆ ಕೇವಲ ಮಾಂಸಹಾರಕ್ಕೆ ಸೀಮಿತವಲ್ಲ. ಸಸ್ಯಹಾರಿಗಳು ಕೂಡ ಪಂಕ್ತಿಸೇವೆಯಲ್ಲಿ ಆಹಾರ ಸೇವನೆ ಮಾಡಿದ್ದಾರೆ. ಪ್ರಾಣಿ ಬಲಿತಡೆಯುವಲ್ಲಿ ಕಟ್ಟುನಿಟ್ಟಿನ ಕ್ರಮವಹಿಸಿದ ಪರಿಣಾಮ ಚಿಕ್ಕಲ್ಲೂರು ಜಾತ್ರಾ ಪರಿಸರಲ್ಲಿ ಯಾವುದೇ ಪ್ರಾಣಿಬಲಿಯಾಗಿಲ್ಲ ಎಂದರು.ಜಾತ್ರಾ ಪರಿಸರ ಹೊರತುಪಡಿಸಿ ಹೊಲ, ಗದ್ದೆಗಳಲ್ಲಿ ಮಾಂಸಹಾರ ಸೇವನೆ ಮಾಡಿದ್ದು ಇದಕ್ಕೂ ನಮಗೂ ಸಂಬಂಧವಿಲ್ಲ. ದೇವಸ್ಥಾನಗಳು ವಧೆ ಕೇಂದ್ರಗಳಾಗಬಾರದು. ಮಾಂಸಹಾರಿಗಳ ವಿರುದ್ಧ ನಮ್ಮ ಹೋರಾಟವಿಲ್ಲ. ಭಕ್ತರು ಮಾನಸಿಕವಾಗಿ ಪರಿವರ್ತನೆಯಾಗಿದ್ದು ಪ್ರಾಣಿ ಬಲಿ ತಡೆಯಲು ಅನುಕೂಲವಾಗಿದೆ ಎಂದು ಹೇಳಿದರು.

# ಹಾಲು ಶಿಥಲೀಕಣ ಕೇಂದ್ರಕ್ಕೆ ಶಾಸಕ ಹೆಚ್.ಟಿ.ಮಂಜು ಧಿಢೀರ್ ಭೇಟಿ

**ಕೆ.ಆರ್.ಪೇಟೆ:** ಹಗಲು ರಾತ್ರಿ ಎನ್ನದೇ ಕಷ್ಟಪಟ್ಟು ದುಡಿವ ರೈತರಿಗೆ ಅನ್ಯಾಯವಾಗುವುದನ್ನು ಎಂದಿಗೂ ಸಹಿಸುವುದಿಲ್ಲ ಎಂದು ಶಾಸಕ ಹೆಚ್.ಟಿ.ಮಂಜು ಹಾಲು ಶಿಥಲೀಕರಣ ಅಧಿಕಾರಿಗಳ ವಿರುದ್ದ ಆಕ್ರೋಶ ವ್ಯಕ್ತಪಡಿಸಿದರು.

ಅವರು ರೈತರ ಹಾಲನ್ನು ಲೋ ಎಸ್‌ಎನ್‌ಎಫ್ ಮಾಡಲಾಗುತ್ತಿದೆ ಎಂಬ ದೂರುಗಳು ಸಾರ್ವಜನಿಕರಿಂದ ಬಂದ ಹಿನ್ನೆಲೆಯಲ್ಲಿ ಪಟ್ಟಣದ ಮೈಸೂರು ರಸ್ತೆಯಲ್ಲಿರುವ ಹಾಲು ಶಿಥಲೀಕಣ ಕೇಂದ್ರಕ್ಕೆ ಧಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನಮಗೆ ಅನ್ನ ನೀಡುವ ಅನ್ನದಾತ ಚೆನ್ನಾಗಿದ್ದರೆ ಮಾತ್ರ ನಾಡು ಸೌಖ್ಯವಾಗಿ ಇರುತ್ತದೆ. ಇದನ್ನು ಅರ್ಥಮಾಡಿಕೊಂಡು ಕರ್ತವ್ಯ ನಿರ್ವಹಿಸಿ. ಒಂದೇ ಡೈರಿಯಲ್ಲಿ ಒಂದು ತಿಂಗಳಿನಲ್ಲಿ ಹದಿನೇಳು ಬಾರಿ ಲೋ ಎಸ್‌ಎನ್‌ಎಫ್ ಆಗಿದೆ ಎಂದರೆ ಅದಿಕಾರಿಗಳು ಏನು ಮಾಡ್ತಾ ಇದ್ದೀರಾ. ಒಂದೆರಡು ಬಾರಿ ಆದಾಗಲೇ ಡೈರಿಯವರಿಗೆ. ಮಾರ್ಗ ವಿಸ್ತರಣಾಧಿಕಾರಿಗೂ ಹಾಗೂ ಒಕ್ಕೂಟಕ್ಕೂ ಮಾಹಿತಿ ನೀಡಬೇಕು. ಓಕ್ಕೂಟದ ನಿರ್ದೇಶನಗಳನ್ನು ಪಾಲಿಸಬೇಕು. ಆದರೆ ನೀವು ಹಾಗೆ ಮಾಡೇಇಲ್ಲವಲ್ಲ. ನಿಮ್ಮ ಬೇಜವಾಬ್ದಾರಿಯಿಂದಾಗಿ ಹಾಲು ಉತ್ಪಾದಕರು ಹಾಗೂ ಡೈರಿಗಳು ನಷ್ಟ ಅನುಭವಿಸಬೇಕಾಗಿದೆ. ಕೂಡಲೇ ನಿಮ್ಮ ಬೇಜವಾಬ್ದಾರಿಯನ್ನು ಬದಿಗಿಟ್ಟು ಉತ್ತಮವಾಗಿ ಕೆಲಸ ನಿರ್ವಹಿಸಿ. ಒಂದಿಬ್ಬರು ಮಾಡುವ ಕೆಲಸಕ್ಕೆ ಸಾಮೂಹಿಕವಾಗಿ ನಷ್ಟವಾಗುವ ಕೆಲಸವನ್ನು ಯಾರೂ ಮಾಡಬಾರದು. ಉತ್ತಮ ಗುಣಮಟ್ಟದ ಹಾಲಿಗೆ ಮೋಸ ಮಾಡಬೇಡಿ ಇಲ್ಲವಾದಲ್ಲಿ ರೈತರೇ



ನಿಮ್ಮ ಶಿಥಿಲೀಕರಣ ಕೇಂದ್ರಕ್ಕೆ ಲಗ್ಗೆ ಇಡುವ ಕಾಲ ದೂರವಿಲ್ಲ. ನಂತರದ ಆಗುಹೋಗುಗಳಿಗೆ ನೀವೇ ಜವಾಬ್ದಾರಿಯಾಗಬೇಕಾಗುತ್ತದೆ ಅಧಿಕಾರಿಗೆ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು,

# ಇಂದು ಚಾಮರಾಜನಗರ ತಾಲ್ಲೂಕು ಮಟ್ಟದ ಗ್ರಾಮೀಣ ಕ್ರೀಡಾಕೂಟ

**ಚಾಮರಾಜನಗರ, :** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಯುವ ಸಬಲೀಕರಣ ಕ್ರೀಡಾ ಇಲಾಖೆ ಸಂಯುಕ್ತಾಶ್ರಯದಲ್ಲಿ ಚಾಮರಾಜನಗರ ತಾಲ್ಲೂಕುಮಟ್ಟದ ಗ್ರಾಮೀಣ ಕ್ರೀಡಾಕೂಟವನ್ನು ಜನವರಿ 18ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಡಾ. ಬಿ.ಆರ್ ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಶಾಸಕರು ಹಾಗೂ ಎಂ.ಎಸ್.ಐ.ಎಲ್ ಅಧ್ಯಕ್ಷರಾದ ಸಿ. ಪುಟ್ಟರಂಗಶೆಟ್ಟಿ ಕ್ರೀಡಾಕೂಟ ಉದ್ಘಾಟಿಸಿ ಅಧ್ಯಕ್ಷತೆ ವಹಿಸುವರು. ನಗರಸಭೆ ಸದಸ್ಯರಾದ ಸಿ.ಜಿ ಚಂದ್ರಶೇಖರ್, ತಹಶೀಲ್ದಾರರಾದ ಬಿ. ಗಿರಿಜಾ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಪಿ. ಶ್ರೀನಿವಾಸ್, ಶಾಲಾ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿ ಬಿ. ಹನುಮಶೆಟ್ಟಿ, ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕರಾದ ಬಸವರಾಜು ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ. ಸುರೇಶ್ ತಿಳಿಸಿದ್ದಾರೆ.



**ಒಕ್ಕಲಿಗರ ಪರಿಷತ್ತು ಅಮೇರಿಕ ವತಿಯಿಂದ 2025ನೇ ಜು.3ರಿಂದ 5ರವರೆಗೆ ಅಮೇರಿಕದ ಕ್ಯಾಲಿಪೋರ್ನಿಯದಲ್ಲಿ ನಡೆಯುವ 18ನೇ ವಿಶ್ವ ಒಕ್ಕಲಿಗರ ಸಮ್ಮೇಳನ ಕಾರ್ಯಕ್ರಮಕ್ಕೆ ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್‌ರವರಿಗೆ ಆಹ್ವಾನ ನೀಡಿದರು**
**ಈ ಸಂದರ್ಭದಲ್ಲಿ ವಿಶ್ವ ಒಕ್ಕಲಿಗರ ಪರಿಷತ್ತು ಅಮೇರಿಕದ ಪದಾಧಿಕಾರಿಗಳಾದ ಅಮರನಾಥ್ ಗೌಡ, ಧನಂಜಯ, ವೆಂಕಟೇಶ್, ಮಂಜುನಾಥ್ ಉಪಸ್ಥಿತರಿದ್ದರು**



**ತಾಲ್ಲೂಕಿನ ಶೀಳನೆರೆ ಹೋಬಳಿಯ ಹರಳಹಳ್ಳಿ ಗ್ರಾಮಪಂಚಾಯಿತಿಯ ನೂತನ ಅಧ್ಯಕ್ಷರಾಗಿ ಬೇಲದಕೆರೆ ಅಶೋಕ್ ಅವಿರೋಧವಾಗಿ ಆಯ್ಕೆಯಾದರು. ಅವರನ್ನು ಗ್ರಾಮಪಂಚಾಯಿತಿ ಸದಸ್ಯರುಗಳು ಅಭಿನಂದಿಸಿದರು.**

# ಆಕಾಶವಾಣಿ ಕೇಳುಗರ ದೊಡ್ಡ ಪರಂಪರೆಯನ್ನೆ ಹುಟ್ಟುಹಾಕಿದೆ: ಪ್ರೊ.ಕೃಷ್ಣಮೂರ್ತಿ ಹನೂರು

**ಚಾಮರಾಜನಗರ, :** ಗಾಳಿಯ ಮೂಲಕ ಎಲ್ಲರ ಕರ್ಣಗಳು, ಮನೆ-ಮನಗಳನ್ನು ತಲುಪುವ ಆಕಾಶವಾಣಿ ಇಂದಿಗೂ ಕೇಳುಗರ ಬಹುದೊಡ್ಡ ಪರಂಪರೆಯನ್ನು ಹುಟ್ಟುಹಾಕಿದೆ ಎಂದು ಚಿಂತಕರು ಹಾಗೂ ಜಾನಪದ ವಿದ್ವಾಂಸರಾದ ಪ್ರೊ. ಕೃಷ್ಣಮೂರ್ತಿ ಹನೂರು ಅವರು ಅಭಿಪ್ರಾಯಪಟ್ಟರು.



ಮೈಸೂರು ಆಕಾಶವಾಣಿ ಸ್ಥಾಪನೆಯಾಗಿ 90 ವರ್ಷಗಳನ್ನು ಪೂರೈಸುತ್ತಿರುವ ಸವಿನೆನಪಿಗಾಗಿ ನಗರದ ಜೆ.ಎಸ್.ಎಸ್. ಶಿಕ್ಷಣ ಸಂಸ್ಥೆ ಸಭಾಂಗಣದಲ್ಲಿ ಭಾರತ ಸರ್ಕಾರದ ಪ್ರಸಾರ ಭಾರತಿ, ಆಕಾಶವಾಣಿ ಮೈಸೂರು ಎಫ್.ಎಂ. 100.6 ಹಾಗೂ ಜೆ.ಎಸ್.ಎಸ್. ಪದವಿ ಕಾಲೇಜು ಸಹಯೋಗದಲ್ಲಿ 'ನಮ್ಮ ಜಾನಪದ' ಶೀರ್ಷಿಕೆಯಡಿ ಆಯೋಜಿಸಲಾಗಿದ್ದ "ಚಾಮರಾಜನಗರ ಜನಪದ ಸಂಸ್ಕೃತಿ" ಮಾತು-ಹಾಡು-ಕುಣಿತ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶತಮಾನದ ಹೊಸ್ತಿಲಿನಲ್ಲಿರುವ ಮೈಸೂರು ಆಕಾಶವಾಣಿ ಮೊದಲಿನಿಂದಲೂ ಕೇಳುಗರ ಪರಂಪರೆ ಬೆಳೆಸಿದ ಸಂಸ್ಥೆಯಾಗಿದೆ. ಇಂದು ವಿದ್ಯುನ್ಮಾನ ವಾಹಿನಿಗಳ ದಿನಗಳಾಗಿದ್ದರೂ ಶಿಕ್ಷಣ, ಮಾಹಿತಿ, ಮನರಂಜನೆ, ಆರೋಗ್ಯ, ಸಾಹಿತ್ಯ, ಸಂಗೀತ, ಸುಪ್ರಭಾತ, ರೈತರಿಗೆ ಸಲಹೆ, ಕಾವ್ಯವಾಚನ, ಗಮಕ ಸೇರಿದಂತೆ ಹಲವು ವಿಶಿಷ್ಟ ಕಾರ್ಯಕ್ರಮ ಪ್ರಸ್ತುತಪಡಿಸುವ ಮೈಸೂರು ಆಕಾಶವಾಣಿ ತನ್ನದೇ ಕೇಳುಗರ ದೊಡ್ಡ ಪರಂಪರೆಯನ್ನೇ ಹೊಂದುವ ಮೂಲಕ ತನ್ನ ಮೌಲ್ಯಯುತ ಸತ್ವವನ್ನು ಇಂದಿಗೂ ಉಳಿಸಿಕೊಂಡಿದೆ. ಕೇಳುವವರು ಸಾಕಷ್ಟು ಪ್ರಬುದ್ಧರಾಗುತ್ತಿದ್ದಾರೆ ಎಂದರು.

ಚಾಮರಾಜನಗರದಲ್ಲಿ ಜನಪದ ಸಂಸ್ಕೃತಿ, ಪರಂಪರೆ ಒಬ್ಬರಿಂದ ಮತ್ತೊಬ್ಬರಿಗೆ ಕೇಳಿಸಿಕೊಳ್ಳುವ ಮೂಲಕವೇ ಬೆಳೆದುಬಂದಿದೆ. ಜಿಲ್ಲೆಯ ಮಲೆ ಮಹದೇಶ್ವರ, ಸಿದ್ದಪ್ಪಾಜಿ, ಮಂಟೇಸ್ವಾಮಿ ಜನಪದ ಮಹಾಕಾವ್ಯಗಳು ತಮ್ಮ ವಿಸ್ತಾರ ಹಾಗೂ ವ್ಯಾಪ್ತಿಯಲ್ಲಿ ಅಪಾರ ಕೇಳುಗರನ್ನು ಸೆಳೆದಿವೆ. ಜಾನಪದ ಕಲೆಗಳ ತವರೂರು ಚಾಮರಾಜನರ ಜಿಲ್ಲೆಯಲ್ಲಿ ಹೆಜ್ಜೆ ಇಟ್ಟಲ್ಲೆಲ್ಲಾ ಮಾತು-ಹಾಡು-ಕುಣಿತವೇ ತುಂಬಿದೆ. ಈ ನಿಟ್ಟಿನಲ್ಲಿ ಮೈಸೂರು ಆಕಾಶವಾಣಿ ತನ್ನ 90ನೇ ಹುಟ್ಟುಹಬ್ಬವನ್ನು ಚಾಮರಾಜನಗರದಲ್ಲಿ ಆಚರಿಸಿಕೊಳ್ಳುತ್ತಿರುವುದು ಬಹಳ ಅರ್ಥಪೂರ್ಣವಾಗಿದೆ ಎಂದು ಕೃಷ್ಣಮೂರ್ತಿ ಹನೂರು ತಿಳಿಸಿದರು. ಜೆ.ಎಸ್.ಎಸ್. ಪದವಿ ಕಾಲೇಜು ಪ್ರಚಾರ್ಯರಾದ ಡಾ. ಎನ್. ಎಂ. ಮಹದೇವಸ್ವಾಮಿ ಅವರು ಮಾತನಾಡಿ ಶೇ. 92ರಷ್ಟು (ನೆಟ್‌ವರ್ಕ್) ವಿಸ್ತಾರ ಹೊಂದಿರುವ ಮೈಸೂರು ಆಕಾಶವಾಣಿ ತನ್ನ ಔಚಿತ್ಯವನ್ನು ಜನಸಾಮಾನ್ಯರಿಗೆ ತಿಳಿಸಿಕೊಡುವ ನಿಟ್ಟಿನಲ್ಲಿ ಮಹತ್ವಪೂರ್ಣ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಅನೇಕ ವೈವಿಧ್ಯಮಯ ಕಾರ್ಯಕ್ರಮಗಳನ್ನು ಪ್ರಸ್ತುತಪಡಿಸುವ ಮೂಲಕ ಸಾಮಾಜಿಕ, ಸಾಂಸ್ಕೃತಿಕ ನೆಲೆಗಟ್ಟನ್ನು ಜನತೆಗೆ ಒದಗಿಸಿಕೊಟ್ಟಿದೆ. ಚಾಮರಾಜನಗರ ಜಿಲ್ಲೆಯ ಜನಪದ ಕಲೆ, ಸಂಸ್ಕೃತಿಯನ್ನು ದೇಶಾದ್ಯಂತ ಪಸರಿಸುವ ಕಾರ್ಯವನ್ನು ಮೈಸೂರು ಆಕಾಶವಾಣಿ ಮಾಡುತ್ತಿದೆ ಎಂದರು.

ಮೈಸೂರು ಆಕಾಶವಾಣಿ ಉಪನಿರ್ದೇಶಕರಾದ ಎಸ್.ಎಸ್. ಉಮೇಶ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ 1935ರಲ್ಲಿ ಮೊದಲಬಾರಿಗೆ ಎಂ.ಬಿ. ಗೋಪಾಲಸ್ವಾಮಿ ಅವರು ಮೈಸೂರಿನ ತಮ್ಮ ಬಾಡಿಗೆ ಮನೆಯಲ್ಲಿ ಆಕಾಶವಾಣಿಯನ್ನು ಆರಂಭಿಸಿದರು. ಬಳಿಕ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 1940ರಲ್ಲಿ ಇಡೀ ದೇಶದಲ್ಲಿಯೇ ವಿನೂತನ ಆಕರ್ಷಕ ವಿನ್ಯಾಸವುಳ್ಳ ವೃತ್ತಾಕಾರದ ಆಕಾಶವಾಣಿ ಕಟ್ಟಡವನ್ನು ನಿರ್ಮಿಸಿ ಕೇಳುಗರನ್ನು ಪ್ರೋತ್ಸಾಹಿಸಿದರು. ಜನಪದ ಎಂದರೇ ಮಾತು. ಜನಪದ ಸಂಸ್ಕೃತಿ ಬಿತ್ತರಿಸಿ ಪಸರಿಸುವ ಮೂಲಕ ಆಕಾಶವಾಣಿ ಮಾತಿನ ಮನೆಯಾಗಿದೆ. ಜನಪದಕ್ಕೆ ಹತ್ತಿರವಾಗಿದೆ ಎಂದರು.

ಜನಪದ ಯಾವುದೇ ಸಂಕೋಲೆಗಳಿಗೆ ಸಿಲುಕದೆ ಜನರ ಬಾಯಲ್ಲಿ ಹೆಚ್ಚು ಪ್ರಚಲಿತವಾಗಿದೆ. ಇಡೀ ರಾಜ್ಯದಲ್ಲಿಯೇ ಜಾನಪದ ಕಲೆ, ಸಂಸ್ಕೃತಿ ಹೆಚ್ಚಾಗಿರುವುದು ಚಾಮರಾಜನಗರ ಆಗಿರುವುದರಿಂದ ಮಾತು-ಹಾಡು-ಕುಣಿತ ಎಲ್ಲವನ್ನು ಇಲ್ಲಿಯೇ ಆಯೋಜಿಸಲಾಗಿದೆ. ಜನಪದ ನಶಿಸದಂತೆ ತಡೆದು ಮುಂದಿನ ಪೀಳಿಗೆಗೆ ಕಲೆ, ಸಾಹಿತ್ಯ, ಸಂಸ್ಕೃತಿ ಪಸರಿಸಲು ಮೈಸೂರು ಆಕಾಶವಾಣಿ ಜನಪದ ಸಂಗ್ರಹಗಳ ಭಂಡಾರವನ್ನೆ ಹೊಂದಿದ್ದು, ಆಗಾಗ್ಗೆ ಗೀತೆ, ಗಾಯನ, ನಾಟಕಗಳನ್ನು ಬಿತ್ತರಿಸಿ ಜನಪದರನ್ನು ಪ್ರೋತ್ಸಾಹಿಸುತ್ತಿದೆ ಎಂದು ಉಮೇಶ್ ಅವರು ತಿಳಿಸಿದರು. ಆಕಾಶವಾಣಿ ಹಾಗೂ ದೂರದರ್ಶನದ ದಕ್ಷಿಣ ವಲಯ ಮುಖ್ಯಸ್ಥರಾದ ಅನಿಲ್‌ಕುಮಾರ್ ಮಂಗಲಗಿ, ಮೈಸೂರು ಆಕಾಶವಾಣಿ ಸಹಾಯಕ ನಿರ್ದೇಶಕರಾದ ಅಬ್ದುಲ್ ರಶೀದ್, ಟಿ.ವಿ. ವಿದ್ಯಾಶಂಕರ್, ಸಹಾಯಕ ಅಭಿಯಂತರರಾದ ಪಿ. ಆನಂದನ್ ಕಾರ್ಯಕ್ರಮದಲ್ಲಿ ಮಾತನಾಡಿದರು.

ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಉಪನಿರ್ದೇಶಕರಾದ ಮಂಜುನಾಥ ಪ್ರಸನ್ನ, ಮೈಸೂರು ಆಕಾಶವಾಣಿಯ ಕೇಶವಮೂರ್ತಿ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಗಮಕ ಕಲೆಯು ಮನುಷ್ಯನನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯುತ್ತದೆ

**ಚಾಮರಾಜನಗರ:** ಚಾಮರಾಜನಗರ: ಗಮಕ ಕಲೆ ಅಮರವಾದದ್ದು. ಗಮಕಕಲೆಯು ಮನುಷ್ಯನನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯುತ್ತದೆ. ಕನ್ನಡ ಸಾಹಿತ್ಯ ಲೋಕದಲ್ಲಿ ಗಮಕಕಲೆಯನ್ನು ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಗಮಕಿ ಹಾಗೂ ವೈದ್ಯರಾದ ಡಾ. ಉಮಾರಾಣಿ ತಿಳಿಸಿದರು.




ಅವರು ಕರ್ನಾಟಕ ಗಮಕಕಲಾ ಪರಿಷತ್ತು ಬೆಂಗಳೂರು ಮತ್ತು ಚಾಮರಾಜನಗರ ಜಿಲ್ಲಾ ಗಮಕ ಕಲಾ ಪರಿಷತ್ತು, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಜರುಗಿದ ಕುಮಾರವ್ಯಾಸ ಜಯಂತಿ ಹಾಗೂ ಗಮಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತ ಕನ್ನಡದ ಮಹತ್ವದ ಕವಿ ಕುಮಾರವ್ಯಾಸರು. ಕರ್ನಾಟ ಭಾರತ ಕಥಾಮಂಜರಿ ರಚಿಸಿ ಕನ್ನಡ ಸಾಹಿತ್ಯದಲ್ಲಿ ಬಹುದೊಡ್ಡ ಕ್ರಾಂತಿಯನ್ನೇ ಮಾಡಿದವರು. ಗದುಗಿನ ವೀರನಾರಾಯಣ ಸ್ವಾಮಿಯ ಭಕ್ತರಾಗಿದ್ದವರು. ಚಾಮರಾಜನಗರ ಜಿಲ್ಲೆಯಲ್ಲಿ ಗಮಕಕಲೆ ಬಹಳ ಪ್ರಸಿದ್ಧಿ ಪಡೆದಿತ್ತು. ವಿದ್ಯಾರ್ಥಿಗಳು ಮತ್ತು ಯುವಕರಲ್ಲಿ ಗಮಕ ಕಲೆಯನ್ನು ಬೆಳೆಸುವ ದಿಕ್ಕಿನಲ್ಲಿ ಜಿಲ್ಲಾ ಗಮಕ ಕಲಾ ಪರಿಷತ್ತು ಉತ್ತಮ ಕಾರ್ಯಕ್ರಮಗಳನ್ನು ರೂಪಿಸಲಿ ಎಂದು ತಿಳಿಸಿದರು.

ಗಮಕಿ ವಿಜಯಲಕ್ಷ್ಮಿ ಹಾಗೂ ಗಮಕಿ ವೀರಶೆಟ್ಟಿರವರು ಕುಮಾರವ್ಯಾಸ ರಚಿತ ಕರ್ನಾಟ ಭಾರತ ಕಥಾಮಂತರಿಯ ಅನೇಕ ಪದ್ಯಗಳನ್ನು ವಾಚಿಸಿದರು. ಗಮಕವಾಚನವು ಸಭಿಕರಿಗೆ ಬಹಳ ಅನಂದವನ್ನು ತಂದಿತು.

ಅಧ್ಯಕ್ಷತೆಯನ್ನು ಚಾಮರಾಜನಗರ ಜಿಲ್ಲಾ ಗಮಕಕಲಾ ಪರಿಷತ್ತಿನ ಜಿಲ್ಲಾಧ್ಯಕ್ಷರಾದ ಸುರೇಶ್ ಎನ್ ಋಗ್ವೇದಿ ಮಾತನಾಡಿ ಗಡಿ ಜಿಲ್ಲೆ ಚಾಮರಾಜನಗರ ಗಮಕದ ತವರೂರು. ತಿಪಟೂರು ರಾಮಸ್ವಾಮಿ, ಸುಗಂಧರಾಜನ್, ರಾಮಸಮುದ್ರ ರಾಮದಾಸ್, ವಿಜಯಲಕ್ಷ್ಮಿ ,ನಾಗೇಶ್ ರಾವ್, ಗಮಕಿ ಸುಬ್ರಹ್ಮಣ್ಯಂ. ವರದರಾಜು, ಜಯರಾಮ್ ಮುಂತಾದ ಶ್ರೇಷ್ಠ ಗಮಕ ವಿದ್ವಾಂಸರು ನೆಲೆಸಿದ್ದ ಪ್ರದೇಶವಾಗಿತ್ತು.

ಇತ್ತೀಚಿನ ವರ್ಷಗಳಲ್ಲಿ ಗಮಕಕಲೆ ಯುವ ಜನಾಂಗವನ್ನು ತಲುಪುತ್ತಿಲ್ಲ. ಕರ್ನಾಟಕ ಗಮಕಲಾ ಪರಿಷತ್ತು ಜಿಲ್ಲಾ ಘಟಕ ಅಸ್ತಿತ್ವಕ್ಕೆ ಬಂದಿದ್ದು ಗಮಕಕಲೆ ಬೆಳೆಸುವ ದಿಕ್ಕಿನಲ್ಲಿ ಯೋಜನೆಗಳು ರೂಪಿಸಿ ಗಮಕ ಕಲೆಯನ್ನು ಬೆಳೆಸುವ ದಿಕ್ಕಿನಲ್ಲಿ ನಮ್ಮೆಲ್ಲರ ಪ್ರಯತ್ನ ಬಹಳ ಮುಖ್ಯವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗಮಕಿ ವಾಸಂತಿ, ರೇಖಾ, ಪದ್ಮ ಪುರುಷೋತ್ತಮ್, ಸರಸ್ವತಿ, ಬರಹಗಾರ ಲಕ್ಷೀ ನರಸಿಂಹ, ವಿವಿಧ ಸಂಘಟನೆಗಳ ಶ್ರೀನಿವಾಸ ಗೌಡ ,ರಾಜು ,ಮೂರ್ತಿ, ರವಿಚಂದ್ರ ಪ್ರಸಾದ್, ದುಂಡು ಮಾದಯ್ಯ, ಶ್ರೀನಿವಾಸ್, ಲೋಕೇಶ್ , ಕೇಶವ್ ಮುಂತಾದವರು ಉಪಸ್ಥಿತರಿದ್ದರು.

# ಟಿಕ್‌ಟಾಕ್ ಮಾರಾಟ,ನಿಷೇಧ: ಗಡುವು ಕೊಟ್ಟ ಅಮೆರಿಕ ಕೋರ್ಟ್

**ಅಮೆರಿಕಾ:** ಚೀನಾದ ಬೈಟ್‌ಡ್ಯಾನ್ಸ್ ಕಂಪನಿ ಟಿಕ್‌ಟಾಕ್ ಅಪ್ಲಿಕೇಶನ್ ಅನ್ನು ಮಾರಾಟ ಮಾಡದಿದ್ದರೆ, ಭಾನುವಾರದಿಂದ ಅಮೆರಿಕದಲ್ಲಿ ನಿಷೇಧಿಸಲಾಗುವುದು ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ.
ಅಪ್ಲಿಕೇಶನ್‌ನ ಚೀನಾ ಸಂಪರ್ಕದಿಂದಾಗಿ ರಾಷ್ಟ್ರೀಯ ಭದ್ರತೆಗೆ ಅಪಾಯವಿದೆ ಎಂದು ನ್ಯಾಯಾಲಯ ಹೇಳಿದೆ. ಅಮೆರಿಕದಲ್ಲಿ 170 ಮಿಲಿಯನ್ ಬಳಕೆದಾರರಿದ್ದಾರೆ.
ಜನವರಿ 19 ರಿಂದ ಹೊಸ ಡೌನ್‌ಲೋಡ್‌ಗಳನ್ನು ನಿಷೇಧಿಸಲಾಗುವುದು ಮತ್ತು ಯಾವುದೇ ನವೀಕರಣಗಳು ಲಭ್ಯವಿರುವುದಿಲ್ಲ ಎಂದು ತಜ್ಞರು ಹೇಳಿದ್ದಾರೆ. ನ್ಯಾಯ ಇಲಾಖೆ ಇದನ್ನು ದೃಢಪಡಿಸಿದೆ. ಟ್ರಂಪ್ ಪರಿಹಾರ ಕಂಡುಕೊಳ್ಳುವುದಾಗಿ ಹೇಳಿದ್ದಾರೆ. ಬಿಡೆನ್ ಆಡಳಿತ ಭಾನುವಾರದಂದು ಕಾನೂನನ್ನು ಜಾರಿಗೊಳಿಸುವುದಿಲ್ಲ ಎಂದು ಸೂಚಿಸಿದೆ. ಟಿಕ್‌ಟಾಕ್‌ನ ಜನಪ್ರಿಯತೆ ಮತ್ತು ಅಪ್ಲಿಕೇಶನ್‌ನಲ್ಲಿ ತನ್ನ 14.7 ಮಿಲಿಯನ್ ಅನುಯಾಯಿಗಳ ಬಗ್ಗೆ ಟ್ರಂಪ್‌ಗೆ ತಿಳಿದಿದೆ. ಟಿಕ್‌ಟಾಕ್‌ನ ಚೀನಾದ ಪೇರೆಂಟ್ ಕಂಪನಿ ಬೇಗನೆ ಖರೀದಿದಾರರನ್ನು ಹುಡುಕದಿದ್ದಕ್ಕಾಗಿ ಸೆನೆಟ್‌ನ ಪ್ರಮುಖ ರಿಪಬ್ಲಿಕನ್ನರು ಟೀಕಿಸಿದ್ದಾರೆ.
ಸೋಮವಾರ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ಟ್ರಂಪ್ ಯಾವ ಆಯ್ಕೆಗಳನ್ನು ಹೊಂದಿರುತ್ತಾರೆ ಎಂಬುದು ಸ್ಪಷ್ಟವಾಗಿಲ್ಲ. ಕಾನೂನು ಜಾರಿಗೆ ಬರುವ ಮೊದಲು ಮಾರಾಟದ ಕಡೆಗೆ ಪ್ರಗತಿ ಸಾಧಿಸಿದ್ದರೆ, ಅಪ್ಲಿಕೇಶನ್‌ನ ನಿರ್ಬಂಧಗಳ ಮೇಲೆ 90 ದಿನಗಳ ವಿರಾಮವನ್ನು ಕಾನೂನು ಅನುಮತಿಸುತ್ತದೆ.
"170 ಮಿಲಿಯನ್‌ಗಿಂತಲೂ ಹೆಚ್ಚು ಅಮೆರಿಕನ್ನರಿಗೆ, ಟಿಕ್‌ಟಾಕ್ ಅಭಿವ್ಯಕ್ತಿಗೆ ವಿಶಿಷ್ಟ ಮತ್ತು ವಿಸ್ತಾರವಾದ ಔಟ್‌ಲೆಟ್, ನಿಶ್ಚಿತಾರ್ಥದ ಸಾಧನ ಮತ್ತು ಸಮುದಾಯದ ಮೂಲವನ್ನು ನೀಡುತ್ತದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಆದರೆ ಟಿಕ್‌ಟಾಕ್‌ನ ಡೇಟಾ ಸಂಗ್ರಹಣೆ ಮತ್ತು ವಿದೇಶಿ ಎದುರಾಳಿಯೊಂದಿಗಿನ ಸಂಬಂಧದ ಬಗ್ಗೆ ತನ್ನ ರಾಷ್ಟ್ರೀಯ ಭದ್ರತಾ ಕಾಳಜಿಗಳನ್ನು ಪರಿಹರಿಸಲು ಮಾರಾಟ ಅಗತ್ಯ ಎಂದು ಕಾಂಗ್ರೆಸ್ ನಿರ್ಧರಿಸಿದೆ. ಮೇಲಿನ ಕಾರಣಗಳಿಗಾಗಿ, ಪ್ರಶ್ನಿಸಲ್ಪಟ್ಟ ನಿಬಂಧನೆಗಳು ಅರ್ಜಿದಾರರ ಮೊದಲ ತಿದ್ದುಪಡಿ ಹಕ್ಕುಗಳನ್ನು ಉಲ್ಲಂಘಿಸುವುದಿಲ್ಲ ಎಂದು ನಾವು ತೀರ್ಮಾನಿಸುತ್ತೇವೆ" ಎಂದು ನ್ಯಾಯಾಲಯ ಹೇಳಿದೆ.
ನ್ಯಾಯಮೂರ್ತಿಗಳಾದ ಸೋನಿಯಾ ಸೊಟೊಮಯೊರ್ ಮತ್ತು ನೀಲ್ ಗೋರ್ಸುಚ್ ನ್ಯಾಯಾಲಯದ ತೀರ್ಪಿನ ಬಗ್ಗೆ ತಮ್ಮ ಅನುಮಾನಗಳನ್ನು ವ್ಯಕ್ತಪಡಿಸುವ ಪ್ರತ್ಯೇಕ ಸಂಕ್ಷಿಪ್ತ ಅಭಿಪ್ರಾಯಗಳನ್ನು ಸಲ್ಲಿಸಿದರು, ಆದರೆ ಅಂತಿಮವಾಗಿ ತೀರ್ಪಿಗೆ ಒಪ್ಪಿದರು.
ಟಿಕ್‌ಟಾಕ್ ಮತ್ತು ಅದರ ಚೀನಾದ ಪೇರೆಂಟ್ ಕಂಪನಿ ಬೈಟ್‌ಡ್ಯಾನ್ಸ್ ಲಿಮಿಟೆಡ್ ಅನ್ನು ಪ್ರತಿನಿಧಿಸುವ ವಕೀಲರು ಮಾರಾಟವನ್ನು ಪೂರ್ಣಗೊಳಿಸುವಲ್ಲಿನ ಸವಾಲುಗಳನ್ನು ವಿವರಿಸಿದರು, ವಿಶೇಷವಾಗಿ ಅಪ್ಲಿಕೇಶನ್‌ನ ಯಶಸ್ಸಿಗೆ ಇಂಧನವಾಗಿರುವ ಸ್ವಾಮ್ಯದ ಅಲ್ಗಾರಿದಮ್‌ನ ವರ್ಗಾವಣೆಯನ್ನು ನಿರ್ಬಂಧಿಸುವ ಚೀನಾದ ಕಾನೂನುಗಳಿಂದಾಗಿ. ಅರ್ಧ ಗಂಟೆಯೊಳಗೆ ನೂರಾರು ಸಣ್ಣ ವೀಡಿಯೊಗಳನ್ನು ನೀಡುವ ಮೂಲಕ



ಬಳಕೆದಾರರನ್ನು ತೊಡಗಿಸಿಕೊಳ್ಳುವ ಸಾಮರ್ಥ್ಯಕ್ಕೆ ಹೆಸರುವಾಸಿಯಾದ ಟಿಕ್‌ಟಾಕ್ ಟೀಕೆಗಳನ್ನು ಎದುರಿಸಿದೆ, ಅಪ್ಲಿಕೇಶನ್ ವ್ಯಸನಕಾರಿಯಾಗಿ ವಿನ್ಯಾಸಗೊಳಿಸಲಾಗಿದೆ ಮತ್ತು ಮಕ್ಕಳ ಮಾನಸಿಕ ಆರೋಗ್ಯಕ್ಕೆ ಹಾನಿ ಮಾಡುತ್ತದೆ ಎಂದು ಹೇಳುವ ಕೆಂಟುಕಿಯಿಂದ ಮೊಕದ್ದಮೆ ಸೇರಿದಂತೆ. ಒಂದು ಡಜನ್‌ಗಿಂತಲೂ ಹೆಚ್ಚು ರಾಜ್ಯಗಳು ಇದೇ ರೀತಿಯ ಮೊಕದ್ದಮೆಗಳನ್ನು ಹೂಡಿವೆ. ಟಿಕ್‌ಟಾಕ್ ಈ ಆರೋಪಗಳನ್ನು ನಿರಾಕರಿಸಿದೆ, ಅವುಗಳನ್ನು ತಪ್ಪು ಎಂದು ಕರೆದಿದೆ.
ಚೀನಾಕ್ಕೆ ಟಿಕ್‌ಟಾಕ್‌ನ ಸಂಪರ್ಕದ ಬಗ್ಗೆ ವಿವಾದವು ವಾಷಿಂಗ್ಟನ್ ಮತ್ತು ಬೀಜಿಂಗ್ ನಡುವಿನ ವಿಶಾಲ ಭೂ-ರಾಜಕೀಯ ಪೈಪೋಟಿಯನ್ನು ಸಂಕೇತಿಸುತ್ತದೆ.
ಟಿಕ್‌ಟಾಕ್‌ನ ಡೇಟಾ ಸಂಗ್ರಹಣೆ, ಬಳಕೆದಾರರ ಮಾಹಿತಿಯ ಬೃಹತ್ ಪ್ರಮಾಣದ ಬಗ್ಗೆ ಅಮೆರಿಕ ಸರ್ಕಾರ ಕಳವಳ ವ್ಯಕ್ತಪಡಿಸಿದೆ, ಇದರಲ್ಲಿ ವೀಕ್ಷಣಾ ಅಭ್ಯಾಸಗಳ ಕುರಿತು ಸೂಕ್ಷ್ಮ ಡೇಟಾ ಸೇರಿದೆ, ಇದನ್ನು ಚೀನಾ ಸರ್ಕಾರ ಬಲವಂತದ ಮೂಲಕ ಪ್ರವೇಶಿಸಬಹುದು. ಬಳಕೆದಾರರು ಏನು ನೋಡುತ್ತಾರೆ ಎಂಬುದನ್ನು ನಿರ್ಧರಿಸುವ ಅಪ್ಲಿಕೇಶನ್‌ನ ಅಲ್ಗಾರಿದಮ್, ಚೀನಾದ ಅಧಿಕಾರಿಗಳಿಂದ ಕುಶಲತೆಗೆ ಒಳಗಾಗುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ಚಿಂತಿಸುತ್ತಾರೆ, ಅವರು ಪತ್ತೆಹಚ್ಚಲು ಕಷ್ಟಕರವಾದ ರೀತಿಯಲ್ಲಿ ವಿಷಯವನ್ನು ರೂಪಿಸಬಹುದು.
ಚೀನಾ ಯುಎಸ್ ಪ್ಲಾಟ್‌ಫಾರ್ಮ್‌ನಲ್ಲಿ ವಿಷಯವನ್ನು ಕುಶಲತೆಯಿಂದ ಬಳಸಲು ಅಥವಾ ಟಿಕ್‌ಟಾಕ್ ಮೂಲಕ ಅಮೆರಿಕನ್ ಬಳಕೆದಾರರ ಡೇಟಾವನ್ನು ಪ್ರವೇಶಿಸಲು ಪ್ರಯತ್ನಿಸಿದೆ ಎಂಬ ಹಕ್ಕುಗಳನ್ನು ಬೆಂಬಲಿಸಲು ಯುಎಸ್ ಯಾವುದೇ ಪುರಾವೆಗಳನ್ನು ಒದಗಿಸಿಲ್ಲ ಎಂದು ಟಿಕ್‌ಟಾಕ್ ಪ್ರತಿಪಾದಿಸುತ್ತದೆ.
ಏಪ್ರಿಲ್‌ನಲ್ಲಿ, ಕಾಂಗ್ರೆಸ್ ದ್ವಿಪಕ್ಷೀಯ ಶಾಸನವನ್ನು ಅಂಗೀಕರಿಸಿತು, ಅದನ್ನು ಅಧ್ಯಕ್ಷ ಜೋ ಬಿಡೆನ್ ಕಾನೂನಿಗೆ ಸಹಿ ಹಾಕಿದರು, ಟಿಕ್‌ಟಾಕ್‌ನ ಸಂಭಾವ್ಯ ರಾಷ್ಟ್ರೀಯ ಭದ್ರತಾ ಅಪಾಯಗಳ ಬಗ್ಗೆ ದೀರ್ಘಕಾಲದ ಚರ್ಚೆಯ ಪರಾಕಾಷ್ಠೆಯನ್ನು ಗುರುತಿಸುತ್ತದೆ.
ಕಳೆದ ವರ್ಷ ಕಾನೂನಿನ ಬಗ್ಗೆ ಸರ್ಕಾರದ ವಿರುದ್ಧ ಮೊಕದ್ದಮೆ ಹೂಡಿದ ಟಿಕ್‌ಟಾಕ್, ಚೀನಾ ಸರ್ಕಾರಕ್ಕೆ ಸಾಧನವಾಗಿ ಬಳಸಬಹುದೆಂದು ನಿರಂತರವಾಗಿನಿರಾಕರಿಸಿದೆ. ಡಿಸೆಂಬರ್‌ನಲ್ಲಿ, ಇಬ್ಬರು ರಿಪಬ್ಲಿಕನ್ ನೇಮಕಾತಿಗಳು ಮತ್ತು ಒಬ್ಬ ಡೆಮಾಕ್ರಟಿಕ್ ನೇಮಕಾತಿಯನ್ನು ಒಳಗೊಂಡ ಮೂವರು ನ್ಯಾಯಾಧೀಶರ ಪ್ಯಾನೆಲ್ ಸರ್ವಾನುಮತದಿಂದ ಕಾನೂನನ್ನು ಎತ್ತಿಹಿಡಿದಿದೆ, ಇದು ಟಿಕ್‌ಟಾಕ್ ಸುಪ್ರೀಂ ಕೋರ್ಟ್‌ಗೆ ತ್ವರಿತವಾಗಿ ಮೇಲ್ಮನವಿ ಸಲ್ಲಿಸಲು ಕಾರಣವಾಯಿತು.
ಟಿಕ್‌ಟಾಕ್ ಅನ್ನು ಅನುಮೋದಿತ ಖರೀದಿದಾರರಿಗೆ ಮಾರಾಟ ಮಾಡದಿದ್ದರೆ, ಆಪಲ್ ಮತ್ತು ಗೂಗಲ್ ನಿರ್ವಹಿಸುವ ಅಪ್ಲಿಕೇಶನ್ ಅಂಗಡಿಗಳು ಭಾನುವಾರದಿಂದ ಟಿಕ್‌ಟಾಕ್ ಅನ್ನು ನೀಡುವುದನ್ನು ಕಾನೂನು ತಡೆಯುತ್ತದೆ. ಹೆಚ್ಚುವರಿಯಾಗಿ, ಇಂಟರ್ನೆಟ್ ಹೋಸ್ಟಿಂಗ್ ಸೇವೆಗಳು ಅಪ್ಲಿಕೇಶನ್ ಅನ್ನು ಹೋಸ್ಟ್ ಮಾಡುವುದನ್ನು ನಿಷೇಧಿಸಲಾಗುತ್ತದೆ.
ಟಿಕ್‌ಟಾಕ್‌ನ ಪೇರೆಂಟ್ ಕಂಪನಿ ಬೈಟ್‌ಡ್ಯಾನ್ಸ್ ಮಾರಾಟ ಮಾಡಲು ಇಷ್ಟವಿಲ್ಲ ಎಂದು ಹೇಳಿದೆ. ಆದಾಗ್ಯೂ, ಮಾಜಿ ಖಜಾನೆ ಕಾರ್ಯದರ್ಶಿ ಸ್ಟೀವನ್ ಮ್ನುಚಿನ್ ಮತ್ತು ಬಿಲಿಯನೇರ್ ಫ್ರಾಂಕ್ ಮೆಕೋರ್ಟ್ ಸೇರಿದಂತೆ ಕೆಲವು ಹೂಡಿಕೆದಾರರು ಟಿಕ್‌ಟಾಕ್ ಅನ್ನು ಸ್ವಾಧೀನಪಡಿಸಿಕೊಳ್ಳಲು ಆಸಕ್ತಿ ತೋರಿಸಿದ್ದಾರೆ. ಮೆಕೋರ್ಟ್‌ನ ಪ್ರಾಜೆಕ್ಟ್ ಲಿಬರ್ಟಿ ಉಪಕ್ರಮವು ತನ್ನ ಹೆಸರಿಸದ ಪಾಲುದಾರರೊಂದಿಗೆ, ಟಿಕ್‌ಟಾಕ್‌ನ ಯುಎಸ್ ಸ್ವತ್ತುಗಳನ್ನು ಖರೀದಿಸಲು ಬೈಟ್‌ಡ್ಯಾನ್ಸ್‌ಗೆ ಪ್ರಸ್ತಾಪವನ್ನು ಮಂಡಿಸಿದೆ, ಆದರೂ ಹಣಕಾಸಿನ ನಿಯಮಗಳು ಬಹಿರಂಗಗೊಂಡಿಲ್ಲ.
ಕಾನೂನನ್ನು ಜಾರಿಗೊಳಿಸುವುದು ಬೈಟ್‌ಡ್ಯಾನ್ಸ್ ತನ್ನ ನಿಲುವನ್ನು ಪುನರ್ವಿಮರ್ಶಿಸಲು ಅಗತ್ಯವಿರುವ ವೇಗವರ್ಧಕವಾಗಿದೆ ಎಂದು ಸಾಲಿಸಿಟರ್ ಜನರಲ್ ಎಲಿಜಬೆತ್ ಪ್ರಿಲೋಗರ್ ಕಳೆದ ವಾರ ನ್ಯಾಯಾಧೀಶರಿಗೆ ತಿಳಿಸಿದರು.

# 36 ಕ್ರೀಡಾಪಟುಗಳಿಗೆ ಕ್ರೀಡಾ ಪ್ರಶಸ್ತಿ ಪ್ರಧಾನ



ದೇಶದ 32 ಕ್ರೀಡಾಪಟುಗಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ರಾಷ್ಟ್ರೀಯ ಕ್ರೀಡಾ ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸಿದ್ದಾರೆ.
ರಾಷ್ಟ್ರಪತಿ ಭವನದಲ್ಲಿ ನಡೆದ ಈ ಸಮಾರಂಭದಲ್ಲಿ, ಡಬಲ್ ಒಲಿಂಪಿಕ್ ಪದಕ ವಿಜೇತೆ ಶೂಟರ್ ಮನು ಭಾಕರ್, ವಿಶ್ವ ಚೆಸ್ ಚಾಂಪಿಯನ್ ಡಿ.ಗುಕೇಶ್, ಎರಡು ಬಾರಿ ಒಲಿಂಪಿಕ್ ಪದಕ ವಿಜೇತ ಮತ್ತು ಪುರುಷರ ಹಾಕಿ ತಂಡ ನಾಯಕ ಹರ್ಮನ್‌ಪ್ರೀತ್ ಸಿಂಗ್ ಮತ್ತು ಪ್ಯಾರಾಲಿಂಪಿಕ್ ಚಿನ್ನದ ಪದಕ ವಿಜೇತ ಹೈಜಂಪರ್ ಪ್ರವೀಣ್ ಕುಮಾರ್ ಅವರು ದೇಶದ ಅತ್ಯುನ್ನತ ಕ್ರೀಡಾ ಗೌರವ ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿಯನ್ನು ಸ್ವೀಕರಿಸಿದರು. ಇನ್ನು ಅನ್ನು ರಾಣಿ ಸೇರಿದಂತೆ 32 ಕ್ರೀಡಾಪಟುಗಳು ಅರ್ಜುನ ಪ್ರಶಸ್ತಿ ಸ್ವೀಕರಿಸಿದರೆ, ಐವರು ಕೋಚ್ ಗಳಿಗೆ ದ್ರೋಣಾಚಾರ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.

# ಪಟಾಕಿ ಮೇಲಿನ ನಿಷೇಧ ವಿಸ್ತರಿಸಿದ ಸುಪ್ರೀಂ

**ನವದೆಹಲಿ:** ಸುಪ್ರೀಂ ಕೋರ್ಟ್ ಎನ್‌ಸಿಆರ್ ಅಡಿಯಲ್ಲಿ ಬರುವ ಉತ್ತರ ಪ್ರದೇಶ ಮತ್ತು ಹರಿಯಾಣ ಜಿಲ್ಲೆಗಳಲ್ಲಿ ಪಟಾಕಿಗಳ ಬಳಕೆಯ ಮೇಲಿನ ಸಂಪೂರ್ಣ ನಿಷೇಧವನ್ನು ಮುಂದಿನ ಆದೇಶದವರೆಗೆ ವಿಸ್ತರಿಸಿದೆ.
ದೆಹಲಿ ಮತ್ತು ಓಎಖನಲ್ಲಿ ವಾಯು ಮಾಲಿನ್ಯಕ್ಕೆ ಸಂಬಂಧಿಸಿದ ವಿಷಯದ ವಿಚಾರಣೆ ನಡೆಸುವಾಗ ನ್ಯಾಯಮೂರ್ತಿ ಅಭಯ್ ಎಸ್ ಓಕಾ ಮತ್ತು ನ್ಯಾಯಮೂರ್ತಿ ಉಜ್ಜಲ್ ಭುಯಾನ್ ಅವರನ್ನೊಳಗೊಂಡ ಪೀಠವು ಪಟಾಕಿಗಳ ಮೇಲಿನ ಸಂಪೂರ್ಣ ನಿಷೇಧವನ್ನು ವಿಸ್ತರಿಸಿದೆ.
ಉತ್ತರ ಪ್ರದೇಶ ಸರ್ಕಾರ ಎಲ್ಲಾ ರೀತಿಯ ಪಟಾಕಿಗಳ ಬಳಕೆಯ ಮೇಲೆ ಸಂಪೂರ್ಣ ನಿಷೇಧ ಹೇರಿತ್ತು. ಆದ್ದರಿಂದ ಸುಪ್ರೀಂ ಕೋರ್ಟ್ ಆದೇಶವನ್ನು ಪಾಲಿಸಿದೆ ಎಂದು ಸುಪ್ರೀಂ ಕೋರ್ಟ್ ಪೀಠಕ್ಕೆ ತಿಳಿಸಿದೆ. ಪಟಾಕಿಗಳ ಮೇಲೆ ತಾತ್ಕಾಲಿಕ ನಿಷೇಧವನ್ನು ಕೋರಿಲ್ಲ. ದೆಹಲಿ ಸರ್ಕಾರದ ಮಾದರಿಯಲ್ಲಿ



ಶಾಶ್ವತ ನಿಷೇಧವನ್ನು ಪರಿಗಣಿಸಲು ನಿರ್ದೇಶಿಸಲಾಗಿದೆ ಎಂದು ನ್ಯಾಯಪೀಠವು ಉತ್ತರ ಪ್ರದೇಶದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಗರಿಮಾ ಪ್ರಸಾದ್ ಅವರನ್ನು ಕೇಳಿತು.
ಇಂದಿನವರೆಗೆ ಜಾರಿಯಲ್ಲಿದ್ದ ಉತ್ತರ ಪ್ರದೇಶ ಮತ್ತು ಹರಿಯಾಣ ರಾಜ್ಯಗಳು ಎನ್‌ಸಿಆರ್ ಭಾಗಗಳಿಗೆ ವಿಧಿಸಿರುವ ನಿಷೇಧವನ್ನು ಮುಂದಿನ ಆದೇಶಗಳು ಜಾರಿಗೆ ಬರುವವರೆಗೆ ವಿಸ್ತರಿಸಲಾಗಿದೆ.
ಎನ್‌ಸಿಆರ್‌ನ ಭಾಗವಾಗಿರುವ ಎಲ್ಲಾ ರಾಜ್ಯಗಳು ದೆಹಲಿ ಸರ್ಕಾರ ಮತ್ತು ರಾಜಸ್ಥಾನ ಸರ್ಕಾರ ವಿಧಿಸಿರುವ ನಿಷೇಧವನ್ನು ಅನುಸರಿಸಿದಾಗ ಮತ್ತು ಓಅಖ ಪ್ರದೇಶದ ಅಡಿಯಲ್ಲಿ ಬರುವ ಪ್ರದೇಶಗಳಲ್ಲಿ ಇದೇ ರೀತಿಯ ಶಾಶ್ವತ ನಿಷೇಧವನ್ನು ವಿಧಿಸಲು ಉತ್ತರ ಪ್ರದೇಶ ಮತ್ತು ಹರಿಯಾಣ ಸರ್ಕಾರಗಳನ್ನು ಕೇಳಿದಾಗ ಮಾತ್ರ ವರ್ಷವಿಡೀ ಪಟಾಕಿಗಳ ಬಳಕೆಯ ಮೇಲಿನ ಸಂಪೂರ್ಣ ನಿಷೇಧವು ಪರಿಣಾಮಕಾರಿಯಾಗಿರುತ್ತದೆ ಎಂದು ಸುಪ್ರೀಂ ಕೋರ್ಟ್ ಕಳೆದ ವರ್ಷ ಡಿಸೆಂಬರ್ 19ರಂದು ಹೇಳಿತ್ತು.
ವಾಯು ಮಾಲಿನ್ಯವನ್ನು ತಡೆಗಟ್ಟಲು ಮಾತ್ರವಲ್ಲದೆ ಶಬ್ದ ಮಾಲಿನ್ಯವನ್ನೂ ತಡೆಯಲು ಪಟಾಕಿಗಳ ಮೇಲೆ ನಿಷೇಧ ಹೇರುವುದು ಅಗತ್ಯ ಎಂದು ಹೇಳುತ್ತಾ ವರ್ಷವಿಡೀ ಪಟಾಕಿಗಳ ಬಳಕೆಯ ಮೇಲೆ ಸಂಪೂರ್ಣ ನಿಷೇಧವನ್ನು ಪರಿಗಣಿಸಲು ಮತ್ತು ಈ ನಿಟ್ಟಿನಲ್ಲಿ ತಮ್ಮ ನಿರ್ಧಾರಗಳನ್ನು ತನ್ನ ಮುಂದೆ ಇಡಲು ಸುಪ್ರೀಂ ಕೋರ್ಟ್ ಈ ಹಿಂದೆ ರಾಜ್ಯಗಳಿಗೆ ನಿರ್ದೇಶನ ನೀಡಿತ್ತು.

# ಉಕ್ರೇನ್ ವಿರುದ್ಧ ಯುದ್ಧ: 12 ಭಾರತೀಯರ ಸಾವು

**ನವದೆಹಲಿ:** ರಷ್ಯಾ-ಉಕ್ರೇನ್ ಸಂಘರ್ಷದಲ್ಲಿ ರಷ್ಯಾ ಪರವಾಗಿ ಹೋರಾಡುತ್ತಿರುವ ಒಟ್ಟು 126 ಭಾರತೀಯರಲ್ಲಿ 12 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ ಮತ್ತು 16 ಮಂದಿ ನಾಪತ್ತೆಯಾಗಿದ್ದಾರೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ.
ರಷ್ಯಾ-ಉಕ್ರೇನ್ ಸಂಘರ್ಷದಲ್ಲಿ ರಷ್ಯಾ ಪರವಾಗಿ ಹೋರಾಡುತ್ತಿರುವ ಒಟ್ಟು 126 ಭಾರತೀಯರಲ್ಲಿ 12 ಮಂದಿ ಸಾವನ್ನಪ್ಪಿದ್ದಾರೆ ಮತ್ತು 16 ಭಾರತೀಯರು ಕಾಣೆಯಾಗಿದ್ದಾರೆ. ಇದುವರೆಗೂ 96 ಮಂದಿ ಭಾರತಕ್ಕೆ ವಾಪಾಸ್ ಬಂದಿದ್ದಾರೆ, 18 ಮಂದಿ ಇನ್ನೂ ಭಾರತಕ್ಕೆ ಮರಳಿಲ್ಲ ಎಂದು ಅವರು ಹೇಳಿದ್ದಾರೆ.
ರಷ್ಯಾದ ಸೈನ್ಯದಲ್ಲಿ ಮುಂಚೂಣಿಯಲ್ಲಿ ಹೋರಾಡುತ್ತಾ ಸಾವನ್ನಪ್ಪಿದ ಕೇರಳದ ವ್ಯಕ್ತಿ ಬಿನಿಲ್ ಬಾಬು (32) ಅವರ ಸಾವಿನ ಬಗ್ಗೆ ಮಾತನಾಡಿದ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್, ಈ ಘಟನೆಯನ್ನು 'ದುರದೃಷ್ಟಕರ' ಎಂದು ಕರೆದಿದ್ದಾರೆ. ನಮ್ಮ ರಾಯಭಾರ ಕಚೇರಿ ರಷ್ಯಾದ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದೆ. ಇದರಿಂದಾಗಿ ಅವರ ಮೃತದೇಹವನ್ನು ಆದಷ್ಟು ಬೇಗ ಭಾರತಕ್ಕೆ ತರಬಹುದು" ಎಂದು ಹೇಳಿದ್ದಾರೆ.
ರಷ್ಯಾದಲ್ಲಿ ಉಳಿದಿರುವವರನ್ನು ಸ್ವದೇಶಕ್ಕೆ ಕರೆತರಲು ಭಾರತ ಪ್ರಯತ್ನಿಸುತ್ತಿದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರರು ತಿಳಿಸಿದ್ದಾರೆ. ಇಂದಿನವರೆಗೆ 126 ರಷ್ಯಾದ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಭಾರತೀಯ ಪ್ರಜೆಳಿದ್ದಾರೆ ಎಂದು ವರದಿಯಾಗಿವೆ. ಈ 126 ಜನರಲ್ಲಿ 96 ಜನರು ಭಾರತಕ್ಕೆ ಮರಳಿದ್ದಾರೆ ಮತ್ತು ರಷ್ಯಾದ ಸಶಸ್ತ್ರ ಪಡೆಗಳಿಂದ ಬಿಡುಗಡೆಗೊಂಡಿದ್ದಾರೆ. ರಷ್ಯಾದ ಸೇನೆಯಲ್ಲಿರುವ 18 ಭಾರತೀಯ ಪ್ರಜೆಗಳು ಉಳಿದಿದ್ದಾರೆ ಮತ್ತು ಅವರಲ್ಲಿ 16 ವ್ಯಕ್ತಿಗಳು ಎಲ್ಲಿದ್ದಾರೆ ಎಂಬುದು ತಿಳಿದಿಲ್ಲ" ಎಂದು ಜೈಸ್ವಾಲ್ ಹೇಳಿದ್ದಾರೆ.

# ಬೀದಿ ನಾಯಿಗಳ ಕ್ರೂರ ಹತ್ಯೆಗೆ ಮೊರಾಕೊ ನಿರ್ಧಾರ

**ನವದೆಹಲಿ:** 2030ರ ಫಿಫಾ ವಿಶ್ವಕಪ್ ಅನ್ನು ಆಯೋಜಿಸಲು ಮೊರಾಕೊ ಸಿದ್ಧವಾಗುತ್ತಿದ್ದಂತೆ ಸುಮಾರು 3 ಮಿಲಿಯನ್ ನಾಯಿಗಳನ್ನು ಕೊಲ್ಲಲು ನಿರ್ಧರಿಸಲಾಗಿದೆ ಎಂಬ ವರದಿಗಳು ಜಗತ್ತಿನಾದ್ಯಂತ ಟೀಕೆಗೆ ಕಾರಣವಾಗಿದೆ.
ಬೀದಿ ನಾಯಿಗಳಿಗೆ ಸ್ಟ್ರೈಕ್ನೈನ್ ಅನ್ನು ಚುಚ್ಚುಮದ್ದಿನ ಮೂಲಕ ಕೊಲ್ಲಲಾಗುತ್ತಿದೆ ಎಂದು ವರದಿಗಳು ಹೇಳುತ್ತವೆ. ಇದು ಅತ್ಯಂತ ವಿಷಕಾರಿ ರಾಸಾಯನಿಕವಾಗಿದೆ.
2030ರ ಫಿಫಾ ವಿಶ್ವಕಪ್‌ಗೆ ಮುಂಚಿತವಾಗಿ 30 ಲಕ್ಷ ಬೀದಿನಾಯಿಗಳನ್ನು ಕೊಲ್ಲಲು ಮೊರಾಕೊ ಪ್ಲಾನ್ ಮಾಡುತ್ತಿದೆ ಎಂದು ವರದಿಗಳು ಸೂಚಿಸುತ್ತವೆ. ಮೊರಾಕೊ, ಸ್ಪೇನ್ ಮತ್ತು ಪೋರ್ಚುಗಲ್ ಎಂಬ 3 ದೇಶಗಳಲ್ಲಿ ನಡೆಯಲಿರುವ ಮುಂದಿನ ಫುಟ್ಬಾಲ್ ವಿಶ್ವಕಪ್‌ಗಾಗಿ ಮೊರಾಕೊದ ನಗರಗಳಿಗೆ ಭೇಟಿ ನೀಡುವ ಫುಟ್‌ಬಾಲ್ ಅಭಿಮಾನಿಗಳಿಗೆ ಮೊರಾಕೊ ನಗರ ಹೆಚ್ಚು ಆಕರ್ಷಕವಾಗಿ ಕಾಣುವಂತೆ ಮಾಡಲು



ನಾಯಿಗಳ ಹತ್ಯೆಯ ಮೂಲಕ ಬೀದಿನಾಯಿ ಮುಕ್ತ ರಸ್ತೆಗಳನ್ನು ಸಿದ್ಧಪಡಿಸುವ ಕಾರ್ಯಕ್ಕೆ ಮೊರಾಕೊ ನಿರ್ಧರಿಸಿದೆ.
ಈ ಕಾರ್ಯ ಜಾಗತಿಕವಾಗಿ ಆಕ್ರೋಶವನ್ನು ಹುಟ್ಟುಹಾಕಿದೆ. ಏಕೆಂದರೆ, ಈ ವರದಿಗಳು 'ಕ್ರೂರ' ಮತ್ತು 'ಆಘಾತಕಾರಿ' ಎಂದು ಟೀಕೆಗೆ ಒಳಗಾಗಿವೆ. ಕೆಲವು ವರದಿಗಳು ಉತ್ತರ ಆಫ್ರಿಕಾದ ರಾಷ್ಟ್ರವು ನಾಯಿಗಳನ್ನು ಕೊಲ್ಲುವ ಮೂಲಕ ಬೀದಿಗಳನ್ನು ಸ್ವಚ್ಛಗೊಳಿಸಲು ಪ್ರಾರಂಭಿಸಿದೆ ಎಂದು ಹೇಳುತ್ತವೆ. ಈಗಾಗಲೇ ದೇಶದ ಹಲವಾರು ಸ್ಥಳಗಳಲ್ಲಿ ನಾಯಿಗಳನ್ನು ಕೊಲ್ಲಲಾಗುತ್ತಿದೆ. ಡೈಲಿ ಮೇಲ್ ವರದಿಯ ಪ್ರಕಾರ, ಪ್ರಸಿದ್ಧ ಪ್ರಾಣಿ ಹಕ್ಕುಗಳ ಪ್ರಚಾರಕಿ ಜೇನ್ ಗುಡಾಲ್, ಅಂತಾರಾಷ್ಟ್ರೀಯ ಫುಟ್ಬಾಲ್ ಅಸೋಸಿಯೇಷನ್ ಜೊತೆ ಈ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಫುಟ್ಬಾಲ್ ಅಸೋಸಿಯೇಷನ್ ಈ ಬೆಳವಣಿಗೆಯ ಬಗ್ಗೆ ಕಣ್ಣು ಮುಚ್ಚಿಕೊಂಡಿದೆ ಎಂದು ಆರೋಪಿಸಿದ್ದಾರೆ ಮತ್ತು ತಕ್ಷಣದ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.
ಫಿಫಾ ವಿಶ್ವಕಪ್ ಪ್ರತಿ 4 ವರ್ಷಗಳಿಗೊಮ್ಮೆ ಬರುತ್ತದೆ. ಈ ಪಂದ್ಯವನ್ನು ವೀಕ್ಷಿಸಲು ಜಗತ್ತಿನಾದ್ಯಂತ ಪ್ರೇಕ್ಷಕರು ಬರುತ್ತಾರೆ. ಇದು ಪ್ರಪಂಚದಾದ್ಯಂತದ ಶತಕೋಟಿ ಅಭಿಮಾನಿಗಳ ಮೇಲೆ ಪರಿಣಾಮ ಬೀರುತ್ತದೆ ಮತ್ತು ಭಾರೀ ಗಮನವನ್ನು ಸೆಳೆಯುತ್ತದೆ. ಹೀಗಾಗಿ, ದೇಶಗಳು ಆತಿಥೇಯ ಹಕ್ಕುಗಳನ್ನು ಪಡೆದ ನಂತರ ತಮ್ಮ ಕೈಲಾದಷ್ಟು ಪ್ರೇಕ್ಷಕರ ಮನಸಿಗೆ ಇಷ್ಟವಾಗುವಂತೆ ತಯಾರಿಗಳನ್ನು ಮಾಡುತ್ತವೆ.
ಮೊರಾಕೊದ ಬೀದಿ ನಾಯಿಗಳನ್ನು ಕೀಟನಾಶಕವಾಗಿ ಬಳಸುವ ಅತ್ಯಂತ ವಿಷಕಾರಿ ರಾಸಾಯನಿಕವಾದ ಸ್ಟ್ರೈಕ್ನೈನ್ ಅನ್ನು ಇಂಜೆಕ್ಷನ್ ಮೂಲಕ ನೀಡಿ ಕೊಲ್ಲಲಾಗುತ್ತಿದೆ, ನಾಯಿಗಳನ್ನು ಬೀದಿಗಳಲ್ಲಿ ಗುಂಡು ಹಾರಿಸಲಾಗುತ್ತಿದೆ ಅಥವಾ ಸೆರೆಹಿಡಿದು ಕಸಾಯಿಖಾನೆಗಳಿಗೆ ಕಳುಹಿಸಲಾಗುತ್ತಿದೆ. ಇದಕ್ಕೂ ಮೊದಲು, ಮೊರಾಕೊದ ಅಧಿಕಾರಿಗಳು 2024ರಲ್ಲಿ ನಾಯಿಗಳ ಹತ್ಯೆ ನಿಲ್ಲಿಸಲಾಗಿದೆ ಎಂದು ಹೇಳಿದ್ದರು. ಆದರೆ, 2023ರಲ್ಲಿ ಉತ್ತರ ಆಫ್ರಿಕಾದ ಮೊರಾಕೊ ದೇಶಕ್ಕೆ ಆತಿಥ್ಯ ವಹಿಸುವ ಹಕ್ಕುಗಳನ್ನು ನೀಡುವ ಈಖಈಂ ಘೋಷಣೆಯ ನಂತರ ಆ ದೇಶದಲ್ಲಿ ನಾಯಿಗಳ ಹತ್ಯೆಯಲ್ಲಿ ಹೆಚ್ಚಳವಾಗಿದೆ ಎಂದು ವರದಿಗಳು ಸುಳಿವು ನೀಡಿವೆ.

# ಇಸ್ರೇಲ್ ದಾಳಿ: ಗಾಜಾದಲ್ಲಿ 80 ಮಂದಿ ಸಾವು


**ಟೆಲ್ ಅವೀವಾ:** ಇಸ್ರೇಲ್ ಮತ್ತು ಗಾಜಾ ನಡುವೆ ಕದನ ವಿರಾಮ ಒಪ್ಪಂದ ಅಂತಿಮವಾಗಲು ವಿಳಂಬವಾಗುತ್ತಿರುವ ನಡುವೆ ಗಾಜಾ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಕನಿಷ್ಠ 80 ಮಂದಿ ಸಾವನ್ನಪ್ಪಿದ್ದಾರೆ.
ಕಳೆದ ಒಂದು ವರ್ಷಕ್ಕೂ ಅಧಿಕ ಸಮಯದಿಂದ ನಡೆಯುತ್ತಿರುವ ಸಂಘರ್ಷದಲ್ಲಿ ಇದುವರೆಗೂ ಸಾವಿರಾರು ಮಂದಿ ಸಾವನ್ನಪ್ಪಿದ್ದು ಲಕ್ಷಾಂತರ ಮಂದಿ ನಿರಾಶ್ರಿತರಾಗಿದ್ದಾರೆ.
ಜೊತೆಗೆ ಸಾವಿರಾರು ಮಂದಿ ಮನೆ ಮಠ ತೊರೆದು ಬೇರೆ ಕಡೆ ವಲಸೆ ಹೋಗುವಂತಾಗಿದೆ. ಕದನ ವಿರಾಮದ ಮಾತುಕತೆಗಳು ಇಸ್ರೇಲ್ ಮತ್ತು ಗಾಜಾ ನಡುವೆ ನಡೆದ ಸಂಘರ್ಷದಲ್ಲಿ 80 ಮಂದಿ ಸಾವನ್ನಪ್ಪಿದ್ದಾರೆ ಎಂದು ಹಮಾಸ್ ನಡೆಸುತ್ತಿರುವ ಆರೋಗ್ಯ ಸಚಿವಾಲಯ ತಿಳಿಸಿದೆ.
ಪ್ರಧಾನಿ ಬೆಂಜಮಿನ್ ನೇತಾನ್ಯಾಹು ಸರ್ಕಾರದ ಸಂಪುಟ ಸಭೆ ನಡೆಯುವುದಕ್ಕೂ ಮುನ್ನ ಇಸ್ರೇಲ್ ಸೇನೆ ಹಮಾಸ್ ಮೇಲೆ ನಡೆಸಿದ ದಾಳಿಯಲ್ಲಿ ಈ ಸಾವು ನೋವು ಸಂಭವಿಸಿದೆ.



ಕದನ ವಿರಾಮ ಒಪ್ಪಂದ ಘೋಷಿಸಿದ ನಂತರ ಇಸ್ರೇಲಿ ವೈಮಾನಿಕ ದಾಳಿಗಳು ಮುಂದುವರಿದಿದೆ. ಗಾಜಾ ನಗರದಲ್ಲಿ ಕನಿಷ್ಠ 12 ಜನರು ಸಾವನ್ನಪ್ಪಿದ್ದಾರೆ.
ಅಲ್ಲಿ ವೈದ್ಯರು ಮತ್ತು ಸಿಬ್ಬಂದಿಗೆ ರಕ್ತಸಿಕ್ತ ರಾತ್ರಿ ಸಮಯದಲ್ಲಿ ಒಂದು ನಿಮಿಷ ವಿಶ್ರಾಂತಿ ಪಡೆಯಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ ಎಂದು ಹೇಳಲಾಗಿದೆ.
ಒಪ್ಪಂದದ ಘೋಷಣೆಯ ಪ್ರಕಟಣೆ ಬಂದ ನಂತರವೂ ಗಾಜಾದಲ್ಲಿ 50 ಗುರಿಗಳ ಮೇಲೆ ದಾಳಿ ನಡೆಸಲಾಗಿದೆ. ಎಂದು ಇಸ್ರೇಲ್ ರಕ್ಷಣಾ ಪಡೆಗಳು ಮತ್ತು ಇಸ್ರೇಲಿ ಭದ್ರತಾ ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ.
ಕತಾರ್‌ನ ಪ್ರಧಾನ ಮಂತ್ರಿ ಅವರ ಮಾತುಕತೆಗಳ ಮಧ್ಯಸ್ಥಿಕೆ ಮೊದಲ ಆರು ವಾರಗಳ ಕದನ ವಿರಾಮ ಒಪ್ಪಂದದ ಪ್ರಾರಂಭದ ಮೊದಲು ಎರಡೂ ಕಡೆಗಳಲ್ಲಿ ಶಾಂತಿಗಾಗಿ ಕರೆ ನೀಡಲಾಗಿದೆ.
2023ರ ಅಕ್ಟೋಬರ್ 7 ರಂದು ಇಸ್ರೇಲ್ ಮೇಲೆ ಅಭೂತಪೂರ್ವ ಗಡಿಯಾಚೆಗಿನ ದಾಳಿಗೆ ಪ್ರತಿಕ್ರಿಯೆಯಾಗಿ ಹಮಾಸ್ ಅನ್ನು ನಾಶಮಾಡಲು ಇಸ್ರೇಲ್ ಅಭಿಯಾನ ಪ್ರಾರಂಭಿಸಿತು, ಇಸ್ರೇಲ್, ಅಮೇರಿಕಾ ಇತರರಿಂದ ಭಯೋತ್ಪಾದಕ ಸಂಘಟನೆ ಎಂದು ನಿಷೇಧಿಸಲಾಗಿದೆ.
ಇಲ್ಲಿಯವರೆಗೆ ಸುಮಾರು 1,200 ಜನರು ಸಾವನ್ನಪ್ಪಿದ್ದಾರೆ. ಮತ್ತು 251 ಮಂದಿಯನ್ನು ಒತ್ತೆಯಾಳುಗಳನ್ನಾಗಿ ಇರಿಸಿಕೊಳ್ಳಲಾಗಿದೆ. ಗಾಜಾದಲ್ಲಿ 46,788ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದಾರೆ. ಗಾಜಾದ 2.3 ದಶಲಕ್ಷ ಜನಸಂಖ್ಯೆಯಲ್ಲಿ ಹೆಚ್ಚಿನವರು ಸ್ಥಳಾಂತರಗೊಂಡಿದ್ದಾರೆ,
ವ್ಯಾಪಕ ವಿನಾಶವಿದೆ ಮತ್ತು ಆಹಾರ, ಇಂಧನ, ಔಷಧ ಮತ್ತು ಆಶ್ರಯದ ತೀವ್ರ ಕೊರತೆಯಿದೆ, ಆದರೆ ಸಹಾಯ ಸಂಸ್ಥೆಗಳು ಅಗತ್ಯವಿರುವವರಿಗೆ ಸಹಾಯ ಪಡೆಯಲು ಹೆಣಗಾಡುತ್ತಿವೆ. 94 ಒತ್ತೆಯಾಳುಗಳನ್ನು ಇನ್ನೂ ಹಮಾಸ್ ಹಿಡಿದಿಟ್ಟುಕೊಂಡಿದೆ ಎಂದು ಇಸ್ರೇಲ್ ಹೇಳುತ್ತದೆ.

# ರಿಲಯನ್ಸ್‌ನಿಂದ ಜಿಯೋಕಾಯಿನ್ ಬಿಡುಗಡೆ

2025ರ ಆರಂಭದೊಂದಿಗೆ, ಭಾರತದ ಅತಿದೊಡ್ಡ ವ್ಯಾಪಾರ ಸಂಘಟಿತ ರಿಲಯನ್ಸ್ ಇಂಡಸ್ಟ್ರೀಸ್, "ಜಿಯೋಕಾಯಿನ್" ಎಂಬ ಬ್ಲಾಕ್‌ಚೈನ್ ಆಧಾರಿತ ರಿವಾರ್ಡ್ ಟೋಕನ್ ಅನ್ನು ಪ್ರಾರಂಭಿಸುವ ಮೂಲಕ ವೆಬ್3 ಜಾಗಕ್ಕೆ ದಿಟ್ಟ ಹೆಜ್ಜೆ ಇಟ್ಟಿದೆ.
ಭಾರತದಲ್ಲಿ ಕ್ರಿಪ್ಟೋ ಸುತ್ತಲಿನ ಪ್ರಸ್ತುತ ಕಾನೂನು ಭೂದೃಶ್ಯದಿಂದಾಗಿ ಜಿಯೋಕಾಯಿನ್ ಅನ್ನು ಕ್ರಿಪ್ಟೋಕರೆನ್ಸಿ ಎಂದು ವರ್ಗೀಕರಿಸಲಾಗಿಲ್ಲವಾದರೂ, ಈ ಉಪಕ್ರಮವು ಡಿಜಿಟಲ್ ಆರ್ಥಿಕತೆಯನ್ನು ಪರಿವರ್ತಿಸಲು ಮತ್ತು ಕ್ರಿಪ್ಟೋ ಪರಿಸರ ವ್ಯವಸ್ಥೆಯನ್ನು ಅಡ್ಡಿಪಡಿಸಲು ರಿಲಯನ್ಸ್‌ನ ಸಿದ್ಧತೆಯನ್ನು ಎತ್ತಿ ತೋರಿಸುತ್ತದೆ.
ಜನವರಿ 15, 2025ರಂದು, ಜಿಯೋ ಪ್ಲಾಟ್‌ಫಾರ್ಮ್‌ಗಳು ತಮ್ಮ ವಿಸ್ತಾರವಾದ ಬಳಕೆದಾರರ ನೆಲೆಗೆ ವೆಬ್3 ಸಾಮರ್ಥ್ಯಗಳನ್ನು ತರಲು ಪಾಲಿಗಾನ್ ಲ್ಯಾಬ್ಸ್ ಜೊತೆಗೆ ತಮ್ಮ ಸಹಯೋಗವನ್ನು ಘೋಷಿಸಿತು.
ಈ ಕಾರ್ಯತಂತ್ರದ ಭಾಗವಾಗಿ, ರಿಲಯನ್ಸ್ ತನ್ನ 450 ಮಿಲಿಯನ್ ಬಳಕೆದಾರರನ್ನು ತೊಡಗಿಸಿಕೊಳ್ಳುವ ಗುರಿಯನ್ನು ಹೊಂದಿರುವ ಬ್ಲಾಕ್‌ಚೈನ್ ಆಧಾರಿತ ಪ್ರತಿಫಲ ವ್ಯವಸ್ಥೆಯಾದ ಜಿಯೋಕಾಯಿನ್ ಅನ್ನು ಪರಿಚಯಿಸಿತು. ಈ ಪಾಲುದಾರಿಕೆಯು ಬಳಕೆದಾರರ ನಿಶ್ಚಿತಾರ್ಥವನ್ನು ಹೆಚ್ಚಿಸುತ್ತದೆ ಮತ್ತು ಭದ್ರತೆ ಮತ್ತು ಗೌಪ್ಯತೆಗೆ ಆದ್ಯತೆ ನೀಡುವ ನವೀನ ಬ್ಲಾಕ್‌ಚೈನ್ ಪರಿಹಾರಗಳನ್ನು ಒದಗಿಸುತ್ತದೆ ಎಂದು ನಿರೀಕ್ಷಿಸಲಾಗಿದೆ.
ಜಿಯೋಕಾಯಿನ್ ರಿಲಯನ್ಸ್‌ನ ಬ್ಲಾಕ್‌ಚೈನ್-ಆಧಾರಿತ ರಿವಾರ್ಡ್ ಪ್ರೋಗ್ರಾಂನ ಭಾಗವಾಗಿದೆ. ಇದು ಜಿಯೋ ಪ್ಲಾಟ್‌ಫಾರ್ಮ್‌ಗಳು ಮತ್ತು ಅಪ್ಲಿಕೇಶನ್‌ಗಳ ಬಳಕೆದಾರರಿಗೆ ರಿವಾರ್ಡ್ ಟೋಕನ್ ಆಗಿ ಕಾರ್ಯನಿರ್ವಹಿಸುತ್ತದೆ. ಜಿಯೋ ಅಪ್ಲಿಕೇಶನ್‌ಗಳೊಂದಿಗೆ ತೊಡಗಿಸಿಕೊಳ್ಳುವ ಮೂಲಕ ಮತ್ತು ತಮ್ಮ ಮೊಬೈಲ್ ಸಂಖ್ಯೆಗಳನ್ನು ಸಂಪರ್ಕಿಸುವ ಮೂಲಕ, ಬಳಕೆದಾರರು ಈ ಬ್ಲಾಕ್‌ಚೈನ್ ಆಧಾರಿತ ಟೋಕನ್‌ಗಳನ್ನು ಗಳಿಸಬಹುದು.
ಸಾಂಪ್ರದಾಯಿಕ ಕ್ರಿಪ್ಟೋಕರೆನ್ಸಿಗಳಿಗಿಂತ ಭಿನ್ನವಾಗಿ, ಜಿಯೋಕಾಯಿನ್‌ನ ಪ್ರಾಥಮಿಕ ಕಾರ್ಯವೆಂದರೆ ಜಿಯೋ ಪರಿಸರ ವ್ಯವಸ್ಥೆಯಲ್ಲಿ ಬಳಕೆದಾರರ ಚಟುವಟಿಕೆಯನ್ನು ಪ್ರೋತ್ಸಾಹಿಸುವುದು.
ಜಿಯೋಕಾಯಿನ್‌ಗಳನ್ನು ಪಡೆಯುವ ಹಂತಗಳು:



ಜಿಯೋಸ್ಫಿಯರ್ ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ: ಬಳಕೆದಾರರು ಗೂಗಲ್ ಪ್ಲೇ ಸ್ಟೋರ್‌ನಿಂದ ಅಧಿಕೃತ ಜಿಯೋಸ್ಫಿಯರ್ ಬ್ರೌಸರ್ ಅಪ್ಲಿಕೇಶನ್ ಅನ್ನು ಡೌನ್‌ಲೋಡ್ ಮಾಡಬೇಕು.
ಸೈನ್ ಅಪ್ ಮಾಡಿ: ಸ್ಥಾಪನೆಯ ನಂತರ, ಬಳಕೆದಾರರು "ಈಗ ಜಿಯೋಕಾಯಿನ್ ಗಳಿಸಲು ಸೈನ್ ಇನ್ ಮಾಡಿ" ಎಂದು ಪ್ರೇರೇಪಿಸುವ ಪಾಪ್-ಅಪ್ ಅಧಿಸೂಚನೆಯನ್ನು ಕಾಣಬಹುದು. ಸೈನ್‌ಅಪ್ ಪ್ರಕ್ರಿಯೆಗೆ ನೋಂದಾಯಿತ ಮೊಬೈಲ್ ಸಂಖ್ಯೆ ಸೇರಿದಂತೆ ವೈಯಕ್ತಿಕ ವಿವರಗಳನ್ನು ನಮೂದಿಸುವ ಅಗತ್ಯವಿದೆ.
ಜಿಯೋಕಾಯಿನ್ ವ್ಯಾಲೆಟ್ ರಚಿಸಿ: ಸೈನ್‌ಅಪ್ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದರಿಂದ ಅಪ್ಲಿಕೇಶನ್‌ನಲ್ಲಿ ಜಿಯೋಕಾಯಿನ್ ವ್ಯಾಲೆಟ್ ರಚಿಸುತ್ತದೆ, ಅಲ್ಲಿ ಬಳಕೆದಾರರು ತಮ್ಮ ರಿವಾರ್ಡ್ ಟೋಕನ್‌ಗಳನ್ನು ಮೇಲ್ವಿಚಾರಣೆ ಮಾಡಬಹುದು ಮತ್ತು ನಿರ್ವಹಿಸಬಹುದು.
ಜಿಯೋಕಾಯಿನ್ ಗಳಿಸುವುದು:
ಒಮ್ಮೆ ನೋಂದಾಯಿಸಿದ ನಂತರ, ಬಳಕೆದಾರರು ಜಿಯೋ ಅಪ್ಲಿಕೇಶನ್‌ಗಳೊಂದಿಗೆ ತೊಡಗಿಸಿಕೊಳ್ಳುವ ಮೂಲಕ ಮತ್ತು ನಿರ್ದಿಷ್ಟ ಕಾರ್ಯಗಳನ್ನು ಪೂರ್ಣಗೊಳಿಸುವ ಮೂಲಕ ಜಿಯೋಕಾಯಿನ್‌ಗಳನ್ನು ಗಳಿಸಬಹುದು. ಗಳಿಸಿದ ಟೋಕನ್‌ಗಳ ಸಂಖ್ಯೆಯು ಬಳಕೆದಾರರ ನಿಶ್ಚಿತಾರ್ಥದ ಮಟ್ಟವನ್ನು ಅವಲಂಬಿಸಿರುತ್ತದೆ, ಇದು ಪರಿಸರ ವ್ಯವಸ್ಥೆಯಲ್ಲಿ ಸಕ್ರಿಯ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುತ್ತದೆ.
ರಿಡೆಂಪ್ಶನ್ ವಿವರಗಳು:
ಪ್ರೋಗ್ರಾಂ ಪ್ರಸ್ತುತ ಬೀಟಾದಲ್ಲಿದ್ದರೂ, ಜಿಯೋ ಶೀಘ್ರದಲ್ಲೇ ಅಪ್ಲಿಕೇಶನ್‌ನಲ್ಲಿ ರಿಡೆಂಪ್ಶನ್ ವಿವರಗಳು ಲಭ್ಯವಿರುತ್ತವೆ ಎಂದು ಹೇಳಿದೆ. ಜಿಯೋಕಾಯಿನ್‌ಗಳನ್ನು ರೀಚಾರ್ಜ್‌ಗಳು, ಟಿಕೆಟ್ ಬುಕಿಂಗ್‌ಗಳು ಮತ್ತು ಉಡುಗೊರೆ ಖರೀದಿಗಳಂತಹ ಚಟುವಟಿಕೆಗಳಿಗೆ ಬಳಸಬಹುದು, ಡಿಜಿಟಲ್ ಉಡುಗೊರೆ ಕಾರ್ಡ್‌ಗಳಂತೆಯೇ ಕಾರ್ಯನಿರ್ವಹಿಸುತ್ತದೆ ಎಂದು ತಜ್ಞರು ಊಹಿಸುತ್ತಾರೆ.
ಜಿಯೋಕಾಯಿನ್‌ನೊಂದಿಗೆ ರಿಲಯನ್ಸ್‌ನ ದೃಷ್ಟಿ
ರಿಲಯನ್ಸ್ ತನ್ನ ವಿಸ್ತಾರವಾದ ಬಳಕೆದಾರರ ನೆಲೆಯನ್ನು ಬಳಸಿಕೊಳ್ಳುವ ಮೂಲಕ ಮತ್ತು ಜಿಯೋಕಾಯಿನ್‌ಗಳ ಮೂಲಕ ನಿಶ್ಚಿತಾರ್ಥವನ್ನು ಪ್ರೋತ್ಸಾಹಿಸುವ ಮೂಲಕ ಭಾರತದ ವೆಬ್3 ಪರಿಸರ ವ್ಯವಸ್ಥೆಯಲ್ಲಿ ಪ್ರಮುಖ ಆಟಗಾರನಾಗಿ ಸ್ಥಾಪಿಸಿಕೊಳ್ಳುವ ಗುರಿಯನ್ನು ಹೊಂದಿದೆ. ಕಂಪನಿಯ ದೀರ್ಘಾವಧಿಯ ಯೋಜನೆಯು ಉಡುಗೊರೆಗಳನ್ನು ಖರೀದಿಸುವುದು, ಟಿಕೆಟ್‌ಗಳನ್ನು ಬುಕಿಂಗ್ ಮಾಡುವುದು ಮತ್ತು ಇನ್ನೂ ಹೆಚ್ಚಿನ ಚಟುವಟಿಕೆಗಳಿಗೆ ಈ ಟೋಕನ್‌ಗಳನ್ನು ಬಳಸುವುದನ್ನು ಒಳಗೊಂಡಿದೆ. ಈ ನಡೆಯು ಭಾರತದ ನಿಯಂತ್ರಕ ಚೌಕಟ್ಟನ್ನು ಪಾಲಿಸುವಾಗ ಕ್ರಿಪ್ಟೋಕರೆನ್ಸಿ ಮಾರುಕಟ್ಟೆಯನ್ನು ಕ್ರಮೇಣ ಅಡ್ಡಿಪಡಿಸುವ ರಿಲಯನ್ಸ್‌ನ ಉದ್ದೇಶವನ್ನು ಸಹ ಗುರುತಿಸುತ್ತದೆ.
ಹೆಚ್ಚುವರಿಯಾಗಿ, ಪಾಲಿಗಾನ್ ಲ್ಯಾಬ್ಸ್ ಈ ಪಾಲುದಾರಿಕೆಯಿಂದ ಗಮನಾರ್ಹವಾಗಿ ಲಾಭ ಪಡೆಯುತ್ತದೆ, ಏಕೆಂದರೆ ಬ್ಲಾಕ್‌ಚೈನ್ ಜಾಗಕ್ಕೆ ಜಿಯೋದ ಏಕೀಕರಣವು ಪಾಲಿಗಾನ್‌ನ ವ್ಯಾಪ್ತಿಯನ್ನು ಘಾತೀಯವಾಗಿ ವಿಸ್ತರಿಸಬಹುದು.

# ತೆಲುಗಿನಲ್ಲಿ ಹೊಸ ಪ್ರಯೋಗಕ್ಕೆ ಮುಂದಾದ ನಟಿ ಸಾಯಿ ಪಲ್ಲವಿ



ನಟಿ ಸಾಯಿ ಪಲ್ಲವಿ ಅವರು ಹಲವು ರೀತಿಯ ಸಿನಿಮಾಗಳನ್ನು ಮಾಡಿ ಗಮನ ಸೆಳೆದಿದ್ದಾರೆ. ಮಲಯಾಳಂನಲ್ಲಿ ಅವರು ಮಹಿಳಾ ಪ್ರಧಾನ ಸಿನಿಮಾಗಳನ್ನು ನೀಡಿದ್ದಾರೆ. ಈಗ ಅವರು ತೆಲುಗು ಚಿತ್ರರಂಗದಲ್ಲಿ ಹೊಸ ಹೆಜ್ಜೆ ಇಡಲು ರೆಡಿ ಆಗಿದ್ದಾರೆ. ಅವರು ತೆಲುಗಿನಲ್ಲೂ ವುಮನ್ ಸೆಂಟ್ರಿಕ್ ಸಿನಿಮಾ ಮಾಡಲು ರೆಡಿ ಆಗಿದ್ದಾರೆ.

ಸಾಯಿ ಪಲ್ಲವಿ ಅವರು ಮಲಯಾಳಂ ಚಿತ್ರರಂಗ ಮಾತ್ರವಲ್ಲದೆ ವಿವಿಧ ಭಾಷೆಗಳಲ್ಲಿ ಸಿನಿಮಾಗಳನ್ನು ಒಪ್ಪಿಕೊಂಡು ನಟಿಸುತ್ತಿದ್ದಾರೆ. ತೆಲುಗು ಚಿತ್ರಂಗರದಲ್ಲೂ ಅವರಿಗೆ ಬೇಡಿಕೆ ಇದೆ. ತೆಲುಗಿನ 'ಫಿದಾ' ಸಿನಿಮಾದಲ್ಲಿ ಅವರು ನಟಿಸಿದ್ದರು. ಈ ಚಿತ್ರ ತೆಲುಗು ಚಿತ್ರದಲ್ಲಿ ಸಾಕಷ್ಟು ಹೆಸರು ಮಾಡಿದ ಸಿನಿಮಾ. ಹೀಗಿರುವಾಗಲೇ ಅವರಿಗೆ ಮಹಿಳಾ ಪ್ರಧಾನ ಸಿನಿಮಾ ಸಿಕ್ಕಿದೆ.

ಕಾರ್ತಿಕ್ ತೀಡಾ ಅವರ ಜೊತೆ ಸಾಯಿ ಪಲ್ಲವಿ ಅವರು ಮಾತುಕತೆ ನಡೆಸುತ್ತಿದ್ದಾರೆ. ಸದ್ಯ ಎಲ್ಲವೂ ಫೈನಲ್ ಆಗುವ ಹಂತದಲ್ಲಿ ಇದೆ. ತೆಲುಗಿನಲ್ಲಿ ಸಾಯಿ ಪಲ್ಲವಿ ಅವರು ಈ ಮೊದಲು 'ಫಿದಾ', 'ಎಂಸಿಎ' ಹಾಗೂ 'ಲವ್ ಸ್ಟೋರಿ' ಚಿತ್ರಗಳಲ್ಲಿ ನಟಿಸಿದ್ದರು.

ಕಾರ್ತಿಕ್ ತೀಡಾ ಅವರು ಸಹಾಯಕ ನಿರ್ದೇಶಕರಾಗಿ ಕೃಷ್ಣ ವಂಶಿ ಬಳಿ ಕೆಲಸ ಮಾಡಿದ್ದರು. ಈಗ ಅವರು ಪೂರ್ಣ ಪ್ರಮಾಣದ ನಿರ್ದೇಶಕರಾಗುತ್ತಿದ್ದಾರೆ. ಮೊದಲ ಸಿನಿಮಾದಲ್ಲೇ ಖ್ಯಾತ ನಟಿಯ ಕಾಲ್‌ಶೀಟ್ ಸಿಕ್ಕಿದ್ದು ಅವರಿಗೆ ಖುಷಿ ನೀಡಿದೆ. ಸಾಯಿ ಪಲ್ಲವಿ ಅವರ ಮುಂದಿನ ಚಿತ್ರವನ್ನು ಅನ್ನಪೂರ್ಣ ಸ್ಟುಡಿಯೋ ನಿರ್ಮಾಣ ಮಾಡಲಿದೆ ಎನ್ನಲಾಗಿದೆ. ಈ ಬಗ್ಗೆ ಶೀಘ್ರವೇ ಘೋಷಣೆ ಆಗುವ ನಿರೀಕ್ಷೆ ಇದೆ. ದೊಡ್ಡ ಮಟ್ಟದಲ್ಲಿ ಚಿತ್ರ ರಿಲೀಸ್ ಆಗಲಿದೆ.

ಇತ್ತೀಚೆಗೆ ರಿಲೀಸ್ ಆದ 'ಅಮರನ್' ಚಿತ್ರ ಸೂಪರ್ ಹಿಟ್ ಆಯಿತು. ಶಿವಕಾರ್ತಿಕೇಯ ಹಾಗೂ ಸಾಯಿ ಪಲ್ಲವಿ ನಟನೆಯ ಈ ಚಿತ್ರವನ್ನು ಜನರು ಇಷ್ಟಪಟ್ಟರು. ಬಾಕ್ಸ್ ಆಫೀಸ್‌ನಲ್ಲಿ ಒಳ್ಳೆಯ ಗಳಿಕೆ ಮಾಡಿದ ಈ ಚಿತ್ರ ಒಟಿಟಿಯಲ್ಲೂ ಸದ್ದು ಮಾಡಿದೆ. ಸಾಯಿ ಪಲ್ಲವಿ ಅವರು ಸದ್ಯ ಬಾಲಿವುಡ್ ಕದ ತಟ್ಟಿದ್ದಾರೆ. ಹಿಂದಿಯ 'ರಾಮಾಯಣ' ಚಿತ್ರದಲ್ಲಿ ಸೀತೆಯ ಪಾತ್ರ ಮಾಡುತ್ತಿದ್ದಾರೆ.

# ಬಾಕ್ಸ್ ಆಫೀಸ್ ರಾಣಿ ಮಂದಣ್ಣ

ಕನ್ನಡದ ಕಿರಿಕ್ ಪಾರ್ಟಿ ಸಿನಿಮಾದಿಂದ ಸಿನಿರಂಗಕ್ಕೆ ಎಂಟ್ರಿ ಕೊಟ್ಟ ರಶ್ಮಿಕಾ ಮಂದಣ್ಣ ಪ್ಯಾನ್ ಇಂಡಿಯಾ ಲೆವೆಲ್‌ನಲ್ಲಿ ಈಗ ಬ್ಯುಸಿಯಾಗಿರುವ ನಟಿ, ಟೀಕಿಸುವವರಿಗೆ ನಗುವಿನಿಂದಲೇ ಉತ್ತರ ಕೊಡುವ ಈ ನಟಿ ಕಾಲೆಳೆಯುವವರ ನಡುವೆಯೇ ಮೇಲೆದ್ದು, ಯಾರೂ ತಲುಪಲಾರದಷ್ಟು ಎತ್ತರಕ್ಕೆ ಬೆಳೆದು ನಿಂತಿದ್ದಾರೆ. ಇವರು ತಮಿಳಿನಲ್ಲೂ ಎರಡು ಸಿನಿಮಾಗಳಲ್ಲಿ ನಟಿಸಿದ್ದಾರೆ. ಅದರಲ್ಲಿ ಒಂದು ದಳಪತಿ ವಿಜಯ್ ಜೊತೆ. ಆ ಎರಡೂ ಸಿನಿಮಾಗಳು ಚೆನ್ನಾಗಿ ಕಲೆಕ್ಷನ್ ಮಾಡಿವೆ.

ಬಾಲಿವುಡ್ ಮತ್ತು ಟಾಲಿವುಡ್‌ನಲ್ಲಿ ಬ್ಯುಸಿಯಾಗಿರೋ ರಶ್ಮಿಕಾ ಮಂದಣ್ಣ ಕೈಯಲ್ಲಿ ಅರ್ಧ ಡಜನ್ ಸಿನಿಮಾಗಳಿವೆ. ಹೀಗಾಗಿ ಅವರಿಗೆ ಭಾರೀ ಡಿಮ್ಯಾಂಡ್ ಇದೆ. ಈ ನಟಿ ಮೊದಲ ಸಿನಿಮಾದಲ್ಲೇ ಗೆಲುವು ಕಂಡು, ಆ ಸಿನಿಮಾದ ಹೀರೋನನ್ನೇ ಪ್ರೀತಿಸಿದ ವಿಚಾರ ಎಲ್ಲರಿಗೂ ಗೊತ್ತು.

ಆ ಪ್ರೀತಿ ಸಕ್ಸಸ್ ಆಗಿ, ಮನೆಯವರ ಒಪ್ಪಿಗೆಯೊಂದಿಗೆ ನಿಶ್ಚಿತಾರ್ಥವೂ ಆಯಿತು. ಆದರೆ ಮದುವೆಯಿಂದ ಕೆರಿಯರ್‌ಗೆ ತೊಂದರೆಯಾಗಬಹುದೆಂದು ಮದುವೆಯನ್ನೇ ನಿಲ್ಲಿಸಿಬಿಟ್ಟರು. ಈ ನಿರ್ಧಾರ ಅವರ ಸಿನಿಮಾ ಜೀವನದಲ್ಲಿ ದೊಡ್ಡ ತಿರುವು ನೀಡಿತು. ಈ ಮದುವೆ ಮುರಿದ ಕಾರಣಕ್ಕೆ ಕನ್ನಡಿಗರ ಕಣ್ಣಿಗೆ ವಿಲನ್ ಆದವರು ರಶ್ಮಿಕಾ. ಆದರೆ ರಶ್ಮಿಕಾ ನಿರ್ಧಾರ ಅವರ ಪಾಲಿಗೆ ಸರಿಯಾಗಿಯೇ ಇದ್ದು, ಇಂದು ನಿರ್ದೇಶಕರು ಕ್ಯೂ ನಿಲ್ಲುವಷ್ಟು ಬ್ಯುಸಿಯಾಗಿದ್ದಾರೆ ರಶ್ಮಿಕಾ.

ಮದುವೆ ಮುರಿದ ನಂತರ ನಟಿಸಿದ ಸಿನಿಮಾಗಳೆಲ್ಲ ಹಿಟ್ ಆಗಿ, ಲಕ್ಕಿ ನಟಿ ಅನ್ನಿಸಿಕೊಂಡ ರಶ್ಮಿಕಾ, ಸತತವಾಗಿ 3 ಪ್ಯಾನ್ ಇಂಡಿಯಾ ಹಿಟ್ ಸಿನಿಮಾಗಳನ್ನು ನೀಡಿದ್ದಾರೆ. ಈ ಮೂರು ಸಿನಿಮಾಗಳು ಬಾಕ್ಸ್ ಆಫೀಸ್‌ನಲ್ಲಿ 3000 ಕೋಟಿಗೂ ಹೆಚ್ಚು ಕಲೆಕ್ಷನ್ ಮಾಡಿವೆ.

ಈ ಮೂರು ಸಿನಿಮಾಗಳಲ್ಲೂ ರಶ್ಮಿಕಾ ಪಾತ್ರ ಕೇವಲ ಶೇ.20ರಷ್ಟು ಮಾತ್ರ. ಆದರೂ ಜನಮನ ಗೆದ್ದಿದ್ದಾರೆ. 2023 ಮತ್ತು 2024ರಲ್ಲಿ ನಟಿಸಿದ ಈ ಮೂರು ಸಿನಿಮಾಗಳು ಬ್ಲಾಕ್‌ಬಸ್ಟರ್ ಹಿಟ್ ಆಗಿವೆ.

ರಶ್ಮಿಕಾ ನಟಿಸಿದ ಒಂದು ತಮಿಳು, ಒಂದು ಹಿಂದಿ, ಇನ್ನೊಂದು ತೆಲುಗು ಸಿನಿಮಾ ಹಿಟ್ ಆಗಿದೆ. ವಿಜಯ್ ಜೊತೆ ನಟಿಸಿದ 'ವಾರಿಸು' 310 ಕೋಟಿ, ರಣಬೀರ್ ಕಪೂರ್ ಜೊತೆ ನಟಿಸಿದ 'ಅನಿಮಲ್' 917 ಕೋಟಿ, ಅಲ್ಲು ಅರ್ಜುನ್ ಜೊತೆ ನಟಿಸಿದ 'ಪುಷ್ಪ 2' 1800 ಕೋಟಿಗೂ ಹೆಚ್ಚು ಕಲೆಕ್ಷನ್ ಮಾಡಿವೆ.

ರಶ್ಮಿಕಾ ನಟಿಸಿದ ಕೊನೆಯ ಮೂರು ಸಿನಿಮಾಗಳು ಭರ್ಜರಿ ಕಲೆಕ್ಷನ್ ಮಾಡಿರೋದ್ರಿಂದ ಅವರು ಬಾಕ್ಸ್ ಆಫೀಸ್ ರಾಣಿಯಾಗಿದ್ದಾರೆ. ಈ ನಡುವೆ ರಶ್ಮಿಕಾ ಮದುವೆ ಸುದ್ದಿ ಆಗಾಗ ಮುನ್ನೆಲೆಗೆ ಬರುತ್ತಿದ್ದು, ತೆಲುಗು ನಟ ವಿಜಯ್ ದೇವರಕೊಂಡ ಜೊತೆ ಡೇಟಿಂಗ್ ಮಾಡ್ತಿದ್ದಾರೆ ಎಂಬ ಸುದ್ದಿ ಇದೆ.



# ಗಂಡನ ಬಿಟ್ಟು ಭಾರತಕ್ಕೆ ಪಿಂಕಿ ಬಂದಿದ್ಯಾಕೆ?

ನಟಿ ಪ್ರಿಯಾಂಕಾ ಚೋಪ್ರಾ ಬಗ್ಗೆ ಹೊಸದಾಗಿ ಹೇಳೋದೇನಿಲ್ಲ! ದಶಕಗಳ ಹಿಂದೆ ಬಾಲಿವುಡ್ ಸ್ಟಾರ್ ನಟಿಯಾಗಿದ್ದವರು ಪ್ರಿಯಾಂಕಾ. 2018ರಲ್ಲಿ ಅಮೆರಿಕಾದ ಪಾಪ್ ಸಿಂಗರ್ ನಿಕ್ ಜೊನಾಸ್ ಜೊತೆ ಮದುವೆ ಮಾಡಿಕೊಂಡು, ಬಾಲಿವುಡ್‌ನಿಂದ ಮರೆಯಾದರು. ಸ್ವಲ್ಪ ವರ್ಷಗಳ ಗ್ಯಾಪ್ ಬಳಿಕ ನಟಿ ಪ್ರಿಯಾಂಕಾ ಚೋಪ್ರಾ ಅವರು ಹಾಲಿವುಡ್ ಸಿನಿಮಾ ಹಾಗೂ ವೆಬ್ ಸಿರೀಸ್‌ನಲ್ಲಿ ನಟಿಸತೊಡಗಿದರು.

ಭಾರತದಲ್ಲಿ ಸಾಕಷ್ಟು ಆಫರ್ಸ್ ಕೊಟ್ಟರೂ ಅದ್ಯಾಕೋ ಅವರು ಇಲ್ಲಿನ ಚಿತ್ರಗಳಿಗೆ ಸಹಿ ಹಾಕಿರಲೇ ಇಲ್ಲ.

ಆದರೆ, ಈಗ ನಟಿ ಪ್ರಿಯಾಂಕಾ ಚೋಪ್ರಾ ಅವರು ಮನಸ್ಸು ಬದಲಾಯಿಸಿದ್ದಾರೆ ಎನ್ನಬಹುದು. ಈ ಮೊದಲು ಗಂಡ ನಿಕ್ ಜೊನಾಸ್ ಬಿಟ್ಟು ಅಮೆರಿಕಾದಿಂದ ಭಾರತಕ್ಕೆ ಬಂದು ಶೂಟಿಂಗ್‌ನಲ್ಲಿ ಭಾಗವಹಿಸಲಾರೆ ಎಂದಿದ್ದ ಪ್ರಿಯಾಂಕಾ, ಈಗ ಬಾಲಿವುಡ್ ಹಾಗೂ ಟಾಲಿವುಡ್ ಸಿನಿಮಾಗಳಿಗೆ ಸಹಿ ಹಾಕಿದ್ದಾರೆ.

ಹಾಲಿವುಡ್‌ನಲ್ಲಿ ಎರಡು ಸಿನಿಮಾಗಳಲ್ಲಿ ಹಾಗೂ ವೆಬ್ ಸಿರೀಸ್‌ನಲ್ಲಿ ನಟಿಸಿ ಅಲ್ಲಿ ಕೂಡ ಹೆಸರು ಮಾಡುತ್ತಿದ್ದಾರೆ ಪ್ರಿಯಾಂಕಾ ಚೋಪ್ರಾ. ಆದರೆ, ತವರುಮನೆ ಭಾರತವನ್ನೂ ಬಿಡಲಾರೆ ಎಂದು ಓಥ ಘೋಷಣೆ ಮಾಡಿದ್ದಾರೆ ಎನ್ನಬಹುದೇ?

ಹೌದು, ನಟಿ ಪ್ರಿಯಾಂಕಾ ಚೋಪ್ರಾ ಅವರು ಬಾಲಿವುಡ್ ಸಿನಿಮಾಗಳಿಗೆ ಕೂಡ ಡೇಟ್ಸ್ ಕೊಟ್ಟಿದ್ದಾರೆ. ಝೋಯಾ ಅಖ್ತರ್ ನಿರ್ದೇಶನ ಮಾಡಲಿರುವ ಸಿನಿಮಾದಲ್ಲಿ ಆಲಿಯಾ ಭಟ್, ಕರೀನಾ ಕಪೂರ್ ಅವರುಗಳ ಜೊತೆಗೆ ಸಿನಿಮಾ ಒಂದರಲ್ಲಿ ಪ್ರಿಯಾಂಕಾ ಚೋಪ್ರಾ ನಟಿಸಲಿದ್ದಾರೆ.

ಹಿಂದಿಯ ಇನ್ನೊಂದು ಸಿನಿಮಾ ಮಾತುಕಥೆ ಕೂಡ ನಡೆಯುತ್ತಿದೆ ಎನ್ನಲಾಗಿದೆ. ಇದೀಗ, ಟಾಲಿವುಡ್ ಕಡೆ ಕೂಡ ಪ್ರಿಯಾಂಕಾ ಚೋಪ್ರಾ ಮುಖ ಮಾಡಿರುವುದು ಹೆಚ್ಚುಕಡಿಮೆ ಪಕ್ಕಾ ಆಗಿದೆ.

ಇನ್ನು, ನಟಿ ಪ್ರಿಯಾಂಕಾ ಚೋಪ್ರಾ ಕೈನಲ್ಲಿರುವ ಸಿನಿಮಾಗಳ ಬಗ್ಗೆ ಹೇಳಬೇಕೆಂದರೆ, ಸದ್ಯ ಎರಡು ಹಾಲಿವುಡ್ ಪ್ರಾಜೆಕ್ಟ್‌ಗಳಲ್ಲಿ ಈ ನಟಿ ಬ್ಯುಸಿಯಾಗಿದ್ದಾರೆ. ಒಂದು ಆಕ್ಷನ್ ವೆಬ್ ಸೀರೀಸ್, ಮತ್ತೊಂದು ರೊಮ್ಯಾಂಟಿಕ್ ಕಾಮಿಡಿ ಸಿನಿಮಾ. ಇವುಗಳ ಜೊತೆ ಝೋಯಾ ಅಖ್ತರ್ ನಿರ್ದೇಶನ ಮಾಡಲಿರುವ ಸಿನಿಮಾದಲ್ಲಿ ಆಲಿಯಾ ಭಟ್, ಕರೀನಾ ಕಪೂರ್ ಅವರುಗಳ ಜೊತೆಗೆ ಸಿನಿಮಾ ಒಂದರಲ್ಲಿ ಪ್ರಿಯಾಂಕಾ ಚೋಪ್ರಾ ನಟಿಸಲಿದ್ದಾರೆ.

ಇದೀಗ, ಟಾಲಿವುಡ್ ವಿಶ್ವಪ್ರಸಿದ್ಧ ನಿರ್ದೇಶಕರು, ಆರ್‌ಆರ್‌ಆರ್ ಸಿನಿಮಾ ಖ್ಯಾತಿಯ ಎಸ್ ರಾಜಮೌಳಿ ಸಿನಿಮಾಗೆ ನಟಿ ಪ್ರಿಯಾಂಕಾ ಚೋಪ್ರಾ ಸಹಿ ಮಾಡಿದ್ದಾರೆ ಎನ್ನಲಾಗುತ್ತಿದೆ. ರಾಜಮೌಳಿಯ ಮುಂದಿನ ಸಿನಿಮಾದಲ್ಲಿ ಪ್ರಿಯಾಂಕಾ ಚೋಪ್ರಾ ನಾಯಕಿಯಂತೆ. ಅದೇ ಸಿನಿಮಾದ ಕಾರಣಕ್ಕಾಗಿ ಈಗ ಪ್ರಿಯಾಂಕಾ ಚೋಪ್ರಾ ಹೈದರಾಬಾದ್‌ಗೆ ಬಂದಿಳಿದಿದ್ದಾರೆ. ಇದಕ್ಕೆ ಸಾಕ್ಷಿ ಎಂಬಂತೆ, ಕೆಲ ದಿನಗಳ ಹಿಂದಷ್ಟೆ ರಾಜಮೌಳಿ ಹಾಗೂ ಮಹೇಶ್ ಬಾಬು ಅವರ ಹೊಸ ಸಿನಿಮಾದ ಮುಹೂರ್ತ ಕಾರ್ಯಕ್ರಮ ಹೈದರಾಬಾದ್‌ನಲ್ಲಿ ನೆರವೇರಿದೆ. ಈ ಸಿನಿಮಾದಲ್ಲಿ ನಾಯಕಿಯಾಗಿ ಪ್ರಿಯಾಂಕಾ ಚೋಪ್ರಾ ನಟಿಸುತ್ತಿದ್ದು, ಸಿನಿಮಾದ ಫೋಟೊಶೂಟ್‌ಗಾಗಿ ಈಗ ಅವರು ಹೈದರಾಬಾದ್‌ಗೆ ಬಂದಿದ್ದಾರೆ ಎನ್ನಲಾಗುತ್ತಿದೆ. ಮಹೇಶ್ ಬಾಬು-ರಾಜಮೌಳಿ ಸಿನಿಮಾದ ಚಿತ್ರೀಕರಣಕೆಲವೇ ದಿನಗಳಲ್ಲಿ ಪ್ರಾರಂಭವಾಗಲಿದ್ದು, ಅದಕ್ಕೆ ಮುಂಚೆ ಎಲ್ಲ ನಟರಿಗೂ ರಾಜಮೌಳಿ ತಾಲೀಮು ಮಾಡಿಸುತ್ತಿದ್ದಾರೆ ಎನ್ನಲಾಗಿದೆ. ಈ ಟ್ರೇನಿಂಗ್‌ನಲ್ಲಿ ಪಾಲ್ಗೊಳ್ಳಲು ನಟಿ ಪ್ರಿಯಾಂಕಾ ಇದೀಗ ಹೈದರಾಬಾದ್‌ಗೆ ಬಂದಿದ್ದಾರೆ. ಅಂತೂ ಇಂತೂ ಮತ್ತೆ ನಟಿ ಪ್ರಿಯಾಂಕಾ ಚೋಪ್ರಾ ಭಾರತೀಯ ಚಿತ್ರಗಳಲ್ಲಿ ನಟಿಸಲು ಮನಸ್ಸು ಮಾಡಿದ್ದಾರೆ. ಅವರ ಅಭಿಮಾನಿಗಳಿಗೆ ಖಂಡಿತ ಇದು ಖುಷಿ ಕೊಡುವ ಸಮಾಚಾರ!



# 'ರಾಶಿ' ಈಗ ಸಖತ್ ಬೋಲ್ಡ್



ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿದ್ದ ಮಿಥುನ ರಾಶಿ ಸೀರಿಯಲ್ (ನೆನಪಿದ್ಯಾ? ಶ್ರೀಮಂತ ಹಠವಾರಿ ಬ್ಯುಸಿನೆಸ್'ಮ್ಯಾನ್ ಮತ್ತು ಪಾಪದ ಹುಡುಗಿ ರಿಕ್ಷಾ ಓಡಿಸುವ ರಾಶಿಯ ಕಥೆ ಇದಾಗಿದ್ದು, ಇವರಿಬ್ಬರ ಜಗಳ, ಪ್ರೀತಿಯ ಕಥೆ ಸಿಕ್ಕಾಪಟ್ಟೆ ಜನಪ್ರಿಯತೆ ಪಡೆದಿತ್ತು. ಮಿಥುನ ರಾಶಿ ಬಳಿಕ ರಾಶಿ ಮತ್ತೆ ಕನ್ನಡದಲ್ಲಿ ಕಾಣಿಸಿಕೊಳ್ಳಲೇ ಇಲ್ಲ.

ರಾಶಿ ಪಾತ್ರದಲ್ಲಿ ನಟಿಸಿದ್ದ ನಟಿ ವೈಷ್ಣವಿ, ಸದ್ಯ ಇವರು ತಮ್ಮ ಸೋಶಿಯಲ್ ಮೀಡಿಯಾದಲ್ಲಿ ವೈಷ್ಣವಿ ವಿ ಕೌಂಡಿನ್ಯ ಎನ್ನುವ ಹೆಸರು ಬರೆದುಕೊಂಡಿದ್ದಾರೆ.

ಮಿಥುನ ರಾಶಿ ಬಳಿಕ ಒಂದಷ್ಟು ಕನ್ನಡ ಸೀರಿಯಲ್ ಗಳಲ್ಲಿ ಅತಿಥಿಯಾಗಿ ನಟಿಸಿದ್ದರು. ಆದರೆ ಯಾವುದೇ ಕನ್ನಡ ಸೀರಿಯಲ್ ನಲ್ಲಿ ಮತ್ತೆ ಪೂರ್ಣ ಪ್ರಮಾಣದ ನಾಯಕಿಯಾಗಿ ನಟಿಸಲೇ ಇಲ್ಲ. ಇಂದಿಗೂ ಸಹ ಕನ್ನಡಿಗರು ಅವರನ್ನು ವೈಷ್ಣವಿ ಎನ್ನುವ ಹೆಸರಿನ ಬದಲಾಗಿ, ರಾಶಿ ಎಂದೇ ಗುರುತಿಸಿಕೊಂಡಿದ್ದಾರೆ.

ವೈಷ್ಣವಿ ಸದ್ಯಕ್ಕಂತೂ ಪಕ್ಕದ ರಾಜ್ಯಗಳಲ್ಲೇ ಬ್ಯುಸಿಯಾಗಿದ್ದಾರೆ. ಅಂದ್ರೆ ಅವರು ತಮಿಳು, ತೆಲುಗು ಹಾಗೂ ಮಲಯಾಳಂ ಸೀರಿಯಲ್ ಗಳಲ್ಲೂ ಸಹ ನಟಿಸಿ ಸೈ ಎನಿಸಿಕೊಂಡಿದ್ದಾರೆ. ಕನ್ನಡದಲ್ಲಿ ಮಿಥುನರಾಶಿ, ಕಲರ್ಸ್ ತಮಿಳಿನಲ್ಲಿ ಉಳ್ಳೈತಿಲ್ ಅಲ್ಲೈತ, ಸೂರ್ಯ ಟಿವಿಯಲ್ಲಿ ಕಣ್ಣಲ್ ಪೂವು, ಸದ್ಯ ಝೀ ತೆಲುಗಿನಲ್ಲಿ ಸೀತಾರಾಮುಡಿ ಕಾಂತಮ್ ಎನ್ನುವ ಸೀರಿಯಲ್ ನಲ್ಲಿ ನಟಿಸುತ್ತಿದ್ದಾರೆ. ಹಾಗಾಗಿ ದಕ್ಷಿಣದ ಎಲ್ಲಾ ಭಾಷೆಗಳಲ್ಲಿ ವೈಷ್ಣವಿ ನಟಿಸಿದ್ದಾರೆ ಎನ್ನಬಹುದು.

ಇದೀಗ ವೈಷ್ಣವಿ ತಮ್ಮ ಸೋಶಿಯಲ್ ಮೀಡಿಯಾದಲ್ಲಿ ಒಂದಷ್ಟು ಫೋಟೊಗಳನ್ನು ಪೋಸ್ಟ್ ಮಾಡಿದ್ದು, ಇದರಲ್ಲಿ ವೈಷ್ಣವಿ ಸಖತ್ ಬೋಲ್ಡ್ ಆಗಿ ಕಾಣಿಸಿಕೊಂಡಿದ್ದಾರೆ. ಇಲ್ಲಿವರೆಗೆ ಸಿಂಪಲ್ ಲುಕ್ ನಲ್ಲಿ ಕಾಣಿಸಿಕೊಳ್ಳುತ್ತಿದ್ದ ವೈಷ್ಣವಿಯ ಈ ಲುಕ್ ನೋಡಿ ಜನ ಶಾಕ್ ಆಗಿದ್ದಾರೆ. ಸೀರೆಯುಟ್ಟರೂ ಸಹ ವೈಷ್ಣವಿ ತುಂಬಾನೆ ಹಾಟ್ ಆಗಿ ಕಾಣಿಸುತ್ತಿದ್ದಾರೆ.

ವೈಷ್ಣವಿ ಒಂದಷ್ಟು ಬ್ಲ್ಯಾಕ್ ಆಂಡ್ ವೈಟ್ ಫೋಟೊ, ಹಾಗೂ ಒಂದು ಕಲರ್ಸ್ ಫೋಟೊ ಅಪ್ ಲೋಡ್ ಮಾಡಿದ್ದಾರೆ. ಈ ಫೋಟೊದಲ್ಲಿ ವೈಷ್ಣವಿ ಬ್ಲೌಸ್ ಧರಿಸದೇ ಸೀರೆಯುಟ್ಟು, ಬರೀ ಸೀರೆಯಲ್ಲೇ ಮೈಮುಚ್ಚಿ ಪೋಸ್ ನೀಡಿದ್ದಾರೆ. ಜೊತೆಗೆ ತಮ್ಮ ಫೋಟೊ ಜೊತೆಗೆ ಇಟಭಡಿಚಿಭಿಟಿಐ ಣುಜ ಭಜಚಿಣಣಧಿ ಠಜಿ ತಿಂಟಚಿಟ್ಞಠಂಜ ಎಂದು ಬರೆದುಕೊಂಡಿದ್ದಾರೆ. ಜೊತೆಗೆ ತಮ್ಮ ಬ್ಲ್ಯಾಕ್ ಆಂಡ್ ವೈಟ್ ಫೋಟೊಗಳಿಗೆ ಗಿಟಣಚಿಂಜ ತುಭಿಫ ಎಂದು ಬರೆದುಕೊಂಡಿದ್ದಾರೆ. ಈ ಫೋಟೊಗಳನ್ನು ಅಭಿಮಾನಿಗಳು ಮೆಚ್ಚಿಕೊಂಡಿದ್ದಾರೆ. ಇನ್ನೂ ಕೆಲವರು ಹಾಟ್, ಬ್ಯೂಟಿ, ಫೈರ್ ಎಂದು ಕಾಮೆಂಟ್ ಮಾಡಿದ್ದಾರೆ.

# ಓಟಿಟಿ ಪ್ಲೇಯರ್‌ನಲ್ಲಿ 'ಮಾರಕಾಸ್ತ್ರ'!

ಮಾಲಾಶ್ರೀ ಬಹುದಿನಗಳ ನಂತರ ನಟಿಸಿದ್ದ 'ಮಾರಕಾಸ್ತ್ರ' ಸಿನಿಮಾ ಇದೀಗ ಓಟಿಟಿ ಪ್ಲೇಯರ್ ಎಂಬ ಓಟಿಟಿಯಲ್ಲಿ ಪ್ರಸಾರವಾಗುತ್ತಿದೆ. ಈ ಸಿನಿಮಾ ಕನ್ನಡ ಮತ್ತು ತೆಲುಗು ಭಾಷೆಯಲ್ಲಿ ತೆರೆಕಂಡು ಮೆಚ್ಚುಗೆ ಗಳಿಸಿತ್ತು.


ಸಿನಿಮಾ ತಂಡಗಳು ತಮ್ಮ ಸಿನಿಮಾವನ್ನು ಪ್ರೇಕ್ಷಕರು ತಲುಪಿಸಲು ವಿಭಿನ್ನ ದಾರಿಗಳನ್ನು ಕಂಡುಕೊಳ್ಳುತ್ತಲೇ ಇರುತ್ತವೆ. ಅದರ ಭಾಗವಾಗಿ 'ಮಾರಕಾಸ್ತ್ರ' ಚಿತ್ರತಂಡ ಓಟಿಟಿ ಪ್ಲೇಯರ್ ವೆಬ್‌ಸೈಟ್ ತಿತಿತಿ.ಠಣಣಠಿಟಚಿಥಿಜಡಿ.ಟಿ ನಲ್ಲಿ ಬಿಡುಗಡೆ ಮಾಡಿದ್ದು, ರೂ.99 ಪಾವತಿಸಿ ಸಿನಿಮಾ ನೋಡಬಹುದಾಗಿದೆ.

ಗುರುಮೂರ್ತಿ ಸುನಾಮಿ ನಿರ್ದೇಶನದ, ಕೋಮಲ ನಟರಾಜ್ ನಿರ್ಮಾಣದ ಈ ಚಿತ್ರದ ಮತ್ತೊಂದು ಪ್ರಮುಖ ಪಾತ್ರದಲ್ಲಿ ಹರ್ಷಿಕಾ ಪೂಣಚ್ಚ ನಟಿಸಿದ್ದಾರೆ. ಆನಂದ್ ಆರ್ಯ, ಮಾಧುರ್ಯ, ಅಯ್ಯಪ್ಪ ಶರ್ಮ, ಉಗ್ರಂ ಮಂಜು ತಾರಾಬಳಗದಲ್ಲಿದ್ದಾರೆ.

ಕೋಮಲ ನಟರಾಜ್ ಅವರು ಶ್ರಾವ್ಯ ಕಂಬೈನ್ಸ್ ಮೂಲಕ ಮಾರಕಾಸ್ತ್ರ ಸಿನಿಮಾವನ್ನು ನಿರ್ಮಾಣ ಮಾಡಿದ್ದಾರೆ. ಗುರುಮೂರ್ತಿ ಸುನಾಮಿ ಅವರು ಕಥೆ ಬರೆದು ನಿರ್ದೇಶನ ಮಾಡಿದ್ದಾರೆ.

ಹೀರೋ ಆಗಿ ಆನಂದ್ ಆರ್ಯ ನಟಿಸಿದ್ದಾರೆ. ಅವರಿಗೆ ಮಾಧುರ್ಯ ಜೋಡಿಯಾಗಿದ್ದಾರೆ. ಇನ್ನೊಂದು ಪ್ರಮುಖ ಪಾತ್ರವನ್ನು ಮಾಲಾಶ್ರೀ ನಿಭಾಯಿಸಿದ್ದಾರೆ. ಹರ್ಷಿಕಾ ಪೂರ್ಣಚ್ಚ, ಅಯ್ಯಪ್ಪ ಶರ್ಮ, ಮೈಕೋ ನಾಗರಾಜ್, ಭರತ್ ಸಿಂಗ್, ಉಗ್ರಂ ಮಂಜು ಮುಂತಾದ ಕಲಾವಿದರು ಈ ಸಿನಿಮಾದ ತಾರಾಬಳಗದಲ್ಲಿದ್ದಾರೆ.

ದುಷ್ಟ ಶಕ್ತಿಗಳನ್ನು ಮಟ್ಟಹಾಕುವ ಶಕ್ತಿ ಪತ್ರಕರ್ತರ ಲೇಖನಿಗೆ ಇರುತ್ತದೆ. ಈ ವಿಷಯದ ಕುರಿತು ಸಿನಿಮಾ ಮೂಡಿಬಂದಿದೆ. ಮಿರಾಕಲ್ ಮಂಜು ಸಾಹಿತ್ಯ ಹಾಗೂ ಸಂಗೀತದ ಜವಾಬ್ದಾರಿ ನಿಭಾಯಿಸಿದ್ದಾರೆ. ಆರ್.ಕೆ. ಶಿವಕುಮಾರ್ ಅವರು ಛಾಯಾಗ್ರಹಣ ಮಾಡಿದ್ದಾರೆ.



# ಕಷ್ಟದಲ್ಲಿದ್ದಾಗ ನಿಂತಿದ್ದು ಇವರೇ

## ಅಮೃತಾ ಅಯ್ಯಂಗಾರ್

ಲವ್ ಮಾಕ್ಟೇಲ್ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪರಿಚಯವಾದ ಅಮೃತಾ ಅಯ್ಯಂಗಾರ್ ಕನ್ನಡದ ಕರೀನಾ ಕಪೂರ್ ಎಂದೇ ಹೆಸರು ಪಡೆದಿದ್ದಾರೆ.

ಬ್ಯಾಕ್ ಟು ಬ್ಯಾಕ್ ಸೂಪರ್ ಹಿಟ್ ಸಿನಿಮಾಗಳನ್ನು ನೀಡಿದ ಅಮೃತಾ ಪಕ್ಕಾ ಮಿಡಲ್ ಕ್ಲಾಸ್ ಹುಡುಗಿ. ಯಾವುದೇ ಅಹಂ ಇಲ್ಲದೆ ಸಿಂಪಲ್ ಸುಂದರಿಯಾಗಿ ಮಿಂಚುತ್ತಿದ್ದಾರೆ. ಸಿನಿಮಾ ಇಂಡಸ್ಟ್ರಿಯಲ್ಲಿ ಸಿಕ್ಕಾಪಟ್ಟೆ ಫ್ರೆಂಡ್ಸ್ ಹೊಂದಿರುವ ಅಮೃತಾ ಎಂದೆಂದಿಗೂ ಮಿಲನಾ ನಾಗರಾಜ್‌ನ ಮರೆಯುವುದಿಲ್ಲ ಎಂದಿದ್ದಾರೆ.

'ನನ್ನನ್ನು ನಾನಾಗಿ ಒಪ್ಪಿಕೊಳ್ಳುವ ಜನರು ಬೇಕು. ಸಿನಿಮಾ ಚೆನ್ನಾಗಿ ಆಗಿದೆ ಅಂತ ಕಾಲ್ ಮಾಡುವವರು ಬೇಡ, ಚೆನ್ನಾಗಿ ಆಗಿಲ್ಲ ಅಂದ್ರೂ ತಲೆ ಕೆಡಿಸಿಕೊಳ್ಳಬೇಡ ಆರಾಮ್ ಆಗಿ ಮಾಡು ಅಂತ ಧೈರ್ಯ ಹೇಳುವ ಫ್ರೆಂಡ್ಸ್ ಬೇಕು ಎಂದಿರುವ ಅಮೃತಾ, ಯಶಸ್ಸಿನಲ್ಲಿ ಬರುವವರು ನಮ್ಮ ಜೊತೆ ಇರುವುದಿಲ್ಲ, ಬರ್ತಾರೆ ಬಿಟ್ಟು ಹೋಗ್ತಾರೆ. ಆ ತರ ಫ್ರೆಂಡ್ಸ್‌ನ ಮಾಡಿಕೊಳ್ಳುವುದು ಇಲ್ಲ. ಅತ್ರನೂ ಬಿಟ್ಟುಕೊಳ್ಳಲ್ಲ ಎಂದಿದ್ದಾರೆ.

ನಾನು ಕಷ್ಟದಲ್ಲಿ ಇದ್ದಾಗ ಮಿಲನಾ ಮತ್ತು ಕೃಷ್ಣ ನನ್ನ ಪರ ತುಂಬಾ ನಿಂತುಕೊಂಡರು. ಮಿಲನಾ ನಾಗರಾಜ್ ನನಗೆ ಸಹೋದರಿ ಆಗಿಬಿಟ್ಟಿದ್ದಾರೆ. ನನ್ನ ಮತ್ತು ಅವರ ಸಂಬಂಧಗಳ ಬಗ್ಗೆಯೂ ಅನೇಕ ವದಂತಿಗಳೂ ಹಬ್ಬಿದ್ದವೂ ಇದಕ್ಕೆಲ್ಲ ವಿ ಆರ್ ಡೋಂಟ್ ಮೈಂಡ್ ಎಂದರು.

ನನ್ನ ಬಗ್ಗೆ ಎಷ್ಟೋ ಮಂದಿ ಏನೇನೋ ಟ್ರೋಲ್ ಮಾಡಿದರು. ನನ್ನ ಎಲ್ಲ ಕಷ್ಟ ಸಮಯದಲ್ಲೂ ಜತೆ ನಿಂತವರು ಮಿಲನ ನಾಗರಾಜ್ ಅಂಡ್ ಕೃಷ್ಣ ಮಾತ್ರ. ಗಾಸಿಪ್‌ಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಡ ಜಸ್ಟ್ ಮೂವ್ ಆನ್ ಎಂದು ನನಗೆ ಸ್ಫೂರ್ತಿ ತುಂಬಿದವರು ಅವರು ಎಂದರು.

ಫೈನ್ಯಾಶಿಯಲ್ ಸೆಕ್ಯೂರಿಟಿ ತಪ್ಪು ಮಾಡಿಕೊಂಡವರನ್ನು ನಾನು ತುಂಬಾ ಜನರನ್ನು ನೋಡಿಬಿಟ್ಟಿದ್ದೀನಿ. ಹಣ ಕಾಸು ತುಂಬಾನೇ ಮುಖ್ಯ ಆದರೆ ನಮ್ಮ ಮನಸ್ಸು ಮತ್ತು ತಲೆಯಲ್ಲಿ ಏನಿದೆ? ತೋರಿಸಿಕೊಳ್ಳಬೇಕು ತೋರಿಸಿಕೊಳ್ಳಬೇಕು ಅಂತನೇ ಇದ್ರೆ ನಾವು ಹಾಗೆ ಹೋಗ್ಬಿಡುತ್ತೀವಿ ಎಂದು ಅವರು ಮನದಾಳದ ಮಾತನ್ನು ಹಂಚಿಕೊಂಡರು.

ಒಂದು ಮದುವೆಗೆ ಹೋಗುತ್ತಿದ್ದೀವಿ.. ಅಲ್ಲಿ ಮೈಸೂರು ಸಿಲ್ಕ್ ಸೀರೆ ಹಾಕಿಕೊಳ್ಳಬೇಕು ಅಂದಕ್ಕೆ ಮ್ಯಾಚ್ ಆಗುವ ಡೈಮೆಂಡ್ ಸರ, ರಿಂಗ್. ವಾಚ್.. ಹೀಗೆ ಎಲ್ಲಾ ಹಾಕಿಕೊಳ್ಳಬೇಕು ಅನ್ನೋ ಯೋಚನೆಯಲ್ಲಿ ಇದ್ರೆ ಏನೂ ಉಪಯೋಗ ಇಲ್ಲ ಯಾಕೆ ಅಂದ್ರೆ ಅವತ್ತು ನೋಡ್ಕೊಂಡು ಹೋಗ್ತಾರೆ ಅಷ್ಟೇ ಯಾರು ಕೇರ್ ಮಾಡುವುದಿಲ್ಲ. ಎಲ್ಲರ ಜೀವನದಲ್ಲೂ ಒಂದೊಂದು ನಡೆಯುತ್ತಿರುತ್ತದೆ ಎಂದು ಅಮೃತಾ ಹೇಳಿದ್ದಾರೆ.



ಪ್ರಕಾಶಕ- ಸಂಪಾದಕ ಹಾಗೂ ಮಾಲೀಕ ಲಕ್ಷ್ಮೀಪ್ರಸನ್ನ ಆರ್.ಹೆಚ್. ಅವರಿಂದ #1652/6, 20ನೇ ತಿರುವು, 8ನೇ ಮುಖ್ಯರಸ್ತೆ, ಸಿ ಬ್ಲಾಕ್, ಸಹಕಾರ ನಗರ, ಬೆಂಗಳೂರು-560092 ಇಲ್ಲಿ ಪ್ರಕಟಗೊಂಡು, ಮುದ್ರಣ: ಪಿ.ಎನ್.ಪ್ರಿಂಟರ್ಸ್, ನರಸಿಪಾಳ್ಯ, ಅರಿಶಿಣಕುಂಟೆ(ಪೋ.), ನೆಲಮಂಗಲ, ಬೆಂಗಳೂರು-562123 ಇಲ್ಲಿ ಮುದ್ರಿಸಲ್ಪಟ್ಟಿದೆ. **RNI.KAR/KAN/2009/31934,** ದೂರವಾಣಿ: **9448074878**
Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
**RNI.KAR/KAN/2009/31934.**VOLUME-16/ISSUE-53 Email-mussanje2010@gmail.com, Phone: **9448074878**